

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 22 ಬುಧವಾರ 2026



ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

47

ಸಂಪುಟ: 47 | ಸಂಚಿಕೆ: 7 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಹಿಂದಿ ವಿಷಯದಲ್ಲಿ ಸರ್ಕಾರ ಫೇಲ್!

● ಗ್ರೇಡ್ ಬದಲು ಅಂಕ ನೀಡುವಂತೆ ಹೈಕೋರ್ಟ್ ಮಹತ್ವದ ಆದೇಶ ● ಎಸ್‌ಎಸ್‌ಎಲ್‌ಸಿ ಫಲಿತಾಂಶ ಮತ್ತಷ್ಟು ವಿಳಂಬ ● ಮುಂದಿನ ವರ್ಷ ಬೇಕಿದ್ದರೆ ಬದಲಿಸಿಕೊಳ್ಳಿ

ಬೆಂಗಳೂರು, ಏ.21(ಕೆಎಂಶಿ)– ಹಿಂದಿ ಸೇರಿದಂತೆ ಎಸ್‌ಎಸ್‌ಎಲ್‌ಸಿ ತೃತೀಯ ಭಾಷೆ ಪರೀಕ್ಷೆಯಲ್ಲಿ ಗ್ರೇಡ್ ಬದಲಿಗೆ ಅಂಕ ನೀಡುವ ಪದ್ಧತಿಯನ್ನೇ ಮುಂದುವರೆಸುವಂತೆ ರಾಜ್ಯ ಹೈಕೋರ್ಟ್ ಇಂದಿಲ್ಲಿ ಮಹತ್ವದ ಆದೇಶ ನೀಡಿದೆ.

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶವನ್ನು ಏಪ್ರಿಲ್ 24ಕ್ಕೆ ಪ್ರಕಟಿಸಲು ಸಿದ್ಧತೆ ನಡೆಸಿತ್ತು.

ನ್ಯಾಯಾಲಯದ ಈ ಆದೇಶದ ಹಿನ್ನೆಲೆಯಲ್ಲಿ ಫಲಿತಾಂಶ ಇನ್ನಷ್ಟು ವಿಳಂಬವಾಗುವ ಸಾಧ್ಯತೆ ಇದೆ.

ಗ್ರೇಡ್ ಬದಲಿಗೆ ಅಂಕ ನೀಡುವ ಆದೇಶವನ್ನು ಮರುಪರಿಶೀಲಿಸುವಂತೆ ಕೋರಿ ರಾಜ್ಯ ಸರ್ಕಾರ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಇ.ಎಸ್.ಇಂದಿರೇಶ್, ಪ್ರಸಕ್ತ ಶೈಕ್ಷಣಿಕ ಸಾಲಿಗೆ ಅಂಕ ಪದ್ಧತಿಯನ್ನೇ ಮುಂದುವರೆಸುವಂತೆ ಸೂಚಿಸಿದೆ.

ಸರ್ಕಾರದ ನಿಲುವಿನ ಬಗ್ಗೆ ಕಿಡಿಕಾರಿದ ಪೀಠ, ಹಿಂದಿ ಭಾಷೆಯಲ್ಲಿ ಒಂದು ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಅನುತ್ತೀರ್ಣ ಆಗುತ್ತಾರೆ ಎಂಬ ಕಾರಣಕ್ಕೆ ಅಂಕ ಬದಲಿಗೆ ಗ್ರೇಡ್ ನೀಡುವುದು ಸರಿಯಲ್ಲ. ಹಾಗಿದ್ದರೆ, ಪರೀಕ್ಷೆ ಬರೆದ ಎಲ್ಲರನ್ನೂ ತೇರ್ಗಡೆ ಮಾಡಿ ಎಂದು ಖಾರವಾಗಿ ಹೇಳಿತು.

ಎಸ್‌ಎಸ್‌ಎಲ್‌ಸಿ ಪರೀಕ್ಷಾ ವೇಳಾಪಟ್ಟಿ ಪ್ರಕಟವಾಗುವುದಕ್ಕೂ ಮುನ್ನವೇ ಸರ್ಕಾರ ಸೂಕ್ತ ತಿದ್ದುಪಡಿ ನಿಯಮಗಳನ್ನು ರಚಿಸಿ ಪ್ರಕಟಿಸಬೇಕಿತ್ತು. ಆದರೆ, ಪರೀಕ್ಷೆ ಬರೆದ ವಿದ್ಯಾರ್ಥಿಗಳು ಫಲಿತಾಂಶಕ್ಕೆ ಕಾಯುವ ಸಮಯದಲ್ಲಿ ಸರ್ಕಾರದ ಈ ನಿರ್ಧಾರ



ಸರಿಯಲ್ಲ 2025–26ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದ ವಿದ್ಯಾರ್ಥಿಗಳಿಗೆ ಅಂಕ ನೀಡುವುದನ್ನೇ ■ 10ನೇ ಪುಟಕ್ಕೆ

ಇಂದು ಸರ್ಕಾರ ನಿರ್ಧಾರ

ಬೆಂಗಳೂರು: ಎಸ್‌ಎಸ್‌ಎಲ್‌ಸಿಯಲ್ಲಿ ತೃತೀಯ ಭಾಷೆ ಪರೀಕ್ಷೆ ಬರೆದ ವಿದ್ಯಾರ್ಥಿಗಳಿಗೆ ಅಂಕ ಪದ್ಧತಿಯನ್ನೇ ಮುಂದುವರೆಸುವಂತೆ ನ್ಯಾಯಾಲಯದ



ಆದೇಶ ಕುರಿತು ಮುಂದಿನ ತೀರ್ಮಾನವನ್ನು ನಾಳೆ(ಬುಧವಾರ) ಸರ್ಕಾರ ಕೈಗೊಳ್ಳಲಿದೆ.

ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಮಧು ಬಂಗಾರಪ್ಪ ಸುದ್ದಿಗಾರರೊಂದಿಗೆ ಮಾತನಾಡಿ, ಪ್ರವಾಸದಲ್ಲಿ ಇರುವ ಮುಖ್ಯಮಂತ್ರಿ ಸಿದ್ದರಾಮಯ್ಯ ನಗರಕ್ಕೆ ಹಿಂತಿರುಗಿದ ನಂತರ ಚರ್ಚಿಸಿ ನಿರ್ಧಾರ ಕೈಗೊಳ್ಳುವುದಾಗಿ ತಿಳಿಸಿದರು. ನ್ಯಾಯಾಲಯದ ಆದೇಶದಿಂದ ಫಲಿತಾಂಶ ಪ್ರಕಟಣೆ ವಿಳಂಬವಾಗಲಿದೆ. ಈ ಮೊದಲು ಹೈಕೋರ್ಟ್ ವಿಭಾಗೀಯ ಪೀಠ ನಮ್ಮ ಪರವಾಗಿ ಆದೇಶ ನೀಡಿತ್ತು. ಸರ್ಕಾರದ ನಿರ್ಧಾರ ಪ್ರಶ್ನಿಸಿದವರಿಗೆ ದಂಡ ವಿಧಿಸಲಾಗಿತ್ತು. ಮತ್ತೆ ಕೆಲವು ವಿದ್ಯಾರ್ಥಿಗಳು ನ್ಯಾಯಾಲಯದ ಮೊರೆ ಹೋಗಿದ್ದರಿಂದ ಗ್ರೇಡ್ ಪದ್ಧತಿ ಬೇಡ, ಅಂಕ ಮುಂದುವರೆಸಿ ಎಂದು ಆದೇಶಿಸಿದೆ. ನ್ಯಾಯಾಲಯದ ತೀರ್ಪಿನ ಪೂರ್ಣ ವಿವರ ಲಭ್ಯವಾದ ನಂತರ ಚರ್ಚಿಸಿ, ನಿರ್ಧಾರ ಕೈಗೊಳ್ಳಲಾಗುವುದು ಎಂದರು.

ಆಕ್ಸಿಜನ್ ದುರಂತ

ಸಂತ್ರಸ್ತರಲ್ಲಿ 25 ಮಂದಿಗೆ ಸರ್ಕಾರಿ ಉದ್ಯೋಗ ನೇಮಕಾತಿ ಪತ್ರ ವಿತರಿಸಿದ ಸಿಎಂ, ಡಿಸಿಎಂ



ಗುಂಡ್ಲುಪೇಟೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಿಎಂ, ಡಿಸಿಎಂ ಸಂತ್ರಸ್ತರಿಗೆ ನೇಮಕಾತಿ ಪತ್ರ ವಿತರಿಸಿದರು.

ಚಾಮರಾಜನಗರ, ಏ.21(ಎಸ್‌ಎಸ್)– ಐದು ವರ್ಷಗಳ ಹಿಂದೆ ಕೋವಿಡ್ ಸಂದರ್ಭದಲ್ಲಿ ಜಿಲ್ಲಾ ಆಸ್ಪತ್ರೆಯಲ್ಲಿ ಆಮ್ಲಜನಕ ಕೊರತೆಯಿಂದ ಮೃತಪಟ್ಟವರ ಕುಟುಂಬಗಳ ಸದಸ್ಯರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸರ್ಕಾರಿ ಹುದ್ದೆಗಳ ನೇಮಕಾತಿ ಪತ್ರವನ್ನು ವಿತರಿಸಿದರು.

ಗುಂಡ್ಲುಪೇಟೆಯ ದೇವರಾಜ ಅರಸು ಕ್ರೀಡಾಂಗಣದಲ್ಲಿ ತಾಲೂಕಿನ ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ ಚಾಲನೆ ನೀಡುವ ಕಾರ್ಯಕ್ರಮದಲ್ಲಿ 25 ಮಂದಿಗೆ ನೇಮಕಾತಿ ಪತ್ರಗಳನ್ನು ಹಸ್ತಾಂತರ ಮಾಡಿದರು. ಸಿಮ್ಸ್ ಆಸ್ಪತ್ರೆಯ ಸ್ಟಾಫ್ ನರ್ಸ್‌ಗಳಾಗಿ ರಾಣಿ, ಸರಸ್ವತಿ ಹಾಗೂ ಬಿಲ್‌ಕೀಪಿಂಗ್ ಆಗಿ ಅರುಣ್‌ಕುಮಾರ್, ಸತ್ಯಭಾಮ, ಮಂಜುನಾಥ್, ನಾಗರತ್ನ, ಪೂರ್ಣಿಮಾ, ತ್ರಿವೇಣಿ ಅವರನ್ನು ನೇಮಿಸಲಾಗಿದೆ. ಉಳಿದಂತೆ ಶಶಾಂಕ, ನಾಗರತ್ನ, ನಂದಿನಿ, ಲಕ್ಷ್ಮೀ, ಆಶಾ, ಕಾವ್ಯಾ, ಪವಿತ್ರಾ, ರಾಘವ, ಜ್ಯೋತಿ, ಶ್ವೇತಾ, ಪವಿತ್ರಾ, ರಾಜಪ್ಪಾಜಿ, ಅಶ್ವಿನಿ, ಮನು, ನಂಜಶೆಟ್ಟಿ, ನಾಗೇಂದ್ರ ಸ್ವಾಮಿ ಸೇರಿದಂತೆ 17 ಮಂದಿಗೆ 'ಡಿ' ಗ್ರೂಪ್ ನೌಕರಿಯನ್ನು ನೀಡಲಾಗಿದೆ.

2021, ಮೇ 2ರಂದು ಜಿಲ್ಲಾ ಕೋವಿಡ್ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಾಗಿದ್ದ 34 ಮಂದಿ ಆಮ್ಲಜನಕ ಸಿಗದೆ ಧಾರುಣವಾಗಿ ಮೃತಪಟ್ಟಿದ್ದರು. ದುರ್ಘಟನೆ ನಡೆದಾಗ ಬಿಜೆಪಿ ಸರ್ಕಾರ ಅಧಿಕಾರದಲ್ಲಿತ್ತು. ಭಾರತ್ ಜೋಡೋ ಪಾದಯಾತ್ರೆಯ ■ 10ನೇ ಪುಟಕ್ಕೆ

ತಲಕಾಡಲ್ಲಿ ಕಾವೇರಿಯಲ್ಲಿ ಮುಳುಗಿ ವಿದ್ಯಾರ್ಥಿನಿಯರ ದುರ್ಮರಣ

● ಪ್ರವಾಸಕ್ಕೆ ಬಂದಿದ್ದ ವೇಳೆ ದುರಂತ: ಇಬ್ಬರು ಪಾರು; ಮತ್ತೋರ್ವ ವಿದ್ಯಾರ್ಥಿನಿ ಆಸ್ಪತ್ರೆಗೆ ದಾಖಲು ● ಕೆ.ಆರ್.ನಗರ, ಪಿರಿಯಾಪಟ್ಟಣ ಘಟನೆಗಳ ಬೆನ್ನಲ್ಲೇ ತಲಕಾಡಿನಲ್ಲಿ ಬೆಂಗಳೂರು ಮೂಲದ ಇಬ್ಬರು ಬಲಿ

ಮೈಸೂರು, ಏ.21(ಎಂಟಿವೈ)– ಇಬ್ಬರು ವಿದ್ಯಾರ್ಥಿನಿಯರು ನದಿಯ ಸುಳಿಗೆ ಸಿಲುಕಿ ಸಾವನ್ನಪ್ಪಿದ ಘಟನೆ ತಿ.ನರಸೀಪುರ ತಾಲೂಕಿನ ತಲಕಾಡಿನಲ್ಲಿ ಮಂಗಳವಾರ ಸಂಭವಿಸಿದೆ.

ಬೇಸಿಗೆ ರಜೆ ಹಿನ್ನೆಲೆಯಲ್ಲಿ ಪ್ರವಾಸಕ್ಕೆ ಬಂದಿದ್ದ ಬೆಂಗಳೂರು ಮೂಲದ ಇಬ್ಬರು ವಿದ್ಯಾರ್ಥಿನಿಯರು ತಲಕಾಡಿನ ನಿಸರ್ಗಧಾಮದಲ್ಲಿ ಕಾವೇರಿ ನದಿಯಲ್ಲಿ ಆಟವಾಡುವಾಗ ಸುಳಿಗೆ ಸಿಲುಕಿ ಮೃತಪಟ್ಟಿದ್ದು, ಮತ್ತೋರ್ವ ವಿದ್ಯಾರ್ಥಿನಿ ಸ್ಥಿತಿ ಗಂಭೀರವಾಗಿದೆ.

ಬೆಂಗಳೂರಿನ ಚಾಮರಾಜಪೇಟೆಯಲ್ಲಿರುವ ಆಕ್ಸಿಲಿಯಂ ನವಜೀವನ ಸ್ವಯಂ ಸೇವಾ ಸಂಸ್ಥೆಯ ವಿದ್ಯಾರ್ಥಿನಿಯರಾದ ರಮ್ಯ(16) ಹಾಗೂ ಚಾರ್ವಿ(12) ದುರಂತ ಸಾವಿಗೀಡಾಗಿದ್ದು, ಗಂಭೀರ ಸ್ಥಿತಿಯಲ್ಲಿರುವ ಸುಚಿತ್ರ(12)ಳನ್ನು ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಬೆಂಗಳೂರಿನ ಚಾಮರಾಜಪೇಟೆಯಲ್ಲಿರುವ ಆಕ್ಸಿಲಿಯಂ ನವಜೀವನ ಸಂಸ್ಥೆಯಲ್ಲಿ 6 ರಿಂದ 18 ವರ್ಷದೊಳಗಿನ ರಕ್ಷಿಸಲ್ಪಟ್ಟ ಹೆಣ್ಣು ಮಕ್ಕಳಿಗೆ ಆಶ್ರಯ ನೀಡಿ, ಶಿಕ್ಷಣದ ಜೊತೆಗೆ ಸ್ವಾವಲಂಬಿ ಜೀವನಕ್ಕಾಗಿ ವಿವಿಧ ತರಬೇತಿ ನೀಡಲಾಗುತ್ತದೆ. ಈ ಸಂಸ್ಥೆಯ 71 ಹೆಣ್ಣು ಮಕ್ಕಳನ್ನು ಮಂಗಳವಾರ ತಿ.ನರಸೀಪುರ ತಾಲೂಕಿನ ತಲಕಾಡು ನಿಸರ್ಗಧಾಮಕ್ಕೆ 9 ಶಿಕ್ಷಕರ ತಂಡ ಕರೆತಂದಿತ್ತು. ಬೆಳಗ್ಗೆ 11 ಗಂಟೆಗೆ ತಲಕಾಡು ತಲುಪಿದ ವಿದ್ಯಾರ್ಥಿನಿಯರು ನಿಸರ್ಗಧಾಮದಲ್ಲಿ ನೀರಿಗಿಳಿದಿದ್ದರು. ಪ್ರವಾಸಿಗರ ಸಂಖ್ಯೆ ಹೆಚ್ಚಾಗಿದ್ದರಿಂದ ವಿದ್ಯಾರ್ಥಿನಿಯರು ತಂಡಗಳಾಗಿ ಲಭ್ಯವಿರುವ ಸ್ಥಳದಲ್ಲಿ ಆಟವಾಡುತ್ತಿದ್ದರು. ಈ ವೇಳೆ ಐವರು ವಿದ್ಯಾರ್ಥಿನಿಯರು ನದಿಯಲ್ಲಿ ಆಕಸ್ಮಿಕವಾಗಿ ■ 10ನೇ ಪುಟಕ್ಕೆ

ರಾಜ್ಯ ಅಗ್ನಿಶಾಮಕ ತುರ್ತು ಸೇವೆಗಳ ಧ್ವಜ ದಿನಾಚರಣೆ



ಮೈಸೂರಿನ ಸರಸ್ವತಿಪುರಂ ಅಗ್ನಿಶಾಮಕ ಠಾಣೆಯ ಕವಾಯತು ಮೈದಾನದಲ್ಲಿ ರಾಜ್ಯ ಅಗ್ನಿಶಾಮಕ ತುರ್ತು ಸೇವೆಗಳ 'ಧ್ವಜ ದಿನಾಚರಣೆ' ಆಚರಿಸಲಾಯಿತು.

ಮೈಸೂರು,ಏ.21(ಎಂಕೆ)– ಮೈಸೂರಿನ ಸರಸ್ವತಿಪುರಂನಲ್ಲಿರುವ ಅಗ್ನಿಶಾಮಕ ಠಾಣೆಯ ಕವಾಯತು ಮೈದಾನದಲ್ಲಿ ಮೊದಲ ಬಾರಿಗೆ ಕರ್ನಾಟಕ ರಾಜ್ಯ ಅಗ್ನಿಶಾಮಕ ತುರ್ತು ಸೇವೆಗಳ 'ಧ್ವಜ ದಿನಾಚರಣೆ'ಯನ್ನು ಆಚರಿಸಲಾಯಿತು.

ಕಾರ್ಯಕ್ರಮ ಉದ್ಘಾಟಿಸಿದ ಕೀಲು ಮತ್ತು ಮೂಳೆರೋಗ ತಜ್ಞ ಡಾ.ಟಿ.ಮಧುಸೂದನ್ ಮಾತನಾಡಿ, ಅಗ್ನಿಶಾಮಕ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ–ಸಿಬ್ಬಂದಿ ಆರೋಗ್ಯದ ಬಗ್ಗೆ ಸದಾ ಕಾಳಜಿ ವಹಿಸಬೇಕು ಎಂದು ಸಲಹೆ ನೀಡಿದರು.

ಅಗ್ನಿ ಅವಘಡ ಸೇರಿದಂತೆ ಯಾವುದೇ ತುರ್ತು ಸಂದರ್ಭಗಳಲ್ಲಿ ಅಗ್ನಿಶಾಮಕ ಠಾಣೆ ಸಿಬ್ಬಂದಿ ಹಾಜರಾಗಲೇಬೇಕು. ದಿನದ 24 ಗಂಟೆಯೂ ಸೇವೆಯಲ್ಲಿ ತೊಡಗಿರುವ ಅಗ್ನಿಶಾಮಕ ಸಿಬ್ಬಂದಿಗಳು ತಮ್ಮ ಆರೋಗ್ಯದ ಕಡೆಗೂ ಗಮನ ಹರಿಸಬೇಕು. ಹಾಗಾಗಿ ವೈದ್ಯಕೀಯ ತಪಾಸಣೆಗಳನ್ನು ಮಾಡಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿ ಪಿ.ಚಂದನ್, ಜಿಲ್ಲಾ ಅಗ್ನಿಶಾಮಕ ಅಧಿಕಾರಿ ಕೆ.ಪಿ.ಗುರುರಾಜ್, ಹಾಸನ ಜಿಲ್ಲಾ ಅಗ್ನಿಶಾಮಕ ಅಧಿಕಾರಿ ಕೆ.ಪಿ.ನವೀನ್‌ಕುಮಾರ್, ಮಡಿಕೇರಿ ಜಿಲ್ಲಾ ಅಗ್ನಿಶಾಮಕ ಅಧಿಕಾರಿ ಚಂದ್ರಶೇಖರ ಭಂಡಾರಿ, ಕೆ.ಸಿ.ರಮೇಶ್, ಹೆಬ್ಬಾಳ ಅಗ್ನಿಶಾಮಕ ಠಾಣಾಧಿಕಾರಿ ಜಿ.ಲಕ್ಷ್ಮಿಕಾಂತ್ ಯಾದವ್, ಕೊಳ್ಳೇಗಾಲ ಅಗ್ನಿಶಾಮಕ ಠಾಣಾಧಿಕಾರಿ ಹರೀಶ್ ಇದ್ದರು.

ಮೈಸೂರಲ್ಲಿ ಶ್ರೀ ಶಂಕರಾಚಾರ್ಯರ ರಥಯಾತ್ರೆ



ಶ್ರೀ ಶಂಕರ ಜಯಂತಿ ಅಂಗವಾಗಿ ಮಂಗಳವಾರ ರಥಯಾತ್ರೆ ನಡೆಸಲಾಯಿತು.

ಮೈಸೂರು,ಏ.21–ಶ್ರೀ ಶಂಕರ ಜಯಂತಿ ಅಂಗವಾಗಿ ಚಾಮರಾಜಪುರಂನಲ್ಲಿರುವ ಶ್ರೀ ಪ್ರಸನ್ನ ವಿಶ್ವೇಶ್ವರಸ್ವಾಮಿ ದೇವಸ್ಥಾನದ ವತಿಯಿಂದ ಮೆರವಣಿಗೆಯನ್ನು ಹಮ್ಮಿಕೊಳ್ಳಲಾಗಿತ್ತು.

ಚಾಮರಾಜಪುರಂ, ಕೃಷ್ಣಮೂರ್ತಿಪುರಂ, ಲಕ್ಷ್ಮಿಪುರಂ ಮತ್ತು ಜಯನಗರ ಬಡಾವಣೆಯ ಮುಖ್ಯಬೀದಿಗಳಲ್ಲಿ ಸಾಗಿದ ಶ್ರೀಶಂಕರಾಚಾರ್ಯರ ರಥಯಾತ್ರೆಯಲ್ಲಿ ಪುರೋಹಿತರ ವೇದಬಳಗ, ಮಹಿಳಾ ಭಜನಾ ತಂಡ, ನಾದಸ್ವರ ಮಂಗಳ ವಾದ್ಯ ಗಮನಸೆಳೆಯಿತು.

ಶ್ರೀ ಶಂಕರ ರಥಯಾತ್ರೆಯಲ್ಲಿ ಮುಖಂಡರಾದ ಎಂ. ಎನ್.ಜಯರಾಂ, ಶ್ರೀಮಧು, ಮೋಹನ್, ವಿಕ್ರಂ ಅಯ್ಯಂಗಾರ್, ಅಜಯ್ ಶಾಸ್ತ್ರಿ, ಬಿಎನ್ ಜಯರಾಮ್, ನಂಜುಂಡಸ್ವಾಮಿ, ಮಂಜುನಾಥ್, ಮುರಳಿ ಇನ್ನಿತರರು ಇದ್ದರು.

ಏ.24ರಂದು ಡಾ.ರಾಜ್‌ಕುಮಾರ್, ಎಸ್.ಜಾನಕಮ್ಮ ಸಂಗೀತ ಸಂಜೆ

ಮೈಸೂರು, ಏ. 21– ಮೈಸೂರಿನ ನಕ್ಷತ್ರ ಅಕಾಡೆಮಿ ಆಫ್ ಆರ್ಟ್ಸ್ ವತಿಯಿಂದ ಮೋಹನ ಮಾಧುರ್ಯ ಅರ್ಪಿಸುವ ಡಾ.ರಾಜ್‌ಕುಮಾರ್ ಹಾಗೂ ಎಸ್.ಜಾನಕಮ್ಮನವರ ಸಂಗೀತ ಸಂಜೆ ಕಾರ್ಯಕ್ರಮವನ್ನು ಏ.24 ರಂದು ಸಂಜೆ 4ರಿಂದ ಕೃಷ್ಣಮೂರ್ತಿಪುರಂನ ಶಾರದಾವಿಲಾಸ ಶತಮಾನೋತ್ಸವ ಭವನದಲ್ಲಿ ಏರ್ಪಡಿಸಲಾಗಿದೆ. ಕಾರ್ಯಕ್ರಮದಲ್ಲಿ ವರನಟ ಡಾ.ರಾಜ್‌ಕುಮಾರ್ ಹಾಗೂ ಎಸ್.ಜಾನಕಮ್ಮ ಅವರ ಸುಪ್ರಸಿದ್ಧ ಗೀತೆಗಳನ್ನು ಹಿರಿಯ ಕಲಾವಿದರು, ಗಾಯಕರು ಸಂಗೀತ ಸಂಜೆ ಕಾರ್ಯಕ್ರಮದಲ್ಲಿ ಹಾಡಲಿದ್ದಾರೆ. ಕಾರ್ಯಕ್ರಮಕ್ಕೆ ಉಚಿತ ಪ್ರವೇಶವಿದ್ದು, ಕನ್ನಡಾಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ನಕ್ಷತ್ರ ಅಕಾಡೆಮಿ ಆಫ್ ಆರ್ಟ್ಸ್ ಹಾಗೂ ನಕ್ಷತ್ರ ಟ್ರಸ್ಟ್‌ನ ಸಂಸ್ಥಾಪಕ ಅಧ್ಯಕ್ಷೆ ಗಾಯಕಿ ಮೋಹನಕುಮಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.





ಡಾ.ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ



ಅಂಬೇಡ್ಕರ್ ಜಯಂತಿ ಅಂಗವಾಗಿ ಮೈಸೂರಿನ ಟೌನ್‌ಹಾಲ್ ಬಳಿ ಇರುವ ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಮಾಡಲಾಯಿತು. ಈ ವೇಳೆ ಮೈಸೂರು ಕನ್ನಡ ವೇದಿಕೆ ಅಧ್ಯಕ್ಷ ಬಾಲಕೃಷ್ಣ, ರೈತ ಪರ್ವ ಅಧ್ಯಕ್ಷ ಅರುಣ್ ಕುಮಾರ್, ಕಾರ್ಯಾಧ್ಯಕ್ಷ ಶ್ರೀಧರ್ ನಾಯಕ್, ರಾಜ್ಯ ಕಾರ್ಯದರ್ಶಿ ಚಾಮರಾಜು ಇತರರು ಉಪಸ್ಥಿತರಿದ್ದರು.

ನಾಳೆಯಿಂದ ಗೀತಾಯಾನ–2026

ಮೈಸೂರು: ಮೈಸೂರಿನ ಜೆಎಸ್‌ಎಸ್ ಮಹಿಳಾ ತಾಂತ್ರಿಕ ಮಹಾವಿದ್ಯಾಲಯದ 2026ನೇ ಸಾಲಿನ ವಾರ್ಷಿಕ ತಾಂತ್ರಿಕ, ಸಾಂಸ್ಕೃತಿಕ ಉತ್ಸವ 'ಗೀತಾಯಾನ–2026' ಕಾರ್ಯಕ್ರಮವು ಏ.23ರಿಂದ 3 ದಿನಗಳ ಕಾಲ ನಡೆಯಲಿದೆ. ಉತ್ಸವದ ಅಂಗವಾಗಿ ವಿವಿಧ ಇಂಜಿನಿಯರಿಂಗ್ ಮಹಾವಿದ್ಯಾಲಯಗಳ ವಿದ್ಯಾರ್ಥಿಗಳಿಗೆ ತಮ್ಮ ತಾಂತ್ರಿಕ ಕೌಶಲ್ಯ ಮತ್ತು ಸಾಂಸ್ಕೃತಿಕ ಪ್ರತಿಭೆಯನ್ನು ಪ್ರದರ್ಶಿಸಲು ವೇದಿಕೆ ನೀಡುತ್ತಿದೆ.

'ಗೀತಾಯಾನ–2026' ಕಾರ್ಯಕ್ರಮವನ್ನು ಏ.23ರಂದು ಬೆಳಗ್ಗೆ 10.30ಕ್ಕೆ ಸಂಸ್ಥೆಯ ಎಂ.ಗೋವಿಂದರಾವ್ ಸ್ಮಾರಕ ಸಭಾಂಗಣದಲ್ಲಿ ನಟ, ನಿರ್ದೇಶಕ, ಚಿತ್ರಕಥೆಗಾರರಾದ ಪ್ರಕಾಶ್ ಬೆಳವಾಡಿ ಉದ್ಘಾಟಿಸಲಿದ್ದಾರೆ. ಏ.23ರಂದು ಅಂತರ ಕಾಲೇಜು ಸ್ಪರ್ಧೆಗಳಾದ ಕ್ಯೂಆರ್ ಹಂಟ್, ಪ್ರಾಮ್ಟಿಫೈ, ಬಗ್ ಬೌಂಟಿ ಚಾಲೆಂಜ್, ಎಐ ಟ್ರೆಷರ್ ಹಂಟ್ ಮತ್ತು ಸರ್ಕ್ಯೂಟ್ ಕ್ರ್ಯಾಷ್ ಸ್ಪರ್ಧೆಗಳು ನಡೆಯಲಿವೆ. ಏ.24 ರಂದು ಸಾಂಸ್ಕೃತಿಕ ಸ್ಪರ್ಧೆಗಳಾದ ಭಕ್ತಿಗೀತೆ, ಭಾವಗೀತೆ, ಜನಪದಗೀತೆ, ಶಾಸ್ತ್ರೀಯ ಸಂಗೀತ ಗಾಯನ, ಕಿರುನಾಟಕ, ಮೈಮ್, ಏಕವ್ಯಕ್ತಿ ನೃತ್ಯ, ಜೋಡಿ ನೃತ್ಯ, ಸಮೂಹ ನೃತ್ಯ, ಚರ್ಚಾಸ್ಪರ್ಧೆ, ಹಾಗೂ ಏಕಾಪಾತ್ರಾಭಿನಯ ಸ್ಪರ್ಧೆಗಳು ನಡೆಯಲಿವೆ.

ಏ.25ರಂದು ಗೀತಾಯಾನ–2026ರ ಸಮಾರೋಪ ಸಮಾರಂಭ ನಡೆಯಲಿದ್ದು, ವಿಜೇತರಿಗೆ ಬಹುಮಾನ ವಿತರಣೆ, ಫ್ಯಾಷನ್ ಶೋ ಮತ್ತು ಮಿಸ್ ಗೀತಾಯಾನ ನಡೆಯಲಿದೆ ಎಂದು ಜೆಎಸ್‌ಎಸ್ ಮಹಿಳಾ ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕಬ್ಬು ಬೆಳೆಗಾರರ ಧರಣಿ



ಮೈಸೂರಿನ ಡಿಸಿ ಕಚೇರಿ ಆವರಣದಲ್ಲಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟ, ರಾಜ್ಯ ಕಬ್ಬು ಬೆಳೆಗಾರರ ಸಂಘದ ವತಿಯಿಂದ ಪ್ರತಿಭಟನಾ ಧರಣಿ ನಡೆಸಲಾಯಿತು.

ಮೈಸೂರು, ಏ.21(ಎಂಕೆ)– ಕಬ್ಬಿನ ಬಾಕಿ ಹಣ ಪಾವತಿ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟ, ರಾಜ್ಯ ಕಬ್ಬು ಬೆಳೆಗಾರರ ಸಂಘದ ವತಿಯಿಂದ ತೆಂಗಿನಕಾಯಿ ಚಿಪ್ಪು, ಭಿಕ್ಷಾ ಪಾತ್ರೆ ಹಿಡಿದು ಮಂಗಳವಾರ ಪ್ರತಿಭಟನಾ ಧರಣಿ ನಡೆಸಲಾಯಿತು.

ಮೈಸೂರಿನ ಸಿದ್ಧಾರ್ಥನಗರದ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಜಮಾವಣೆಗೊಂಡ ನೂರಾರು ಮಂದಿ ರೈತರು, ಜಿಲ್ಲಾಡಳಿತ, ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರು ಹಾಗೂ ಸರ್ಕಾರ ರೈತರ ಪಾಲಿಗೆ ಸತ್ತೋಗಿದೆ ಎಂದು ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರಲ್ಲದೆ ನೂತನ ಜಿಲ್ಲಾಧಿಕಾರಿ ಕಚೇರಿಗೆ ಮುತ್ತಿಗೆ ಹಾಕಲು ಪ್ರಯತ್ನಿಸಿದರು.

ರಾಜ್ಯ ಸರ್ಕಾರ ಕಬ್ಬಿನ ಪ್ರತೀ ಟನ್‌ಗೆ ಹೆಚ್ಚುವರಿಯಾಗಿ 100 ರೂ. ನೀಡುವಂತೆ ನಿಗದಿ ಮಾಡಿರುವುದನ್ನು ಬಣ್ಣಾರಿ ಮತ್ತು ಮಹದೇಶ್ವರ ಕಾರ್ಖಾನೆಯಿಂದ ತಕ್ಷಣವೇ ರೈತರಿಗೆ ಕೊಡಿಸಬೇಕು. ಕೃಷಿ ಪಂಪ್‌ಸೆಟ್‌ಗಳ ಅಕ್ರಮ–ಸಕ್ರಮ ಹಳೆ ಪದ್ಧತಿಯಂತೆ ಮುಂದುವರಿಸಿ, ಎಲ್ಲಾ ವೆಚ್ಚವನ್ನು ಸರ್ಕಾರವೇ ಭರಿಸಬೇಕು. 50 ವರ್ಷಗಳಿಂದ ಸಾಗುವಳಿ ಮಾಡುತ್ತಿರುವ ರೈತರಿಗೆ ಸಾಗುವಳಿ ಚೀಟಿ ಕೊಡಬೇಕು ಹಾಗೂ ಸಾಗುವಳಿ ಜಮೀನುಗಳ ದುರಸ್ತಿ ಕಾರ್ಯ ಮತ್ತು ಪೋಡಿ ಸರಳೀಕರಣಗೊಳಿಸಬೇಕು ಎಂದು ಆಗ್ರಹಿಸಿದರು.

ಹಾಗೆಯೇ ಖಾಸಗಿ ಫೈನಾನ್ಸ್‌ಗಳಿಂದ ಸಾಲ ವಸೂಲಿಗಾಗಿ ಮಾಡುತ್ತಿರುವ ಕಿರುಕುಳ ತಪ್ಪಿಸಬೇಕು. ಕರ್ನಾಟಕ ಗ್ರಾಮೀಣ ಬ್ಯಾಂಕ್ ರೈತರ ಸಾಲ ತೀರುವಳಿ ಓಟಿಎಸ್ ಮಾಡಬೇಕು. ಬ್ಯಾಂಕುಗಳಲ್ಲಿ ರೈತರು ತುರ್ತು ಕಾರ್ಯಗಳ ಉಪಯೋಗಕ್ಕೆ ಚಿನ್ನದ ಮೇಲೆ ನೀಡುವ ಸಾಲಕ್ಕೆ ಸಿಬಿಲ್ ಸ್ಕೋರ್ ಗಮನಿಸಿ ನೀಡುವ ಪದ್ಧತಿಯನ್ನು ರದ್ದುಗೊಳಿಸಬೇಕು ಎಂದು ಒತ್ತಾಯಿಸಿದರು.

ಬಳಿಕ ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಮಾತನಾಡಿ, ಕಬ್ಬಿನ ಪ್ರತೀ ಟನ್‌ಗೆ ಹೆಚ್ಚುವರಿಯಾಗಿ 100 ರೂ. ನೀಡುವಂತೆ ಸರ್ಕಾರ ಆದೇಶ ಮಾಡಿದ್ದರೂ ಕಾರ್ಖಾನೆಗಳು ಆದೇಶವನ್ನು ಪಾಲಿಸುತ್ತಿಲ್ಲ. ಕೆಲವು ಕಾರ್ಖಾನೆಗಳು ಸರ್ಕಾರಿ ಆದೇಶದಂತೆ ನಡೆದುಕೊಂಡಿದ್ದು, ಬಣ್ಣಾರಿ ಮತ್ತು ಮಹದೇಶ್ವರ ಕಾರ್ಖಾನೆ ಮಾಲೀಕರು ಆದೇಶದಂತೆ ನಡೆದುಕೊಳ್ಳುತ್ತಿಲ್ಲ. ಈ ಸಂಬಂಧ ಜಿಲ್ಲಾಧಿಕಾರಿಗಳು ಮಧ್ಯಸ್ಥಿಕೆ ವಹಿಸಿ ಹಣ ಕೊಡಿಸುವುದಾಗಿ ಹೇಳಿದ್ದರೆ ಹೊರತು ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ರೈತ ಮುಖಂಡರಾದ ಅತ್ತಳ್ಳಿ ದೇವರಾಜು, ಕಿರಗಸೂರು ಶಂಕರ್, ಲಕ್ಷ್ಮಿಪುರಂ ವೆಂಕಟೇಶ್, ಕಮಲಮ್ಮ, ವರಕೋಡು ನಾಗೇಶ್, ಬರಡನಪುರ ನಾಗರಾಜು, ಮಾರ್ಬಳ್ಳಿ ನೀಲಕಂಠಪ್ಪ, ಪ್ರಸಾದ್ ನಾಯಕ, ಪರಶಿವಮೂರ್ತಿ, ದೇವನೂರು ವಿಜಯೇಂದ್ರ, ಪಿ.ರಾಜು ಮತ್ತಿತರರು ಧರಣಿಯಲ್ಲಿ ಭಾಗವಹಿಸಿದ್ದರು.

> **"ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜಿಲ್ಲೆಯಲ್ಲಿ ರೈತರಿಗೆ ಅನ್ಯಾಯವಾಗುತ್ತಿದೆ. ಕಬ್ಬು ಬೆಳೆಗಾರರು ಆರ್ಥಿಕ ಸಂಕಷ್ಟದಲ್ಲಿದ್ದಾರೆ. ಸಕ್ಕರೆ ಬೆಲೆ ಜಾಸ್ತಿ ಯಾಗುತ್ತಿದೆಯೇ ಹೊರತು ಕಬ್ಬಿನ ಬೆಲೆ ಜಾಸ್ತಿ ಮಾಡುತ್ತಿಲ್ಲ. ಸರಿಯಾಗಿ ವಿದ್ಯುತ್ ಪೂರೈಕೆ ಮಾಡುತ್ತಿಲ್ಲ. ಬ್ಯಾಂಕುಗಳು ರೈತರಿಗೆ ಹಿಂಸೆ ಕೊಡುತ್ತಿದ್ದು, ಕೂಡಲೇ ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವರು ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕು.**
> **–ಕುರುಬೂರು ಶಾಂತಕುಮಾರ್, ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ**



ಬಸವ ಜಯಂತಿ ಅಂಗವಾಗಿ ಜೆ.ಪಿ.ನಗರದ ನಿವಾಸಿಗಳು ಪಾನಕ, ಮಜ್ಜಿಗೆ ವಿತರಿಸಿದರು. ಡಾ.ಆನಂದ್, ಡಾ.ನಾರಾಯಣ ಗೋಲಿ ಇದ್ದರು.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಬಸವ ಜಯಂತಿ ಆಚರಣೆ



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಮೈಸೂರು ಮಹಾನಗರ, ಜಿಲ್ಲಾ ಬಿಜೆಪಿ ವತಿಯಿಂದ ಬಸವ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ಮಾಜಿ ಶಾಸಕ ಎಲ್.ನಾಗೇಂದ್ರ, ಜಿಲ್ಲಾ ಅಧ್ಯಕ್ಷ ಕುಂಬ್ರಹಳ್ಳಿ ಸುಬ್ಬಣ್ಣ ಇತರರಿದ್ದರು.

ಮೈಸೂರು,ಏ.21–ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಮೈಸೂರು ಮಹಾನಗರ ಹಾಗೂ ಜಿಲ್ಲಾ ಬಿಜೆಪಿ ವತಿಯಿಂದ ಬಸವ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ, ಅವರ ಆದರ್ಶ ಮತ್ತು ಉಪದೇಶಗಳನ್ನು ಸ್ಮರಿಸಲಾಯಿತು.

ಕಾರ್ಯಕ್ರಮದಲ್ಲಿ ಮೈಸೂರು ನಗರ ಬಿಜೆಪಿ ಅಧ್ಯಕ್ಷರು ಆದ ಮಾಜಿ ಶಾಸಕ ಎಲ್.ನಾಗೇಂದ್ರ, ಜಿಲ್ಲಾ ಬಿಜೆಪಿ ಅಧ್ಯಕ್ಷ ಕುಂಬರಹಳ್ಳಿ ಸುಬ್ಬಣ್ಣ, ಮಾಜಿ ಸಂಸದ ಪ್ರತಾಪ್ ಸಿಂಹ, ರಾಜ್ಯ ಪ್ರಕೋಷ್ಠ ರಾಜ್ಯ ಸಂಚಾಲಕ ಎನ್.ವಿ.ಫಣೀಶ್, ಪ್ರಭಾರಿ ಸ್ವಾಮಿ ಮರುಳಾಪುರ, ಸಹ ಪ್ರಭಾರಿ ಇ.ಸಿ.ನಿಂಗರಾಜೇಗೌಡ, ಮಾಜಿ ಮೇಯರ್‌ಗಳಾದ ಸಂದೇಶ್ ಸ್ವಾಮಿ, ಶಿವಕುಮಾರ್ ಸೇರಿದಂತೆ ಅನೇಕ ಗಣ್ಯರು ಬಸವಣ್ಣನವರ ತತ್ವಗಳನ್ನು ಸ್ಮರಿಸಿದರು.

ಈ ವೇಳೆ ಜಿಪಂ ಮಾಜಿ ಸದಸ್ಯರಾದ ಬಿ.ಎನ್.ಸದಾನಂದ, ಸಿ.ಕೆ.ರುದ್ರಮೂರ್ತಿ, ವಿನಯ್‌ಕುಮಾರ್, ಪರೀಕ್ಷಿತ್‌ರಾಜೇಅರಸ್, ಡಾ.ಕೆ.ವಸಂತಕುಮಾರ್, ದಯಾನಂದ ಪಟೇಲ್, ಡಿ.ಚಂದ್ರಶೇಖರ್, ಜಿಲ್ಲಾ ಬಿಜೆಪಿ ನಿಕಟಪೂರ್ವ ಅಧ್ಯಕ್ಷೆ ಮಂಗಳ ಸೋಮಶೇಖರ್, ಎಸ್.ಡಿ.ಮಹೇಂದ್ರ, ಎಸ್.ಆರ್.ಗೋಪಾಲ್‌ರಾವ್, ಶ್ರೀನಿವಾಸ್, ಮಹೇಶ್, ಚಾಮುಂಡೇಶ್ವರಿ ಕ್ಷೇತ್ರದ ಅಧ್ಯಕ್ಷರಾದ ವೈ.ಟಿ.ರವಿ, ಗಣೇಶ್, ಗೋಪಾಲ್‌ಗೌಡ, ರೇವಣ್ಣ, ಬಿ.ಎಂ. ಸಂತೋಷ್‌ಕುಮಾರ್, ಶಿವಕುಮಾರ್, ಸುನೀಲ್, ಎನ್.ಆರ್.ಕ್ಷೇತ್ರದ ಬಿಜೆಪಿ ಅಧ್ಯಕ್ಷರಾದ ಮಂಜುನಾಥ್, ರೇಣುಕಾರಾಜು, ರಾಘವೇಂದ್ರ, ಪ್ರದೀಪ್, ಕಿರಣ್ ಸೇರಿದಂತೆ ಮತ್ತಿತರರು ಹಾಜರಿದ್ದರು.

'ಮೈಸೂರು ಮಿತ್ರ' ಅಂಕಣಕಾರ ಜಿ.ಎಲ್.ತ್ರಿಪುರಾಂತಕ ಮಾತನಾಡಿ, ಬಸವಣ್ಣನವರ ಸಮಾಜಮುಖಿ ಚಿಂತನೆಗಳು ಇಂದಿನ ಯುವಜನತೆಗೆ ಮಾರ್ಗದರ್ಶನವಾಗಿವೆ. ಸಮಾನತೆ, ಶ್ರಮ ಮತ್ತು ನೈತಿಕತೆಯ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಅಗತ್ಯವನ್ನು ತಿಳಿಸಿದರು.

ಏ.26ಕ್ಕೆ 'ಬದುಕು ಒಮ್ಮೆ ಮಾತ್ರ' ಕೃತಿ ಬಿಡುಗಡೆ

ಮೈಸೂರು,ಏ.21–ಬೆಂಗಳೂರು ವಿಶ್ವವಿದ್ಯಾನಿಲಯದ ಕುಲಪತಿ ಡಾ.ಎನ್.ಪ್ರಭುದೇವ ವಿರಚಿತ ಇಂಗ್ಲಿಷ್ ಲೇಖನಗಳ ಕನ್ನಡ ಅನುವಾದಿತ 'ಬದುಕು ಒಮ್ಮೆ ಮಾತ್ರ' ಕೃತಿ ಲೋಕಾರ್ಪಣೆ ಕಾರ್ಯಕ್ರಮ ಏ.26ರಂದು ಬೆಳಗ್ಗೆ 10.45ಕ್ಕೆ ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ನಡೆಯಲಿದೆ.

ಈ ಕೃತಿಯನ್ನು ಮೈಸೂರಿನ ಚಾಮುಂಡಿಪುರಂನಲ್ಲಿರುವ ಅನ್ವೇಷಣಾ ಸೇವಾ ಟ್ರಸ್ಟ್ ವತಿಯಿಂದ ಪ್ರಕಟಿಸಲಾಗಿದ್ದು, ಶ್ರೀನಿವಾಸ್ ಬಹದ್ದೂರ್ ಮತ್ತು ಶ್ರೀಮತಿ ಭ್ರಮರ ಬಹದ್ದೂರ್ ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದಿಸಿದ್ದಾರೆ. ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ವೈದ್ಯಕೀಯ ಸೂಪರಿಂಟೆಂಡೆಂಟ್ ಡಾ.ಕೆ.ಎಸ್.ಸದಾನಂದ ಪುಸ್ತಕ ಬಿಡುಗಡೆ ಮಾಡಲಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

22.4.2026 ಬುಧವಾರ, ಮಳೆ ನಕ್ಷತ್ರ: ಅಶ್ವಿನಿ 14.04.2026 ರಿಂದ 26.04.2026
ಪರಾಭವ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ,
ಶುಕ್ಲ ಪಕ್ಷ, ತಿಥಿ: ಷಷ್ಠಿ, ನಕ್ಷತ್ರ: ಆರಿದ್ರ, ರಾಹುಕಾಲ: ಮಧ್ಯಾಹ್ನ 12ರಿಂದ 1.30ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ** : ಬೆಳಗ್ಗೆ 6.30 ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9ರಿಂದ ಕೊಲೆಸ್ಟ್ರಾಲ್, ಬೊಜ್ಜು ನಿವಾರಣಾ ಚಿಕಿತ್ಸಾ, ಕುತ್ತಿಗೆ ನೋವು ಮತ್ತು ಭುಜದ ನೋವು, ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಆಲನಹಳ್ಳಿ.
- **ಮೈಸೂರು ನಗರ–ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ:** ಶ್ರೀ ರಾಮಾನುಜಾಚಾರ್ಯರ ಜಯಂತಿ ಆಚರಣೆ, ಮುಖ್ಯ ಅತಿಥಿಗಳು: ಶಾಸಕ ಜಿ.ಡಿ.ಹರೀಶ್‌ಗೌಡ, ಮಾಜಿ ಸಂಸದ ಪ್ರತಾಪ್ ಸಿಂಹ, ಮೈಸೂರು ನಗರ–ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಸಮಾಜ ಸೇವಕ ಡಾ.ರಘುರಾಂ ವಾಜಪೇಯಿ, ರಾಕೇಶ್‌ಭಟ್, ಸ್ಥಳ: ಶ್ರೀ ಲಕ್ಷ್ಮಿನರಸಿಂಹ ದೇವಸ್ಥಾನದ ಆವರಣ, ಕಾಳಿದಾಸ ರಸ್ತೆ, ಬೆಳಗ್ಗೆ 9.30ಕ್ಕೆ.
- **ರಾಮ್‌ಸನ್ಸ್ ಕ್ರೀಡಾ ಕೌಶಲ್ಯ** : ಪಾರಂಪರಿಕ ಹಾಸು ಆಟಗಳ 11ನೇ ದ್ವೈವಾರ್ಷಿಕ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್, ಬೆಳಗ್ಗೆ 10ರಿಂದ.
- **ಸುಯೋಗ್ ಆಸ್ಪತ್ರೆ :** ಮೂತ್ರಜನಕಾಂಗದ ಕಲ್ಲುಗಳ ಉಚಿತ ತಪಾಸಣಾ ಶಿಬಿರ, ಸ್ಥಳ: ಸುಯೋಗ್ ಆಸ್ಪತ್ರೆ, ರಾಮಕೃಷ್ಣನಗರ, ಬೆಳಗ್ಗೆ 10 ರಿಂದ.
- **ಜೆಎಸ್‌ಎಸ್ ಮಹಿಳಾ ಕಾಲೇಜು :** ಹಸಿರು ಹಣಕಾಸು ಮತ್ತು ಸುಸ್ಥಿರ ನಿರ್ವಹಣೆಯಲ್ಲಿ ಸಂಶೋಧನೆಯ ಹೊಸ ಮಾದರಿಗಳು ಕುರಿತು ವಿಚಾರ ಸಂಕಿರಣ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ : ಕುಲಸಚಿವ ಪ್ರೊ. ಎನ್. ನಾಗರಾಜ, ಅಧ್ಯಕ್ಷತೆ : ಕಾಲೇಜು ಶಿಕ್ಷಣ ವಿಭಾಗದ ಜಂಟಿ ನಿರ್ದೇಶಕ ಡಾ. ಡಿ.ಎಸ್. ಪ್ರತಿಮಾ, ಉಪಸ್ಥಿತರು : ಪ್ರಿನ್ಸಿಪಾಲ್ ಡಾ. ರೇಚಣ್ಣ, ಸ್ಥಳ: ನವಜ್ಯೋತಿ ಸಭಾಂಗಣ, ಸರಸ್ವತಿಪುರಂ, ಬೆಳಗ್ಗೆ 10.15ಕ್ಕೆ.
- **ಪರಿವರ್ತನ ಬ್ಯುಸಿನೆಸ್ ಸ್ಕೂಲ್:** ವಿಶ್ವ ಭೂಮಿ ದಿನ, ಅಧ್ಯಕ್ಷತೆ: ವ್ಯವಸ್ಥಾಪಕ ನಿರ್ದೇಶಕ ಲಯನ್ ಮಂಜುರಾಂ ಪುಟ್ಟೇಗೌಡ, ಉದ್ಘಾಟನೆ: ಪರಿಸರವಾದಿ ಲಯನ್ ಎಂ.ಶಿವಕುಮಾರ್, ಉಪಸ್ಥಿತರು: ಡಾ. ನಯೀಮುಲ್ಲಾ ಶರೀಫ್, ಲಯನ್ ಸಿ.ಆರ್.ದಿನೇಶ್, ಸ್ಥಳ: ಪರಿವರ್ತನ ಬ್ಯುಸಿನೆಸ್ ಸ್ಕೂಲ್, ಹೆಬ್ಬಾಳು ಬಡಾವಣೆ, ಬೆಳಗ್ಗೆ 10.30ಕ್ಕೆ.
- **ಮೈಸೂರು ವಿವಿ, ಎನ್.ರಾಚಯ್ಯ ಅಧ್ಯಯನ ಪೀಠ, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ ಮತ್ತು ಸಾರ್ವಜನಿಕ ಆಡಳಿತ ಅಧ್ಯಯನ ವಿಭಾಗ:** ಎನ್.ರಾಚಯ್ಯ ಪುಣ್ಯಸ್ಮರಣೆ ಅಂಗವಾಗಿ ಎನ್.ರಾಚಯ್ಯನವರ ಮಾದರಿ ನಾಯಕತ್ವ ವಿಷಯ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮ, ಉಪನ್ಯಾಸ : ಸಾಮಾಜಿಕ ನ್ಯಾಯಪರ ವೇದಿಕೆ ಅಧ್ಯಕ್ಷ ಡಾ.ರವಿಕುಮಾರ್ ಮರಡಿಪುರ, ಅಧ್ಯಕ್ಷತೆ: ಪ್ರೊ.ಕೃಷ್ಣಹೊಂಬಳ್, ಉಪಸ್ಥಿತರು: ಪ್ರೊ.ಸಿ.ರಾಮಸ್ವಾಮಿ, ಸ್ಥಳ: ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.
- **ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘ** : ಶ್ರೀ ರಾಮಾನುಜಾಚಾರ್ಯರ ಜಯಂತಿ, ಮುಖ್ಯ ಅತಿಥಿಗಳು : ಶಾಸಕ ಟಿ.ಎಸ್. ಶ್ರೀವತ್ಸ, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್, ಸ್ಥಳ: ಶ್ರೀ ಲಕ್ಷ್ಮಿನರಸಿಂಹ ದೇವಸ್ಥಾನದ ಆವರಣ, ಕಾಳಿದಾಸ ರಸ್ತೆ, ಬೆಳಗ್ಗೆ 11ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಗೀತಾರಾಧನ, 6.30 ಚಿಂತನ, 6.35 ಮತ್ತು ಸಂಜೆ 6.10 ವಚನ ಬಾನುಲಿ ಸರಣಿ, ಪ್ರಸ್ತುತಿ–ಪ್ರೊ.ಓ.ಎಲ್. ನಾಗಭೂಷಣಸ್ವಾಮಿ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ನಿತಿನ್ ರಾಜಾರಾಂ ಶಾಸ್ತ್ರಿ ಹಾಗೂ ಡಾ. ಪಿ.ಎಸ್. ಮುರಳೀಧರ್, ವ್ಯಾಖ್ಯಾನ–ಡಾ. ಬೋರೇಗೌಡ ಚಿಕ್ಕಮರಳಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 7.45 ಕನ್ನಡ ಚಿತ್ರಗೀತೆಗಳು, 8.30 ಮತ್ತು ಸಂಜೆ 5.30 ಚೋಟಿ ಚೋಟಿ ಚುಟುಕ್ ಗುಳುಂ ಗುಟಕ್–ಶಿಶು ಗೀತೆಗಳ ಕಾರ್ಯಕ್ರಮ, 8.35 ಚಿತ್ರಗೀತೆಗಳು, 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ–ಲಾಲ್ಗುಡಿ ಜಿ. ಜಯರಾಮನ್ ಹಾಗೂ ಅಮ್ಜದ್ ಅಲಿಖಾನ್, ವೈಯೋಲಿನ್ ಹಾಗೂ ಸರೋದ್ ವಾದನ–ಜುಗಲ್ಬಂದಿ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಪ್ರಶ್ನೋತ್ತರ.

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ–ಪಿ.ಸುರಭಿ, 12.45 ಜನಪದ ಸಂಗೀತ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು–ಪ್ರಥಮ್ ಭಟ್, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಡಾ.ಎನ್. ರಮಾಮಣಿ–ಕೊಳಲು ವಾದನ, 4.00 ಮಹಿಳಾರಂಗ, 4.30 ಹಿಂದಿ ಚಿತ್ರಗೀತೆಗಳು, 4.45 ಹಿಂದಿ ಪಾಠ, ಪ್ರಸ್ತುತಿ–ಅನುರಾಧ ಮೂರ್ತಿ, 5.00 ಕಟ್ಟೋಣ ಬನ್ನಿ ನಿರ್ಮಾಣ ತಾಂತ್ರಿಕತೆಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ, ಪ್ರಾಯೋಜಕರು–ಅಸೋಸಿಯೇಷನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಇಂಜಿನಿಯರ್ಸ್ ಇಂಡಿಯಾ, ಮೈಸೂರು ಛಾಪ್ಟರ್. ವಿಷಯ–ಹಿರಿಯ ಮತ್ತು ದೈಹಿಕ ವಿಶೇಷ ಚೇತನರಿಗೆ ಕಟ್ಟಡ ಪ್ರವೇಶದಲ್ಲಿನ ಸುಲಭ ಸೌಕರ್ಯಗಳು ಮತ್ತು ಅನುಕೂಲಗಳು, ಭಾಗವಹಿಸುತ್ತಾರೆ–ಕನ್ಸಲ್ಟಂಟಿಂಗ್ ಆರ್ಕಿಟೆಕ್ಟ್ ಚಂದ್ರಶೇಖರ್ ಮತ್ತು ಪ್ರಮೂರ್ ಗ್ರೂಪ್‌ನ ನಿರ್ದೇಶಕರಾದ ಪಿ. ಕೆ. ನಿಖಿಲ್, ಪ್ರಸ್ತುತಿ–ಎನ್.ಕೇಶವಮೂರ್ತಿ, 6.50 ಕೃಷಿರಂಗ–ವಿಶ್ವ ಭೂಮಿ ದಿನದ ಸಂದರ್ಭದಲ್ಲಿ ವಿಶೇಷ ಕಿರು ನಾಟಕ ಮಣ್ಣು ಬದುಕಿನ ಮೂಲ–ಪ್ರಕೃತಿಯ ಒಡಲು, 7.45 ಕನ್ನಡ ಚಿತ್ರಗೀತೆಗಳು, 8.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಆನಯಂ ಪಟ್ಟಿ ಗಣೇಶನ್–ಜಲತರಂಗ ವಾದನ, 8.30 ಹಿಂದಿ ಚಿತ್ರಗೀತೆಗಳು, 9.30 ಕ್ರೀಡಾಲೋಕ, 10.00 ಜನಪದ ಸಂಗೀತ, 10.30 ಸವಿನೆನಪು

- **ಮೈಸೂರು ವಿವಿ, ಯುವರಾಜ ಕಾಲೇಜು :** ಶೈಕ್ಷಣಿಕ ಸಾಲಿನ ಜ್ಞಾನವಾಹಿನಿ ಸಾಂಸ್ಕೃತಿಕ, ಕ್ರೀಡೆ, ರಾಸೇಯೋ, ಎನ್‌ಸಿಸಿ ಚಟುವಟಿಕೆಗಳ ಸಮಾರೋಪ ಸಮಾರಂಭ, ಸಮಾರೋಪ ಭಾಷಣ: ಸಾಹಿತಿ ಪ್ರೊ. ಎಂ. ಕೃಷ್ಣೇಗೌಡ, ಅಧ್ಯಕ್ಷತೆ : ಪ್ರಿನ್ಸಿಪಾಲ್ ಪ್ರೊ. ಎಸ್. ಮಹದೇವಮೂರ್ತಿ, ಉಪಸ್ಥಿತರು : ಆಡಳಿತಾಧಿಕಾರಿ ಪ್ರೊ. ಹೆಚ್.ಎಸ್. ಜಯಂತ್, ಸ್ಥಳ: ಯುವರಾಜ ಕಾಲೇಜು, ಬೆಳಗ್ಗೆ 11ಕ್ಕೆ.
- **ಶ್ರೀ ರೇಣುಕಾದೇವಿ ಕರಗ ದೇವಸ್ಥಾನದ ಟ್ರಸ್ಟ್ :** ಶ್ರೀ ಚಾಮುಂಡೇಶ್ವರಿ ಮತ್ತು ಶ್ರೀ ಮಾರಿಯಮ್ಮನವರ 102ನೇ ವರ್ಷದ ಮೈಸೂರು ಕರಗ ಮಹೋತ್ಸವ, ಬೆಳಗ್ಗೆ 7ಕ್ಕೆ ಅಮ್ಮನವರ ಕರಗವು ದೇವಸ್ಥಾನದಿಂದ ಹೊರಟು ಪ್ರಮುಖ ಬಡಾವಣೆಗಳಲ್ಲಿ ಮೆರವಣಿಗೆ, ಮಹಾಮಂಗಳಾರತಿ, ಸ್ಥಳ: ದೇವಸ್ಥಾನ, ಇಟ್ಟಿಗೆಗೂಡು.
- **ಸಂಸ್ಕೃತಿ ಸೌರಭ ಟ್ರಸ್ಟ್:** ಡಾ.ರಾಜ್‌ಕುಮಾರ್ ಅಭಿಮಾನಿ ಪುರಸ್ಕಾರ, ಅಭಿಮಾನಿ ರತ್ನ ಬಿರುದು ಪ್ರದಾನ ಸಮಾರಂಭ, ಪುರಸ್ಕೃತರು: ಅಖಿಲ ಕರ್ನಾಟಕ ಡಾ.ರಾಜ್‌ಕುಮಾರ್ ಅಭಿಮಾನಿಗಳ ಸಂಘದ ಪ್ರಥಮ ಅಧ್ಯಕ್ಷ ಎಂ.ರಾಮೇಗೌಡ, ಅಭಿಮಾನಿ ಪುರಸ್ಕಾರ ಪ್ರಧಾನ ಮಾಡುವವರು: ಡಾ.ರಾಜ್‌ಕುಮಾರ್ ಕಲಾ ಸಂಘದ ಅಧ್ಯಕ್ಷ ದೊಡ್ಡಯ್ಯ, ಅಧ್ಯಕ್ಷತೆ: ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಡಾ.ವೈ.ಡಿ.ರಾಜಣ್ಣ, ಅತಿಥಿಗಳು: ಸಾಹಿತಿ ಟಿ.ಸತೀಶ್ ಜವರೇಗೌಡ, ಕಲಾವಿದ ಶಿವಕುಮಾರ್ ಆರಾಧ್ಯ, ಸಿ.ರಾಜು, ಪ್ರಾಸ್ತಾವಿಕ ನುಡಿ: ಟ್ರಸ್ಟ್ ಅಧ್ಯಕ್ಷ ಡಾ.ರಾ.ಬಿ.ನಾಗರಾಜ್, ಸ್ಥಳ: ಎಂ.ರಾಮೇಗೌಡರ ನಿವಾಸ, ಜಯನಗರ, ಸಂಜೆ 4ಕ್ಕೆ
- **ಅಜ್ಜನ ಮನೆ ಕಲಾ ಪ್ರಪಂಚ :** ಶ್ರೀ ಶಂಕರ ನಮನ, ಮೈಸೂರಿನ ಹೆಸರಾಂತ ಮೃದಂಗ ವಾದಕರಾದ ವಿದ್ವಾನ್ ಶಿವಶಂಕರಸ್ವಾಮಿ ಮತ್ತು ವೃಂದದವರಿಂದ ವಾದ್ಯ ನಮನ 'ಲಯ ಶಂಕರ', ನಾಡಿನ ಹೆಸರಾಂತ ಪ್ರವಚನಕರ್ತರಾದ ಡಾ. ವಿ.ಬಿ. ಆರತಿ ಅವರಿಂದ ವಚೋನಮನ, ಪ್ರವಚನದ ವಿಷಯ : ಶ್ರೀ ಶಂಕರಾಚಾರ್ಯರ 'ಸಾಧನ ಚತುಷ್ಟಯ', ಸ್ಥಳ: ಗಾನಭಾರತಿ ರಮಾಗೋವಿಂದ ಸಭಾಂಗಣ, ಕುವೆಂಪುನಗರ, ಸಂಜೆ 4ಕ್ಕೆ.
- **ಶ್ರೀ ಗಣಪತಿ ಸೇವಾ ಮಂಡಳಿ ಟ್ರಸ್ಟ್:** ಆದಿ ಶಂಕರಾಚಾರ್ಯ, ರಾಮಾನುಜಾಚಾರ್ಯ ಮತ್ತು ಬಸವಣ್ಣ ಜಯಂತಿ ಆಚರಣೆ, ಪ್ರೊ.ಚಂದ್ರಶೇಖರ್ ಅವರಿಂದ ಪ್ರವಚನ, ಶ್ರೀಮತಿ ಉಮಾನಂಜುಂಡಯ್ಯ ತಂಡದವರಿಂದ ಭಕ್ತಿ ಗೀತಾಂಜಲಿ, ಸ್ಥಳ: ರಜತ್ ಸಭಾ ಮಂಟಪ, ಸಂಜೆ 6.30 ರಿಂದ.

ಮೈಸೂರು ಮಿತ್ರ

ಮೈಸೂರು ಪ್ರಸಿದ್ಧ ಕರಗ ಆರಂಭ

ಏ.25ರಂದು ಅದ್ಧೂರಿ ಕರಗ ಮೆರವಣಿಗೆ



ಇಟ್ಟಿಗೆಗೂಡಿನಲ್ಲಿರುವ ಮಾರಿಯಮ್ಮ ದೇವಾಲಯದ ಮೂರ್ತಿಗೆ ಸ್ಥಳೀಯ ನಿವಾಸಿಗಳು ಹಾಲಾಭಿಷೇಕ ನೆರವೇರಿಸುತ್ತಿರುವುದು.

ಮೈಸೂರು, ಏ.21(ಎಂಟಿವೈ)– ಪ್ರಸಿದ್ಧ ಮೈಸೂರು ಕರಗ ಮಹೋತ್ಸವಕ್ಕೆ ಚಾಲನೆ ದೊರೆತಿದ್ದು, ಮಂಗಳವಾರ ಚಾಮುಂಡಿ ಬೆಟ್ಟದ ತಪ್ಪಲಿನಿಂದ ಚಾಮುಂಡೇಶ್ವರಿ ಹಸಿಕರಗ ಹಾಗೂ ಕೋಟೆ ಮಾರಮ್ಮ ದೇವಾಲಯದಿಂದ ಮಾರಿಯಮ್ಮನವರ ಹಸಿ ಕರಗವನ್ನು ಶ್ರದ್ಧಾಭಕ್ತಿಯಿಂದ ಮೆರವಣಿಗೆ ಮೂಲಕ ಇಟ್ಟಿಗೆಗೂಡಿನಲ್ಲಿರುವ ಕರಗ ದೇವಾಲಯಕ್ಕೆ ತರಲಾಯಿತು.

102ನೇ ಮೈಸೂರು ಕರಗ ಮಹೋತ್ಸವ ಇಂದಿನಿಂದ ಆರಂಭವಾಗಿದ್ದು, ಏ.25ರಂದು ರಾತ್ರಿ 8 ಗಂಟೆಗೆ ಕರಗ ಮಹೋತ್ಸವ ಮೆರವಣಿಗೆ ಆರಂಭವಾಗಲಿದೆ. ಈ ಹಿನ್ನೆಲೆಯಲ್ಲಿ ಇಂದು ಬೆಳಗ್ಗೆ ಹಸಿ ಕರಗವನ್ನು ಸಾಂಪ್ರದಾಯಿಕ ಪೂಜೆ ಸಲ್ಲಿಸಿ ಮೆರವಣಿಗೆ ಮೂಲಕ ಕರಗ ದೇವಾಲಯಕ್ಕೆ ತಂದಿಡಲಾಯಿತು.

ಹಸಿ ಕರಗ: ಕರಗ ಮಹೋತ್ಸವದ ಅಂಗವಾಗಿ ಇಂದು ಬೆಳಗ್ಗೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಮೆಟ್ಟಿಲು ಬಳಿ ಇರುವ ಮಂಟಪದಿಂದ ಚಾಮುಂಡೇಶ್ವರಿ ಹಸಿ ಕರಗವನ್ನು ಮಂಗಳ ವಾದ್ಯ, ಚಂಡೆ ಮದ್ದಳೆ, ಛತ್ರಿ, ಚಾಮರದೊಂದಿಗೆ ಮೆರವಣಿಗೆಯಲ್ಲಿ ಇಟ್ಟಿಗೆಗೂಡಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ದೇವಾಲಯಕ್ಕೆ ತರಲಾಯಿತು.

ಮಧ್ಯಾಹ್ನ ಅರಮನೆ ಕೋಟೆ ಮಾರಮ್ಮ ದೇವಾಲಯದಿಂದ ಮಾರಿಯಮ್ಮ ಹಸಿ ಕರಗವನ್ನು ಇಟ್ಟಿಗೆಗೂಡಿಗೆ ಮೆರವಣಿಗೆಯಲ್ಲಿ ತಂದು ದೇವಾಲಯದಲ್ಲಿಡಲಾಯಿತು.

ಮಡಿವಾಳರ ಮನೆಯಲ್ಲಿ ಮೊದಲ ಪೂಜೆ: ಹಸಿ ಕರಗವನ್ನು ಇಟ್ಟಿಗೆಗೂಡಿಗೆ ಮೆರವಣಿಗೆಯಲ್ಲಿ ತರುತ್ತಿದ್ದಂತೆ ಮಡಿವಾಳ ಸಮುದಾಯದವರು ಕರಗಕ್ಕೆ ಮಡಿ ಹಾಸಿ ಬರಮಾಡಿಕೊಂಡರು. ದಾರಿಯುದ್ದಕ್ಕೂ ಮಡಿ ಹಾಸಿ ಕರಗವನ್ನು ಕರೆತಂದರು. ಬಳಿಕ ಸಂಪ್ರದಾಯದಂತೆ ಹಸಿ ಕರಗಕ್ಕೆ ಮಡಿವಾಳ ಸಮುದಾಯದ ಮನೆಯಲ್ಲಿ ಮೊದಲ ಪೂಜೆ ಸಲ್ಲಿಸಲಾಯಿತು. ನಂತರ ಮತ್ತೆ ಮೆರವಣಿಗೆ ಮೂಲಕ ದೇವಾಲಯಕ್ಕೆ ತರಲಾಯಿತು.

ಶಕ್ತಿದೇವತೆ ಹಾಲಾಭಿಷೇಕ: ಕರಗ ಮಹೋತ್ಸವ ಅಂಗವಾಗಿ ಮಂಗಳವಾರ ಬೆಳಗ್ಗಿನಿಂದಲೇ ಇಟ್ಟಿಗೆಗೂಡಿನಲ್ಲಿರುವ ರೇಣುಕಾಂಬ ದೇವಾಲಯದ ಪಕ್ಕವಿರುವ ಶಕ್ತಿದೇವತೆ ಮಾರಿಯಮ್ಮ ದೇವಾಲಯದಲ್ಲಿರುವ ದೇವಿಯ ಮೂರ್ತಿಗೆ ಇಟ್ಟಿಗೆಗೂಡಿನ ನಿವಾಸಿಗಳು ಹಾಲಿನ ಅಭಿಷೇಕ ಮಾಡಿದರು. ಕರಗ ಮಹೋತ್ಸವದ ಮೊದಲ ದಿನ ಸ್ಥಳೀಯರು ಮಾರಿಯಮ್ಮ ದೇವಾಲಯಕ್ಕೆ ಬಂದು ತಾವೇ ಹಾಲಾಭಿಷೇಕ ಮಾಡುವ ಪದ್ಧತಿಯಿದ್ದು, ಇಂದು ನೂರಾರು ಮಂದಿ ಹಾಲಾಭಿಷೇಕ ಮಾಡಿ ಕರಗ ಮಹೋತ್ಸವ ಶ್ರದ್ಧಾ ಭಕ್ತಿಯ ವಾತಾವರಣದಲ್ಲಿ ಮಿಂದೆದ್ದರು.

ಅಲಂಕಾರಗೊಂಡ ಇಟ್ಟಿಗೆಗೂಡು: ಮೈಸೂರು ಕರಗ ಮಹೋತ್ಸವಕ್ಕೆ ಇಟ್ಟಿಗೆಗೂಡು ಬಡಾವಣೆ ಸಜ್ಜಾಗಿದ್ದು, ಎಲ್ಲೆಡೆ ದೀಪಾಲಂಕಾರ ಮಾಡಲಾಗಿದೆ. ಕರಗ ದೇವಾಲಯ(ರೇಣುಕಾಂಭ ದೇವಾಲಯ) ಸೇರಿದಂತೆ ಸುತ್ತಮುತ್ತಲಿನ ದೇವಾಲಯಗಳಿಗೂ ದೀಪಾಲಂಕಾರ, ಹೂವಿನ ಅಲಂಕಾರ ಮಾಡಲಾಗಿದ್ದು, ದೇವಾಲಯದ ಮುಂದೆ ಹಸಿರು ಚಪ್ಪರ ಹಾಕಲಾಗಿದೆ. ಬಡಾವಣೆ ಸಂಪರ್ಕ ಕಲ್ಪಿಸುವ ದೇವಾಲಯದ ರಸ್ತೆಯಲ್ಲಿ 102ನೇ ವರ್ಷದ ಮೈಸೂರು ಕರಗ ಮಹೋತ್ಸವಕ್ಕೆ ಸ್ವಾಗತ ಎಂಬ ಸ್ವಾಗತ ಕಮಾನು ಅಳವಡಿಸಲಾಗಿದ್ದು, ದಾರಿಯುದ್ದಕ್ಕೂ ವಿದ್ಯುತ್ ದೀಪದಿಂದ ವಿವಿಧ ಆಕೃತಿ ನಿರ್ಮಿಸಿ ಇಡಲಾಗಿದೆ.

ಹಬ್ಬದ ವಾತಾವರಣ: ಕರಗ ಮಹೋತ್ಸವದ ಅಂಗವಾಗಿ ಇಟ್ಟಿಗೆಗೂಡಿ ನಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿದೆ. ಪ್ರತಿಯೊಂದು ಮನೆಯಲ್ಲೂ ಕರಗ ಮಹೋತ್ಸವವನ್ನು ದೊಡ್ಡ ಹಬ್ಬದಂತೆ ಆಚರಿಸುತ್ತಿದ್ದು, ವಿವಿಧೆಡೆಯಿಂದ ಸಂಬಂಧಿಕರನ್ನು ಆಹ್ವಾನಿಸಿದ್ದಾರೆ.



ಚಾಮುಂಡಿಬೆಟ್ಟದ ತಪ್ಪಲಿನಿಂದ ಚಾಮುಂಡೇಶ್ವರಿಯ ಹಸಿ ಕರಗ ತರುತ್ತಿರುವುದು.

ಮನೆ ಮನೆಯಲ್ಲಿ ವಿಶೇಷ ಆರಾಧನೆ

ಮೈಸೂರು, ಏ.21(ವಿವಿಹೆಚ್)– ಸಾಂಸ್ಕೃತಿಕ ನಗರಿ ಮೈಸೂರಿನ 'ಮಿನಿ ದಸರಾ' ಎಂದೇ ಪರಿಗಣಿಸಲ್ಪಟ್ಟಿರುವ 'ಮೈಸೂರು ಕರಗ' ಮೊದಲನೇ ದಿನ ಸಾಂಪ್ರದಾಯಿಕ ಪೂಜೆ ಹಾಗೂ ಕರಗ ಮೆರವಣಿಗೆ ಅದ್ಧೂರಿಯಾಗಿ ಜರುಗಿತು.

ಇಟ್ಟಿಗೆಗೂಡಿನಲ್ಲಿರುವ ಶ್ರೀ ಮಾರಮ್ಮನವರ ದೇವಸ್ಥಾನ(ಕರಗ ದೇವಸ್ಥಾನ)ದ ಆದಿಶಕ್ತಿ, ಚಾಮುಂಡೇಶ್ವರಿ ಹಾಗೂ ಮಾರಮ್ಮ (ರೇಣುಕಾ ದೇವಿ) ದೇವತೆಗಳ ಉತ್ಸವ ಮೂರ್ತಿಗಳನ್ನು ಮಡಿವಾಳ ಮಾಚಿದೇವರ ಗುಡಿಯಲ್ಲಿಟ್ಟು ಮುಖವಾಡ, ಸೀರೆ, ಬಳೆ ತೊಡಿಸಿ ಅಲಂಕಾರ ಮಾಡಿ ನಂತರ ಕರಗ ಮೆರವಣಿಗೆ ಮಾಡಲಾಯಿತು. ಮಡಿವಾಳರ ಗುಡಿಯಲ್ಲಿ ಆದಿ ಶಕ್ತಿ ತಾಯಿಯನ್ನು ಗುಡಿಯೊಳಗೆ ಇರಿಸಲಾಗಿದ್ದು, ಚಾಮುಂಡೇಶ್ವರಿ, ಮಾರಮ್ಮ ಕರಗ ಉತ್ಸವ ಪ್ರಮುಖ ಮಾರ್ಗದಲ್ಲಿ ಸಾಗಿತು. ಮೊದಲ ದಿನವಾದ್ದರಿಂದ ದೇವಿಯರನ್ನು ಕೆಲಹೊತ್ತು ಮಾತ್ರ ಮೆರವಣಿಗೆ ಮಾಡಲಾಯಿತು. ಅಪಾರ ಸಂಖ್ಯೆಯಲ್ಲಿ ನೆರೆದಿದ್ದ ಭಕ್ತ ಸಮೂಹ ದೇವಿಗೆ ವಿಶೇಷ ಪೂಜೆ, ಆರತಿ ಬೆಳಗುವ ಮೂಲಕ ಮನೆ–ಮನೆಗೆ ಬರಮಾಡಿಕೊಂಡರು. ಕರಗದೊಂದಿಗೆ ಮಂಗಳ ವಾದ್ಯಗಳು, ನಗಾರಿ, ತಮಟೆ ಜತೆಯಾದವು. ಕರಗದ ಮುಂದೆ ನಗಾರಿ ಮೇಳೈಸುತ್ತಿದ್ದರೆ, ನಗಾರಿ ಏಟಿಗೆ ಯುವಕರು, ಸ್ಥಳೀಯರು ಹೆಜ್ಜೆ ಹಾಕಿದರು.

ಮನೆ ಮನೆಯಲ್ಲೂ ಪೂಜೆ: ಕರಗದ ಮೊದಲ ದಿನವಾದ್ದರಿಂದ ಇಟ್ಟಿಗೆಗೂಡಿನ ಮೊದಲೆರಡು ಬೀದಿಗಳಲ್ಲಿ ಸಾಗಿ ಪ್ರತಿಯೊಬ್ಬರ ಮನೆಗೆ ತೆರಳಿ ಪೂಜೆ ಸ್ವೀಕರಿಸಿತು. ಮನೆಗೆ ದೇವಿಯನ್ನು ಭಕ್ತಾದಿಗಳು ಬರಮಾಡಿಕೊಂಡು ಹಾಲು, ಮಜ್ಜಿಗೆ, ಪಾನಕ, ಕೋಸಂಬರಿ ಹೀಗೆ ನಾನಾ ಪ್ರಸಾದಗಳನ್ನು ನೈವೇದ್ಯ ಮಾಡಿದರು. ಯಾವ ಭೇದ–ಭಾವವಿಲ್ಲದೆ ಹರಕೆ ಇರುವ ಎಲ್ಲರ ಮನೆಯಲ್ಲೂ ಕರಗ ಇಳಿಸಲಾಯಿತು.

ಹರಕೆ ಇರುವ ಕನ್ಯೆಯರು ಮನೆಯಲ್ಲಿ ಕರಗವನ್ನು ಕೂರಿಸಿ ವಿವಾಹ ಭಾಗ್ಯಕ್ಕಾಗಿ ಮಾಂಗಲ್ಯ ಪೂಜೆ ನೆರವೇರಿಸಿದರೆ, ಮುತ್ತೈದೆ ಭಾಗ್ಯಕ್ಕಾಗಿ ಮಹಿಳೆಯರು ದೇವಿಗೆ ಮಾಂಗಲ್ಯ ತೊಡಿಸಿ ಮಡಿಲಕ್ಕಿ ತುಂಬಿಸಿ ಸರ್ವಮಂಗಳೆಯರಲ್ಲಿ ಪ್ರಾರ್ಥಿಸಿದರು. ಸಂತಾನ ಪ್ರಾಪ್ತಿಗಾಗಿ, ವಿದ್ಯಾರ್ಜನೆಗಾಗಿ, ಕೆಲಸಕ್ಕಾಗಿ, ದೇವರ ಕೃಪೆಗಾಗಿ ಹೀಗೆ ಹಲವಾರು ಬಗೆಯಲ್ಲಿ ದೇವಿಯರನ್ನು ಪ್ರಾರ್ಥಿಸಿದರು.

ಪೊಲೀಸ್ ಇಲಾಖೆಯಲ್ಲಿ ಮೇಲಧಿಕಾರಿಗಳಿಂದ ಅಧೀನ ಅಧಿಕಾರಿಗಳ ಮೇಲೆ ದಬ್ಬಾಳಿಕೆ

ಪೊಲೀಸ್ ಮಹಾನಿರ್ದೇಶಕರಿಗೆ ವರದಿ ನೀಡುವಂತೆ ಗೃಹ ಸಚಿವ ಡಾ. ಪರಮೇಶ್ವರ್ ಆದೇಶ

ಬೆಂಗಳೂರು, ಏ.21(ಕೆಎಂಶಿ)– ಪೊಲೀಸ್ ಇಲಾಖೆಯಲ್ಲಿ ಮೇಲಧಿಕಾರಿಗಳು ಕೆಳಹಂತದ ಅಧಿಕಾರಿಗಳ ವಿರುದ್ಧ ಕಿರುಕುಳ ನೀಡುತ್ತಿರುವ ಸಂಬಂಧ ಸವಿಸ್ತಾರ ವರದಿ ನೀಡಿ ಎಂದು ಪೊಲೀಸ್ ಮಹಾನಿರ್ದೇಶಕರಿಗೆ ಆದೇಶ ಮಾಡಿದ್ದೇನೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಇಂದಿಲ್ಲಿ ತಿಳಿಸಿದ್ದಾರೆ.



ಡಾ.ಜಿ.ಪರಮೇಶ್ವರ್

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎಸ್‌ಪಿ ಅದಕ್ಕಿಂತ ಮೇಲು ಹಂತದ ಅಧಿಕಾರಿಗಳು ಕೆಳಹಂತದ ಅಧಿಕಾರಿಗಳ ಮೇಲೆ ಒತ್ತಡ ಮತ್ತು ಕಿರುಕುಳ ನೀಡುತ್ತಿರುವ ಬಗ್ಗೆ ಬಹಳಷ್ಟು ವರದಿಗಳು ಬಂದಿವೆ. ಹಿರಿಯ ಅಧಿಕಾರಿಗಳ ವರ್ತನೆಗೆ ಬೇಸತ್ತು, ಕೆಲವರು ಸ್ವಯಂ ನಿವೃತ್ತಿ ತೆಗೆದುಕೊಳ್ಳುತ್ತಿದ್ದರೆ, ಮತ್ತೆ ಕೆಲವರು ಜೀವನವೇ ಸಾಕು ಎನ್ನುವ ಸ್ಥಿತಿಯಲ್ಲಿದ್ದಾರೆ. ಈ ಬಗ್ಗೆ ಬಂದಿರುವ ದೂರುಗಳನ್ನು ಆಧರಿಸಿ ಸಮಗ್ರ ವರದಿ ನೀಡಿ ಎಂದಿದ್ದೇನೆ.

ಜಾರಿ ನಿರ್ದೇಶನಾಲಯ (ಇ.ಡಿ.) ಅಧಿಕಾರಿಗಳು ಶಾಸಕ ಎನ್.ಎ.ಹ್ಯಾರೀಸ್ ಹಾಗೂ ಅವರ ಮಕ್ಕಳ ನಿವಾಸಗಳ ಮೇಲೆ ದಾಳಿ ನಡೆಸಿರುವ ಕುರಿತ ಒಳವಿಚಾರಗಳ ಮಾಹಿತಿ ಇಲ್ಲ. ಯಾವ ವಿಚಾರಕ್ಕೆ ದಾಳಿ ನಡೆದಿದೆ. ಏನೆಲ್ಲ ಸಿಕ್ಕಿದೆ ಎಂಬ ಕುರಿತು ಇ.ಡಿ. ಅಧಿಕಾರಿಗಳೇ ಮಾಹಿತಿ ನೀಡಬೇಕು. ಇಂತಹ ವಿಷಯಗಳಲ್ಲಿ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡುತ್ತಾರೆ. ಅಲ್ಲಿಯವರೆಗೂ ಕಾಯಬೇಕು. ಇದರ ಬಗ್ಗೆ ನಾವು ಹೇಳಿಕೆಗಳನ್ನು ಕೊಟ್ಟರೆ ಅಪ್ರಸ್ತುತ ಆಗುತ್ತದೆ ಎಂದರು.

ಬಿಟ್ ಕಾಯಿನ್ ಹಗರಣದ ಕುರಿತು ತನಿಖೆಗೆ ಎಸ್‌ಐಟಿ ರಚನೆ ಮಾಡಲಾಗಿತ್ತು. ತನಿಖೆ ಕೊನೆ ಹಂತದಲ್ಲಿದೆ. ಪ್ರಕರಣ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ವ್ಯಾಪ್ತಿ ಹೊಂದಿರುವುದರಿಂದ ಅನೇಕ ವಿಚಾರಗಳಲ್ಲಿ ಮಾಹಿತಿ ಕಲೆ ಹಾಕಿ ಅಂತಿಮ ವರದಿ ನೀಡಬೇಕಾಗುತ್ತದೆ. ತನಿಖೆ ಅಂತಿಮ ಹಂತದಲ್ಲಿದೆ ಎಂಬುದಾಗಿ ಅಧಿಕಾರಿಗಳು ತಿಳಿಸಿದ್ದಾರೆ. ಅಗತ್ಯ ಮಾಹಿತಿ ಸಿಗುವವರೆಗೂ ತನಿಖೆ ನಡೆಸುತ್ತಾರೆ. ತಾಂತ್ರಿಕ ವಿಷಯ ಆಗಿರುವುದರಿಂದ ಸಾಕ್ಷ್ಯಾಧಾರ ಕಲೆ ಹಾಕುವುದರಲ್ಲಿ ವಿಳಂಬ ಆಗಿರಬಹುದು. ಶೀಘ್ರದಲ್ಲೇ ತನಿಖೆ ಪೂರ್ಣಗೊಳಿಸಿ, ಮಧ್ಯಂತರ ಆರೋಪ ಪಟ್ಟಿ ಸಲ್ಲಿಸಲು ಸೂಚಿಸಲಾಗಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸ್ ಇಲಾಖೆಯಿಂದ ಇ.ಡಿ. ಅಧಿಕಾರಿಗಳು ಪಡೆಯುವ ಅಧಿಕಾರ ಅವರಿಗಿದೆ. ಯಾವುದೇ ವಿಚಾರವಾದರೂ ಇ.ಡಿ. ಅಧಿಕಾರಿಗಳೇ ವಿವರ ನೀಡಲಿದ್ದಾರೆ. ಹ್ಯಾಕರ್ ಶ್ರೀಕಿ ಜೊತೆ ಪ್ರಭಾವಿಗಳು ಸಂಪರ್ಕ ಹೊಂದಿರುವ ಕುರಿತು ತನಿಖೆ ನಡೆದರೆ ಎಲ್ಲವೂ ಹೊರಬರುತ್ತದೆ. ಯಾರೇ ಸಂಪರ್ಕದಲ್ಲಿದ್ದರೂ, ಅವರ ಪಾತ್ರ ಏನು ಅನ್ನುವುದು ಗೊತ್ತಾಗಲಿದೆ. ನಾವು ಮಾತನಾಡುವುದಕ್ಕೂ, ತನಿಖೆಯಿಂದ ಬಯಲಾಗುವ ವಿಚಾರಗಳು ಬೇರೆ ಇರುತ್ತವೆ. ಅನೇಕ ಸಂದರ್ಭಗಳಲ್ಲಿ ರಾಜಕೀಯವಾಗಿ ಏನೇನೋ ಮಾತನಾಡಿರುತ್ತೇವೆ. ಎಲ್ಲವೂ ತನಿಖೆಯಿಂದಲೇ ಹೊರಬರಬೇಕಲ್ಲವೇ ಎಂದರು.

ಮುಸ್ಲಿಂ ನಾಯಕರ ಪತ್ರ ಕುರಿತು ಪಕ್ಷದ ವರಿಷ್ಠರು ಸತ್ಯಾಸತ್ಯತೆ ಪರಿಶೀಲಿಸಿ, ರಾಹುಲ್ ಗಾಂಧಿ ಅವರಿಗೆ ಸೂಚಿಸುತ್ತಾರೆ. ಉಪ ಚುನಾವಣೆಗಳಲ್ಲಿ ಸ್ಪರ್ಧಿಸಲು ಕಾಂಗ್ರೆಸ್ ಎಂದಿಗೂ ಮುಸ್ಲಿಂ ಸಮುದಾಯಕ್ಕೆ ಪ್ರಾಧಾನ್ಯತೆ ನೀಡುತ್ತದೆ. ಮೃತಪಟ್ಟ ಕುಟುಂಬದವರಿಗೆ ಟಿಕೆಟ್ ನೀಡುವ ಪದ್ಧತಿ ಕಾಂಗ್ರೆಸ್‌ನಲ್ಲಿದೆ. ಇದನ್ನು ಬೇರೆ ರೀತಿ ಅರ್ಥೈಸಿಕೊಳ್ಳಲಾಗಿದೆ. ಒಂದು ಸಮುದಾಯದ ಮತದಾರರ ಸಂಖ್ಯೆ ಹೆಚ್ಚಾಗಿದೆ ಎಂಬ ಕಾರಣಕ್ಕೆ ಟಿಕೆಟ್ ಕೇಳಿದ್ದಾರೆ, ಅದು ತಪ್ಪಲ್ಲ.

ಕಾರಣಾಂತರಗಳಿಂದ ಶಾಮನೂರು ಶಿವಶಂಕರಪ್ಪ ಮನೆಯವರಿಗೆ ಟಿಕೆಟ್ ಕೊಟ್ಟಿರುವುದನ್ನು ಬೇರೆ ರೀತಿ ಅರ್ಥೈಸಿಕೊಳ್ಳುವುದು ಸರಿಯಲ್ಲ. ಇದು ಕಾಂಗ್ರೆಸ್‌ನ ಆಂತರಿಕ ವಿಚಾರ. ಪಕ್ಷದ ಅಧ್ಯಕ್ಷರು, ಮುಖ್ಯಮಂತ್ರಿ ಸೇರಿದಂತೆ ಎಲ್ಲರೂ ಸೇರಿ ಸಮಸ್ಯೆ ಪರಿಹರಿಸುತ್ತೇವೆ.

ಪ್ರೀತಿಸಿ ಮದುವೆಯಾಗಿದ್ದೇವೆ; ನಮಗೆ ರಕ್ಷಣೆ ಕೊಡಿ...

37 ವರ್ಷದ ಮಹಿಳೆ; 22 ವರ್ಷದ ಯುವಕ ಎಸ್‌ಪಿ ಕಚೇರಿ ಮೊರೆ!

ಮೈಸೂರು, ಏ.21(ಎಂಕೆ)– ಪ್ರೀತಿಸಿ ಮದುವೆಯಾಗಿರುವ 37 ವರ್ಷದ ಮಹಿಳೆ ಮತ್ತು 22 ವರ್ಷದ ಯುವಕ 'ನಮಗೆ ರಕ್ಷಣೆ ಕೊಡಿ' ಎಂದು ಮೈಸೂರಿನ ಎಸ್‌ಪಿ ಕಚೇರಿಯಲ್ಲಿ ಮನವಿ ಮಾಡಿದ್ದಾರೆ.

ಬೆಂಗಳೂರಿನ ಚಳ್ಳಘಟ್ಟ ನಿವಾಸಿ ಕವಿತಾ ಹಾಗೂ ಮೈಸೂರಿನ ಹೊರವಲಯದ ರಮ್ಮನಹಳ್ಳಿ ನಿವಾಸಿ ಭಾಸ್ಕರ್ ಒಂದು ವರ್ಷದಿಂದ ಪರಸ್ಪರ ಪ್ರೀತಿಸಿ ಮದುವೆಯಾಗಿದ್ದು, ರಕ್ಷಣೆ ನೀಡುವಂತೆ ಪೊಲೀಸರ ಮೊರೆ ಹೋಗಿದ್ದಾರೆ. ಬೆಂಗಳೂರಿನಲ್ಲಿ ಟಿಟಿ, ಆಟೋ ಓಡಿಸುತ್ತಾ ದೊಡ್ಡಮ್ಮನ ಮನೆಯಲ್ಲಿದ್ದ ಭಾಸ್ಕರ್, ಬಂಡೆ ಮಹಾಕಾಳಮ್ಮ ದೇವಸ್ಥಾನಕ್ಕೆ ಕವಿತಾ ಮತ್ತು ಆಕೆಯ ತಾಯಿ ಭಾಗ್ಯಮ್ಮಳನ್ನು ಕರೆದೊಯ್ಯುವ ವೇಳೆ ಪ್ರೇಮಾಂಕುರವಾಗಿದೆ. ಸದ್ಯ ಮೈಸೂರಿನ ಒಂಟಿಕೊಪ್ಪಲು ಲಕ್ಷ್ಮಿ ವೆಂಕಟರಮಣಸ್ವಾಮಿ ದೇವಸ್ಥಾನದಲ್ಲಿ ಮದುವೆಯಾಗಿದ್ದೇವೆ ಎಂದು ಹೇಳುತ್ತಿರುವ ಪ್ರೇಮಿಗಳು, ನಮಗೆ ಜೀವ ಬೆದರಿಕೆ ಇದ್ದು ರಕ್ಷಣೆ ನೀಡುವಂತೆ ಮಂಗಳವಾರ ಕೋರಿದ್ದಾರೆ.

ಲೋ ಬಿಪಿಯಿಂದ ನನ್ನ ಪತಿ ನಿಧನರಾಗಿದ್ದು, ನನಗೆ 14 ವರ್ಷದ ಮಗನಿದ್ದಾನೆ. ತಂದೆ ಮನೆಯಲ್ಲೇ ಇದ್ದ ನನಗೆ ಹಿಂಸೆ ನೀಡಲಾಗುತ್ತಿತ್ತು. ಒಂದು ವರ್ಷದ ಹಿಂದೆ ಪರಿಚಯವಾದ ಭಾಸ್ಕರ್ ಜೊತೆಗೆ ಮದುವೆಯಾಗಿದ್ದೇನೆ. ನನಗೆ ನನ್ನ ತಂದೆ ಮತ್ತು ಮಾವನ ಮಗನಿಂದ ಜೀವ ಬೆದರಿಕೆ ಇದೆ ಎಂದು ಮಾಧ್ಯಮಗಳ ಮುಂದೆ ಆತಂಕ ವ್ಯಕ್ತಪಡಿಸಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಗಂಡ : ಆಪರೇಷನ್‌ನಲ್ಲಿ ನನಗೇನಾದ್ರೂ ಆದರೆ, ಆ ಡಾಕ್ಟರ್‌ನ ನೀನು ಮದುವೆ ಆಗಬೇಕು.

ಹೆಂಡತಿ : ಯಾಕ್ರಿ ಹಾಗೆ ಹೇಳ್ತೀರಾ?

ಗಂಡ : ಅವನ ಮೇಲೆ ಸೇಡನ್ನು ತೀರಿಸಿಕೊಳ್ಳೋಕೆ ಬೇರೆ ದಾರಿ ಕಾಣ್ತಾ ಇಲ್ಲ.

ಮೈಸೂರು ಮಿತ್ರ

ಬುಧವಾರ, ಏಪ್ರಿಲ್ 22, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಅಂದವಾದ ಮುಖವನ್ನು ನೋಡಲು ಎಷ್ಟು ಜನ ಬೇಕಾದರೂ ಸರದಿಯಲ್ಲಿ ನಿಲ್ಲಬಹುದು. ಆದರೆ, ಅಂದವಾದ ಮನಸ್ಸನ್ನು ಅರಿಯಲು, ಮತ್ತೊಂದು ಅಂದವಾದ ಮನಸ್ಸಿನಿಂದ ಮಾತ್ರ ಸಾಧ್ಯ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು } ತಾಯಿಯ ಪ್ರೀತಿ ಸುಖವಾದದ್ದು, ತಂದೆಯ ಪ್ರೀತಿ ಮಧುರವಾದದ್ದು.

ನಿಮ್ಮ ಪತ್ರಗಳು

ಸತಿಸಾವಿತ್ರಿ ಸರಿಗಟ್ಟಿದ ಸೊಸೆ ಸುಜಾತ



ಮಾನ್ಯರೆ,

ಮೈಸೂರಿನ ಸಿದ್ಧಾರ್ಥನಗರ ಬಡಾವಣೆಯ ನಿವೃತ್ತ ಇಂಜಿನಿಯರ್ ಸುರೇಶ್‌ರವರ ಧರ್ಮಪತ್ನಿ ಸುಜಾತ ಅವರು ವಯೋಸಹಜವಾಗಿ ನಡೆಯಲಾಗದೆ ಹಾಸಿಗೆ ಹಿಡಿದಿದ್ದ ಹಾಗೂ ಶತಾಯುಷಿ ಸಮೀಪ ಇರುವ ತನ್ನ ಅತ್ತೆಯನ್ನು ಯಮನ ಬಾಯಿಂದ ಬಿಡಿಸಿ ತಂದಿರುವ ಧೈರ್ಯ ಮತ್ತು ಸಾಹಸಕ್ಕೆ ಯಾವ ಮಟ್ಟಕ್ಕೆ ಮೆಚ್ಚುಗೆ ವ್ಯಕ್ತಪಡಿಸಬೇಕೋ ತಿಳಿಯದು.

ಮೆಚ್ಚುಗೆಯನ್ನೂ ಮೀರಿದ ದಿಟ್ಟ ಮಹಿಳೆ ಇವರು. ಇಲ್ಲಿಯವರೆಗೆ ಗಂಡನನ್ನು ಯಮನ ಸಾವಿನ ಕುಣಿಕೆಯಿಂದ ಪಾರು ಮಾಡಿದ ಪುರಾಣದ ಕಥೆಯಲ್ಲಿನ ಸತಿಸಾವಿತ್ರಿಯ ಹೆಸರನ್ನು ಕೇಳಿದ್ದೆವು. ಆದರೆ ಇಂದು ಅತ್ತೆಯನ್ನು ಸಾವಿನ ಮನೆಯಿಂದ ಕರೆ ತಂದದ್ದನ್ನು ಕಣ್ಣಾರೆ ನೋಡಿದ್ದೇವೆ, ಇವರು 'ಸೊಸೆ ಸುಜಾತ', ಚಿರತೆ ಅವರ ಮನೆಯತ್ತ ನಡೆದ ದಾರಿಯಲ್ಲೇ ಎಂದಿನಂತೆ ನಾನು ಅಗ ತಾನೆ ಐದತ್ತು ನಿಮಿಷಗಳ ಅಂತರದಲ್ಲಿ ವಾಯುವಿಹಾರಕ್ಕೆ ಹೋಗಿದ್ದೆ. ದರ್ಶನದ ಭಾಗ್ಯ ನನಗಿರಲಿಲ್ಲ. ವೀಡಿಯೊದಲ್ಲಿ ಅದರ ಗಾತ್ರ ನೋಡಿ ಬಹಳವೇ ಗಾಬರಿ ಆಯಿತು.

ನಮ್ಮ ಸಮಾಜದಲ್ಲಿ ಅತ್ತೆ–ಸೊಸೆ ಬಾಂಧವ್ಯ ಹೇಗಿರುತ್ತೆ ಎಂಬುದನ್ನು ನೋಡಿ, ಕೇಳಿ ಅನುಭವಿಸಿದ್ದೇವೆ. ಅತ್ತೆ ಇಲ್ಲದ ಮನೆಯ ಹುಡುಗ ಬೇಕು ಎನ್ನುವ ಕಾಲಘಟ್ಟದಲ್ಲಿ, ಇಡೀ ಮಹಿಳಾ ವರ್ಗಕ್ಕೆ ಮಾದರಿಯಾಗಿ ಕಂಡರು ಮಹಾಮಾತೆ ಸೊಸೆ ಸುಜಾತ ಅವರು. ಇತಿಹಾಸದ ಪುಟದಲ್ಲಿ ಇವರ ಹೆಸರು ಸೇರುವ ಸಾಹಸ ಕಾರ್ಯ ಇವರದ್ದಾಗಿದೆ.

ಇವರ ಶೌರ್ಯಗಾಥೆಯು ಮನೆ ಮನೆಗಳಿಗೆ ತಲುಪಲಿ ಎಂಬ ಉದ್ದೇಶದಿಂದ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರು ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿಯನ್ನು ನೀಡುವ ಭರವಸೆ (ಮೈ.ಮಿತ್ರ 19–04–2026) ನೀಡಿರುವುದು ಶ್ಲಾಘನೀಯ. ಚಾಮುಂಡಿಬೆಟ್ಟದ ತಪ್ಪಲಿನ ಬಡಾವಣೆಯ ಮನೆಗೆ ಚಿರತೆ ರೂಪದಲ್ಲಿ ಸಾಕ್ಷಾತ್ ಚಾಮುಂಡೇಶ್ವರಿ ದೇವಿಯೇ ಪ್ರವೇಶ ಮಾಡಿ ವೃದ್ಧ ಅತ್ತೆಯ ಸೇವೆಯನ್ನು ಕಾಯಾ–ವಾಚಾ–ಮನಸಾ ಭಕ್ತಿಯಿಂದ ಮಾಡುತ್ತಿರುವುದನ್ನು ನೈಜವಾಗಿ ತೋರಿಸುವ ಮೂಲಕ ಅತ್ತೆ–ಸೊಸೆ ಸಂಬಂಧವು ಹೇಗಿರಬೇಕು ಎಂಬುದನ್ನು ಜನತೆಗೆ ತಿಳಿಸಿದ್ದಾಳೆ ಎಂಬುದು ನಮ್ಮ ಮೈಸೂರಿನ ಜನರ ನಂಬಿಕೆಯಾಗಿದೆ. ಮಾಧ್ಯಮಗಳಲ್ಲಿ ದೃಶ್ಯ ನೋಡಿದ ಬಹಳಷ್ಟು ಗಂಡಸರು ಅಂದುಕೊಳ್ಳುತ್ತಿದ್ದಾರೆ; ನನಗೂ ಇಂಥಹ ಹೆಂಡತಿ ಇದ್ದಿದ್ದರೆ ನನ್ನಮ್ಮ ಇನ್ನಷ್ಟು ದಿನ ಬದುಕಿರುತ್ತಿದ್ದಳು ಎಂದು! ಶ್ರೀಮತಿ ಸುಜಾತ ಸುರೇಶ್ ಅವರೇ ನಿಮಗೆ ಕೋಟಿ ಕೋಟಿ ನಮನಗಳು.

–ಮಿರ್ಲೆಚಂದ್ರಶೇಖರ, ಲೇಖಕರು, ಮೈಸೂರು.

ಅಪಘಾತ ಸಂಭವಿಸುವ ಮುನ್ನ ರಸ್ತೆ ದುರಸ್ತಿಗೊಳಿಸಿ

ಮಾನ್ಯರೆ,

ಮೈಸೂರಿನ ಪ್ರಮುಖ ರಸ್ತೆಗಳಲ್ಲಿ ಮೈಸೂರಿನ ಹೆಬ್ಬಾಳ ಇಂಡಸ್ಟ್ರಿಯಲ್ ಏರಿಯಾದ ರಸ್ತೆಯು ಒಂದು. ಈ ರಸ್ತೆಯು ಸುಮಾರು ವರ್ಷಗಳಿಂದ ಹದಗೆಟ್ಟಿದ್ದು, ಇತ್ತಕಡೆ ಅಧಿಕಾರಿಗಳು ಗಮನಹರಿಸದೆ ಈ ರಸ್ತೆಯು ಅಪಘಾತಗಳಿಗೆ ಆಹ್ವಾನಿಸುತ್ತಿದೆ. ಈ ರಸ್ತೆಯ ಸುತ್ತಮುತ್ತ ಪ್ರಮುಖ ಖಾಸಗಿ ಕಂಪನಿಗಳಿರುವುದರಿಂದ ಈ ರಸ್ತೆಯಲ್ಲಿ ಸಾರ್ವಜನಿಕರು ಹಾಗೂ ಸಂಸ್ಥೆಯಲ್ಲಿ ಕೆಲಸ ಮಾಡುವಂತಹ ಉದ್ಯೋಗಿಗಳಿಗೆ ಸಂಚರಿಸಲು ಹರಸಾಹಸ ಪಡುವಂತಾಗಿದೆ. ಇದು ತುಂಬಾ ಜನಜಂಗುಳಿ ಇರುವಂತಹ ರಸ್ತೆಯಾಗಿದ್ದು, ಈ ರಸ್ತೆಯ ಪಕ್ಕದಲ್ಲಿ ಶಾಲೆಯೂ ಇರುವುದರಿಂದ ಶಾಲೆಯ ಮಕ್ಕಳು ಕೂಡ ಭಯ ದಿಂದ ರಸ್ತೆಯನ್ನು ದಾಟುವಂತಹ ಸನ್ನಿವೇಶ ಉದ್ಭವಿಸಿದೆ. ಶಾಲೆಯ ಬಿಡುವಿನ ಸಮಯದಲ್ಲಿ ಮಕ್ಕಳು ತುಂಬಾ ಜಾಗರೂಕತೆಯಿಂದ ಓಡಾಡುವಂತಾಗಿದೆ. ಮೈಸೂರು ನಗರವು ಸ್ವಚ್ಛ ನಗರಗಳಲ್ಲಿ ಹೆಸರುವಾಸಿಯಾಗಿದ್ದು ಇಂತಹ ರಸ್ತೆಗಳ ಕಡೆ ಗಮನಹರಿಸಿ ಯಾವುದೇ ರೀತಿಯ ಅಹಿತಕರ ಘಟನೆಗಳು ನಡೆಯದಂತೆ ಮುನ್ನೆಚ್ಚರಿಕೆ ವಹಿಸಬೇಕು. ಈ ರಸ್ತೆಯಲ್ಲಿ ಸಿಗ್ನಲ್ ಅಳವಡಿಸುವುದು ಸೂಕ್ತ.

–ಸೈಯದ್ ಅಫ್ತಾಬ್, ಪತ್ರಕರ್ತ ಮೈಸೂರು.

ಪಾರಂಪರಿಕ ಕಟ್ಟಡಗಳ ಮಾಹಿತಿ ಫಲಕಗಳ ಹೀನಸ್ಥಿತಿ

ಮಾನ್ಯರೆ,

ಮೈಸೂರು ಮಹಾರಾಜರ ಕಾಲದಲ್ಲಿ ನಿರ್ಮಾಣಗೊಂಡ ಕಟ್ಟಡಗಳು ಇಂದಿಗೂ ಸದೃಢವಾಗಿ ಕಂಗೊಳಿಸುತ್ತಾ ಇರುವುದು ಮೈಸೂರಿನ ಭವ್ಯ ಪರಂಪರೆಗೆ ಸಾಕ್ಷಿಯಾಗಿವೆ.ಇಂತಹ ಪಾರಂಪರಿಕ ಕಟ್ಟಡಗಳ ಎದುರುಗಡೆ ಮಾಹಿತಿ ನೀಡುತ್ತಾ ಇದ್ದ ಫಲಕಗಳ ಸ್ಥಿತಿ ಹೇಳತೀರದಾಗಿದೆ.ಮಾಹಿತಿ ಫಲಕಗಳು ಪ್ರವಾಸಿಗರಿಗೆ ಹಾಗೂ ಸ್ಥಳೀಯರಿಗೆ ಕಟ್ಟಡಗಳ ಬಗ್ಗೆ ಐತಿಹಾಸಿಕ ಹಿನ್ನೆಲೆಯುಳ್ಳ ಸಂಗತಿಯನ್ನು ಸಂಕ್ಷಿಪ್ತವಾಗಿ ನೀಡಲು ನೆರವಾಗುತ್ತಿದ್ದವು.ಮೈಸೂರು ಮಹಾನಗರ ಪಾಲಿಕೆಯು, ಬಹುತೇಕ ಮಾಹಿತಿ ಫಲಕಗಳನ್ನು ಸೂಕ್ತ ರೀತಿಯಲ್ಲಿ ನಿರ್ವಹಿಸದೆ ಇರುವ ಕಾರಣ ಮಸುಕಾಗಿ ಹಾಗೂ ಅಳಿಸಿ ಹೋಗಿದ್ದು, ಕಟ್ಟಡಗಳು ಮಾಹಿತಿ ಫಲಕಗಳನ್ನು ಸರಿಪಡಿಸಿ ಎಂದು ಕೈಬೀಸಿ ಕರೆಯುವಂತೆ ಬಾಸವಾಗುತ್ತಿದೆ. ಆದಷ್ಟು ಬೇಗ ಮಹಾನಗರ ಪಾಲಿಕೆಯ ಆಯುಕ್ತರು ಇತ್ತ ಕಡೆ ಗಮನ ಹರಿಸಿ ಕಟ್ಟಡಗಳ ಬಗ್ಗೆ ಮಾಹಿತಿ ನೀಡುವ ಫಲಕಗಳನ್ನು ಸರಿಪಡಿಸಿ ಪ್ರಾವಾಸಿಗರಿಗೆ, ಸ್ಥಳೀಯರಿಗೆ ಕಟ್ಟಡಗಳ ಬಗ್ಗೆ ಮಾಹಿತಿ ಸಿಗುವಂತೆ ಮಾಡುವುದು ಸೂಕ್ತ

–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.

ವಿದ್ಯುತ್ ದರ ಏರಿಕೆ ಅವೈಜ್ಞಾನಿಕ


ಮಾನ್ಯರೆ,

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಮಂಡಳಿ (ಕೆಇಆರ್‌ಸಿ), ವಿದ್ಯುತ್ ದರವನ್ನು ಹೆಚ್ಚಳ ಮಾಡಿದೆ. ಆದರಲ್ಲೂ ಮೈಸೂರು ವಿಭಾಗದ ಚೆಸ್ಕಾಂ ಪ್ರತಿ ಯೂನಿಟ್ ವಿದ್ಯುತ್ ದರವನ್ನು 85 ಪೈಸೆಯಷ್ಟು ಏರಿಕೆ ಮಾಡಿರುವುದು ಅವೈಜ್ಞಾನಿಕ ತೀರ್ಮಾನ. ಇದು ಒಂದು ರೀತಿಯಲ್ಲಿ ಹಗಲು ದರೋಡೆ. ಈ ಬಿರು ಬೇಸಿಗೆಯಲ್ಲಿ ಸಾಮಾನ್ಯ ಮತ್ತು ಮಧ್ಯಮ ವರ್ಗದವರು ಫ್ಯಾನ್ ಬಳಕೆ ಸೇರಿದಂತೆ ಗೃಹ ಬಳಕೆಯ ವಿದ್ಯುತ್ ಅನ್ನು ಹೆಚ್ಚಾಗಿ ಬಳಸುತ್ತಾರೆ. ಇದರಿಂದಾಗಿ ಎಲ್ಲಾ ವರ್ಗದವರು ಸಹ ವಿದ್ಯುತ್ ಬಿಲ್ ಪಾವತಿಸುವ ಅನಿವಾರ್ಯತೆ ಉಂಟಾಗುತ್ತದೆ. ರಾಜ್ಯ ಸರ್ಕಾರ ಈಗ ನೀಡುತ್ತಿರುವ ಪ್ರತಿ ತಿಂಗಳು ಉಚಿತ 200 ಯೂನಿಟ್‌ಗಳವರೆಗಿನ ಗೃಹ ಬಳಕೆಯ ವಿದ್ಯುತ್ ಅನ್ನು ಪ್ರತಿ ತಿಂಗಳ 200 ಯೂನಿಟ್‌ಗಳಿಂದ 300 ಯೂನಿಟ್‌ಗಳವರೆಗೆ ಹೆಚ್ಚಿಸಬೇಕು. ಇಲ್ಲ ಈಗ ಹೆಚ್ಚು ಮಾಡಿರುವ ದರವನ್ನು ವಾಪಸ್ ಪಡೆಯಬೇಕು.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ಅಮೂಲ್ಯ ನೆನಪುಗಳ ಫ್ರೇಂ....

–ಆರ್.ಜಿ.ಸಿಂಗ್
ಕಾರ್ಯದರ್ಶಿ, ರಾಮಸನ್ಸ್ ಕಲಾ ಪ್ರತಿಷ್ಠಾನ




ಈ ಛಾಯಾಚಿತ್ರವು ಮೈಸೂರು ಅರಮನೆಯ ಕಲ್ಯಾಣ ಮಂಟಪ (ನವಿಲು ತೊಟ್ಟಿ)ದಲ್ಲಿ ತೆಗೆದದ್ದಾಗಿದೆ. ಇದರಲ್ಲಿ ನವ ದಂಪತಿಯಾದ ರಾಜಕುಮಾರ ಜಯಚಾಮರಾಜೇಂದ್ರ ಒಡೆಯರ್ ಹಾಗೂ ಅವರ ವಧು ರಾಜಕುಮಾರಿ ಸತ್ಯ ಪ್ರೇಮಕುಮಾರಿ ಅವರನ್ನು ಕಾಣಬಹುದು. ಸತ್ಯ ಪ್ರೇಮಕುಮಾರಿಯವರು ಬುಂದೇಲ ರಜಪೂತರ ವಂಶಸ್ಥರಿಗೆ ಸೇರಿದ ಚಾರ್ಖರಿ ರಾಜ್ಯದ ಜಿಗಿನಿಯ ಭಾನು ಪ್ರತಾಪ್ ಸಿಂಗ್ ಜು ದೇವ್ ಬಹದ್ದೂರ್ ಅವರ ಪುತ್ರಿ. ಈ ವಿವಾಹ ಮಹೋತ್ಸವವು 1938ರ ಮೇ 15ರಂದು ನೆರವೇರಿತು.

ವಿವಾಹದ ವಿಧಿವಿಧಾನದ ಭಾಗವಾಗಿ ದಂಪತಿ ಪರಸ್ಪರ ತಮ್ಮ ಕಿರುಬೆರಳುಗಳನ್ನು ಜೋಡಿಸಿಕೊಂಡಿರುವುದನ್ನು ಸಹ ಚಿತ್ರದಲ್ಲಿ ಕಾಣಬಹುದು. ಇದು ಪತಿ ಮತ್ತು ಪತ್ನಿ ಇಬ್ಬರೂ ಔಪಚಾರಿಕವಾಗಿ ಒಪ್ಪಿಕೊಳ್ಳುವ ಸಂಕೇತ. ಕಿರುಬೆರಳುಗಳನ್ನು ಪರಸ್ಪರ ಜೋಡಿಸುವ ಪದ್ಧತಿಯನ್ನು 'ಪಾಣಿಗ್ರಹಣ' ಎಂದು ಕರೆಯಲಾಗುತ್ತದೆ. ಇದು ದಾಂಪತ್ಯದ ಹೊಸ ಜೀವನವನ್ನು ಸೂಚಿಸುತ್ತದೆ. ಜೊತೆಗೆ ಇದು ಗೃಹಸ್ಥನಾಗಿ ವರನು ತನ್ನ ಕರ್ತವ್ಯ ಪಾಲಿಸುವ ಭರವಸೆಯ ಭಾಗವೂ ಆಗಿದೆ.

1938ರ ಸರ್ಕಾರದ ಗೆಜೆಟಿಯರ್‌ನಲ್ಲಿ ಉಲ್ಲೇಖಿಸಿರುವ ಪ್ರಕಾರ, 'ಅಂದು ರಾಜ್ಯದೆಲ್ಲೆಡೆ ಬಾರೀ ಹರ್ಷೋದ್ಗಾರ ವ್ಯಕ್ತವಾಗಿತ್ತು. ಪ್ರಮುಖ ಧಾರ್ಮಿಕ ಕೇಂದ್ರಗಳು ಮತ್ತು ತಿರುಪತಿಯಲ್ಲಿ ವಿಶೇಷ ಪೂಜೆ ಹಾಗೂ ಪ್ರಾರ್ಥನೆಗಳು ನಡೆದವು. ಅರಮನೆಯ ಜಯಮಾರ್ತಾಂಡ ದ್ವಾರದಿಂದ ಹಿಡಿದು ಪ್ರಮುಖ ಬೀದಿಗಳವರೆಗೆ 'ಮಹಾರಾಜ ಚಿರಾಯುವಾಗಲಿ' ಘೋಷಣೆಗಳನ್ನು ಹೊಂದಿರುವ ಬ್ಯಾನರ್‌ಗಳನ್ನು ಅಳವಡಿಸಲಾಗಿತ್ತು. ನಿಗದಿತ ಸಮಯದಲ್ಲಿ ರಾಜಕುಮಾರ ಜಯಚಾಮರಾಜೇಂದ್ರ ಒಡೆಯರ್, ತಮ್ಮ ಬಂಧುಗಳು ಹಾಗೂ ಆಸ್ಥಾನಿಕರೊಂದಿಗೆ ಅರಮನೆಯಿಂದ ಹೊರಬಂದು, ಅಲಂಕೃತ ಬಿಳಿ ಕುದುರೆಗೆ ಕಬ್ಬು ತಿನ್ನಿಸಿ ಮುಂದೆ ಸಾಗಿದರು. ನಂತರ ರಾಜ ದಂಪತಿಯನ್ನು ಆನೆಯ ಮೇಲೆ ಚಿನ್ನದ ಅಂಬಾರಿಯಲ್ಲಿ ಕೂರಿಸಿ ಮೆರವಣಿಗೆಯಲ್ಲಿ ಕರೆದೊಯ್ಯಲಾಯಿತು'.

ಶ್ರೀಮದೇರಾಮಾನುಜಾಚಾರ್ಯ ನಮಃ

ಭಗವಾನ್ ಶ್ರೀರಾಮ ಮತ್ತು ಭಗವಾನ್ ಶ್ರೀಕೃಷ್ಣ ಅವತಾರ ವಿಶೇಷಗಳಿಗೆ ಪ್ರಸಿದ್ಧವಾದ ಅಯೋಧ್ಯಾ ಮತ್ತು ಮಥುರಾ ಕ್ಷೇತ್ರಗಳ ರೀತಿಯಲ್ಲಿ ಯತಿರಾಜ ಶ್ರೇಷ್ಠ ಶ್ರೀರಾಮಾನುಜರ ಅವತಾರದಿಂದ ಭೂತಪುರಿ ಎಂಬ ಪೆರಂಬದೂರು ಸ್ಥಳವು ದಿವ್ಯ ಕ್ಷೇತ್ರವಾಗಿ ಪುಣ್ಯತಮವಾಗಿದೆ. ಕಲಿಸಂವತ್ಸರ 4118ಕ್ಕೆ ಸಮನಾದ ತಿಂಗಳ ಸಂವತ್ಸರ, ಕ್ರಿಶ 1017 ಚಿತ್ತಿರೈಮಾಸದ ಶುಕ್ಲಪಕ್ಷ ಪಂಚಮೀ, ಗುರುವಾರ ಮಧ್ಯಾಹ್ನದಲ್ಲಿ ಆರ್ದ್ರಾ ನಕ್ಷತ್ರದಿಂದ ಕೂಡಿದ ಕರ್ಕಾಟಕ ಲಗ್ನದಲ್ಲಿ ಹಾರೀತ ಗೋತ್ರದ ಆಸೂರಿ ಸರ್ವಕ್ರತು ವಿದ್ವಾಂಸ ಕೇಶವ ದೀಕ್ಷಿತರು ಮತ್ತು ಧರ್ಮಪತ್ನಿ ಕಾಂತಿಮತಿದೇವಿಯವರಿಗೆ ಸುಪುತ್ರರಾಗಿ ಆಚಾರ್ಯರು ಜನಿಸಿದರು. ಮಗುವಿಗೆ ತಂದೆಯು ಇಳೈಆಳ್ವಾರ್ ಎಂದು ನಾಮಕರಿಸಿದರು.



ಇಂದು ಶ್ರೀರಾಮಾನುಜಾಚಾರ್ಯ ಜಯಂತಿ. ತನ್ನಿಮಿತ್ತ ಈ ಲೇಖನ

ಕಾಲಕ್ರಮೇಣ ಸಕ್ರಮವಾಗಿ ಚೌಲೋಪನಯನಾದಿಗಳನ್ನು ಮಾಡಿಸಿ, ವೇದಾಧ್ಯಯನ ಮತ್ತು ನಿತ್ಯಾನು ಸಂಧಾನಗಳನ್ನು ತಂದೆಯವರೇ ಅಭ್ಯಾಸ ಮಾಡಿಸಿದರು. ಮಗುವನ್ನು ಸೋದರ ಮಾವನವರಾದ ಶ್ರೀಶೈಲಪೂರ್ಣರು ಮಗುವು ಆದಿಶೇಷನ ಅವತಾರವೆಂದರಿತು ಲಕ್ಷ್ಮಣಸ್ವಾಮಿಯ ಪುನರವತಾರಿ ಎಂದು ರಾಮಾನುಜ ಎಂದು ಕರೆದರು. ಮುಂದೆ ಬಾಲಕನನ್ನು ಶಾಸ್ತ್ರಾಭ್ಯಾಸಕ್ಕಾಗಿ ಕಾಂಚಿಪುರದಲ್ಲಿನ ಮಹಾ ವೇದಾಂತಿ ಎಂದು ಪ್ರಸಿದ್ಧರಾದ ಯಾದವಪ್ರಕಾಶರೆಂಬ ಪಂಡಿತರಲ್ಲಿ ಸೇರಿಸಿದರು.

ರಾಮಾನುಜರು ಆಶ್ರಮವಾಸಿಯಾಗಿರುವಾಗಲೇ ರಾಜಕುಮಾರಿಗೆ ಹಿಡಿದಿದ್ದ ಬ್ರಹ್ಮರಾಕ್ಷಸನಿಗೆ ಮೋಕ್ಷ ಪ್ರಸಾದಿಸಿದರು. ಕಂಚಿಯಲ್ಲಿ ಶ್ರೀವರದರಾಜಸ್ವಾಮಿಯ ಸೇವೆಮಾಡುತ್ತಾ ತಮ್ಮನ್ನು ಬಾಧಿಸುತ್ತಿದ್ದ ಹಲವಾರು ಸಂದೇಹಗಳನ್ನು ಶ್ರೀದೇವರಾಜಸ್ವಾಮಿ ಕಾಂಚಿಪೂರ್ಣರೆಂಬ ಭಕ್ತಾಗ್ರೇಸರರ ಮೂಲಕವಾಗಿ ಸಂಶಯವನ್ನು ಪರಿಹರಿಸಿಕೊಂಡರು. ಸ್ವಾಮಿಯ ತಿರುಮಂಜನಕ್ಕೆ ತೀರ್ಥವನ್ನು ತಂದುಕೊಡುವ ಕೈಂಕರ್ಯದಲ್ಲಿ ನಿರತರಾದರು. ಶ್ರೀರಾಮಾನುಜರು ಸಂಸಾರದಲ್ಲಿ ಜಿಗುಪ್ಸೆ ಹೊಂದಿ, ಮಡದಿ ರಕ್ಷಂಬಾಳ್ ಅವರನ್ನು ತವರು ಮನೆಗೆ ಕಳುಹಿಸಿ ಶ್ರೀ ವರದರಾಜನ ಸನ್ನಿಧಾನದಲ್ಲಿ ಸನ್ಯಾಸ ಸ್ವೀಕರಿಸಿದರು.

ಮುಂದೆ ಗುರುಮುಖವಾಗಿ ತತ್ವನಿಷ್ಕರ್ಷೆಯನ್ನು ಮಾಡಿದ ಶ್ರೀರಾಮಾನುಜರಿಗೆ ಪರಮಗುರುವಾದ ಯಮುನಾಚಾರ್ಯರ ಅಂತಿಮ ಸಂದೇಶ ಮನವರಿಕೆಯಾಗಿ ಅದರಂತೆ ಪ್ರಾಚೀನತಮವಾದ ಪರಮಋಷಿಗಳ ದರ್ಶನ ಸರಣಿಯನ್ನು ಬ್ರಹ್ಮಸೂತ್ರಗಳನ್ನು ರಚಿಸಿದ ಪರಾಶರ್ಯರ ಅಂತೇವಾಸಿಯಾದ ಭೋದಾಯನರ ವಿಪುಲವಾದ ವೃತ್ತಿ ಎಂಬ ಗ್ರಂಥವನ್ನು ಅವಲಂಬಿಸಿ ಇತರ ಪ್ರಾಚೀನ ಮಹರ್ಷಿಗಳ ವ್ಯಾಖ್ಯಾನಗಳನ್ನು, ಪರಂಪರೆಗಳನ್ನು ಪರಿಶೀಲಿಸಿ ಶ್ರೀಭಾಷ್ಯವೆಂದು ಶ್ರೀಶಾರದಾಪೀಠಸ್ಥಿತೆಯಾದ ಸರಸ್ವತಿಯಿಂದ ಸ್ತುತಿಪಡೆದ ಶಾರೀರಕ ಮೀಮಾಂಸಾ ಭಾಷ್ಯವನ್ನು ರಚಿಸಿದರು.

ನಂತರ ರಾಮಾನುಜರು ಶ್ರೀರಂಗಕ್ಕೆ ತೆರಳಿ ಅಲ್ಲಿ ಶ್ರೀರಂಗನಾಥನ ಅಣತಿಯಂತೆ ದೇವಾಲಯದ ಕಾರ್ಯನಿರ್ವಾಹವನ್ನು ಹೊತ್ತು ಶ್ರೀರಂಗನಾಥನ ಸೇವೆಯಿಂದಲೇ ಉಡೈಯವರ್ ಎಂಬ ಹೆಸರು ಪಡೆದರು. ಶ್ರೀವರದರಾಜಸ್ವಾಮಿಯ ಪರಮಭಕ್ತರಾಗಿ ಕೃಪೆಯಿಂದ ಅಧಿಕ ವಿದ್ಯೆಯನ್ನು ಪಡೆದು ಶ್ರೀರಾಮಾನುಜರು ಅಶೇಷಚಿದಚಿದ್ವಿಶಿಷ್ಟನಾದ ಶ್ರೀಮನ್ನಾರಾಯಣನೊಬ್ಬನೇ ತತ್ವ ಎಂದು ಸಕಲ ವೇದ ಶಾಸ್ತ್ರ ಸ್ಮೃತೀತಿಹಾಸ, ಪುರಾಣಗಳ ಸಿದ್ಧಾಂತ ಸಾರವಾಗಿ ವಿಶಿಷ್ಟಾದ್ವೈತ ಸಿದ್ಧಾಂತವನ್ನು ಪ್ರತಿಪಾದಿಸಿದರು. ಹಿಂದುಳಿದವರಿಗೂ ಭಕ್ತಿಮಾರ್ಗದ ಆಚರಣೆ ಬೋಧಿಸಿ ಶ್ರೀರಾಮಾನುಜಾಚಾರ್ಯರಾಗಿ ಖ್ಯಾತಿ ಪಡೆದರು. ಶ್ರೀರಾಮಾನುಜಾಚಾರ್ಯರು ಬ್ರಹ್ಮಸೂತ್ರಕ್ಕೆ ವಿಶಿಷ್ಟಾದ್ವೈತಾನುಸಾರ ಭಾಷ್ಯವನ್ನು ರಚಿಸಿ ಅದಕ್ಕೆ ಶ್ರೀಭಾಷೆ ಎಂದು ಕರೆದುದರಿಂದ ಇವರಿಗೆ ಶ್ರೀಭಾಷ್ಯಾಕಾರರೆಂದು ಹೆಸರಾಯಿತು. ಇವರು ಭಾಷ್ಯವೇ ಅಲ್ಲದೇ ವೇದಾಂತ ಸಾರ, ವೇದಾಂತ ದೀಪ, ವೇದಾರ್ಥ ಸಂಗ್ರಹ, ಗಧ್ಯತ್ರಯ, ಉಡೈಯವರ್ ನಿತ್ಯಂ ಮತ್ತು ಗೀತಾ ಭಾಷ್ಯಗಳನ್ನು ರಚಿಸಿ ಯತಿಶ್ರೇಷ್ಠರಾಗಿದ್ದಾರೆ.

ಶ್ರೀರಾಮಾನುಜಾಚಾರ್ಯರು ಎಲ್ಲೆಡೆ ಧರ್ಮಪ್ರಸಾರ ಮಾಡಿ ತಿರುಮಲೈಗೆ ಹೋಗಿ ಶ್ರೀ ಶ್ರೀನಿವಾಸದೇವರಿಗೆ ಶಂಖಚಕ್ರಧಾರಣೆ ಮಾಡಿಸಿದ ಕೀರ್ತಿವಂತರು. ಸ್ವಾಮಿಯ ವೃಕ್ಷಸ್ಥಳಕ್ಕೆ ಅಲರ್‌ಮೇಲ್ ಮಂಗ ತಾಯಾರ್ ಅವರನ್ನೂ, ಭೂದೇವಿಯನ್ನು ಪ್ರತಿಷ್ಠಾಪಿಸಿ ತಿರುಮಲ ಶ್ರೀನಿವಾಸನಿಗೆ ಮಾವನವರಾದರು ಎಂಬುದಾಗಿ ಪ್ರತೀತಿ. ದೆಹಲಿಯ ಸುಲ್ತಾನನ ಮನೆಯಲ್ಲಿ ನೆಲೆಸಿದ್ದ ರಾಮಪ್ರೀಯ ಮೂರ್ತಿಯನ್ನು ಶೆಲ್ವಪಿಳ್ಳೈ ಬಾ ಎಂದು ಕರೆದು ಮೇಲುಕೋಟೆಯಲ್ಲಿನ ಶ್ರೀಚೆಲುವನಾರಾಯಣ ಸ್ವಾಮಿಯ ಸನ್ನಿಧಿಯಲ್ಲಿ ಉತ್ಸವಮೂರ್ತಿಯನ್ನಾಗಿ ಸ್ಥಾಪಿಸಿ ಸ್ವಾಮಿಗೆ ತಂದೆಯಾದರು.

ಶ್ರೀರಾಮಾನುಜಾಚಾರ್ಯರು ಸ್ಥಾಪಿಸಿ, ಪ್ರಸಾರ ಮಾಡಿದ ವಿಶೇಷ ಧರ್ಮ ವಿಶಿಷ್ಟಾದ್ವೈತ ಸಿದ್ಧಾಂತವು ವೈದಿಕದರ್ಶನ, ಉಪನಿಷತ್ತುಗಳು, ಬ್ರಹ್ಮಸೂತ್ರ ಮತ್ತು ಭಗವದ್ಗೀತೆಗಳಿಂದ ಉದ್ಧೃತವಾದದ್ದು. ತತ್ವಹಿತ ಪುರುಷಾರ್ಥಗಳ ಮೇಲೆ ಮಹಾಮತಿಗಳು ಬೀರುವ ಒಂದು ನೋಟ, ತೋರುವ ಮಾರ್ಗ, ನಿರ್ದಿಷ್ಟಗೊಳಿಸಿರುವ ಗುರಿ ಈ ದರ್ಶನದಲ್ಲಿ ಗೋಚರಿಸುತ್ತದೆ ಎಂಬುದಾಗಿದೆ. ವಿಶಿಷ್ಟಾದ್ವೈತಿಗಳಿಗೆ ಉಭಯವೇದಾಂತ ಪ್ರವರ್ತಕರು ಎಂಬ ಬಿರುದುಂಟು. ಇವರನ್ನು ಶ್ರೀವೈಷ್ಣವರೆಂದು ಕರೆಯುತ್ತಾರೆ.


ಕನ್ನಡ ನಾಡಿನಲ್ಲಿ ಶ್ರೀರಾಮಾನುಜರು

ಕನ್ನಡನಾಡಿನಲ್ಲಿ ವಿಶಿಷ್ಟಾದ್ವೈತ ಸಿದ್ಧಾಂತವನ್ನು ಹರಡಿ, ಬೆಳೆಸಿದ ಕೀರ್ತಿ ಹೊಯ್ಸಳ ರಾಜ ವಿಷ್ಣುವರ್ಧನ ಅಥವಾ ಬಿಟ್ಟಿದೇವನಿಗೆ (ಕ್ರಿ.ಶ 1104–1141) ಸಲ್ಲುತ್ತದೆ. ಸಮರ್ಥನಾದ ಈ ಅರಸನ ನೆರವು ಶ್ರೀರಾಮಾನುಜಾಚಾರ್ಯರಿಗೆ ಅಯಾಚಿತವಾಗಿ ದೊರೆಯಿತು. ಶ್ರೀರಾಮಾನುಜಾಚಾರ್ಯರು ತಮಿಳುನಾಡಿನ ಪ್ರಾಂತ್ಯದಿಂದ ಅಚ್ಚಾನ್ ಎಂಬ ಇಬ್ಬರು ಶಿಷ್ಯರೊಂದಿಗೆ ಮೇಲ್ಮೋಗವಾಗಿ ಕಾವೇರಿ ನದಿತೀರದ ಜಾಡನ್ನೇ ಹಿಡಿದು ಕರ್ನಾಟಕಕ್ಕೆ ಸತ್ಯಮಂಗಲದ ಮೂಲಕ ಪ್ರವೇಶಿಸಿದರು. ಅಲ್ಲಿಂದ ಒಳದಾರಿಯಲ್ಲಿ ಕಾವೇರಿ ನದಿತೀರದಲ್ಲಿನ ರಾಮನಾಥಪುರ ಗ್ರಾಮಕ್ಕೆ ಬಂದು ಅಲ್ಲಿಂದ ಮಿರ್ಲೆ, ಸಾಲಿಗ್ರಾಮ ಗ್ರಾಮ ಮೂಲಕ ಮೇಲುಕೋಟೆಯ ಮಾರ್ಗದಲ್ಲಿನ ತೊಂಡನೂರಿಗೆ ಆಗಮಿಸಿದರು. ಇದು ಹೊಯ್ಸಳರಾಜರ ಉತ್ತರಗಡಿಯ ರಾಜಧಾನಿಯಾಗಿತ್ತು. ಅಲ್ಲಿ ಶ್ರೀರಾಮಾನುಜಾಚಾರ್ಯರು ರಾಜವಿಷ್ಣುವರ್ಧನನ್ನು ಸಂಧಿಸಿ ಆತನಮಗಳ ಮನೋವ್ಯಾಧಿಯನ್ನು ಪರಿಹರಿಸಿ ಆತನನ್ನು ತಮ್ಮ ಶಿಷ್ಯನಾಗಿ ಪರಿಗ್ರಹಿಸಿ ವಿಷ್ಣುವರ್ಧನ ಎಂದು ಮರುನಾಮಕರಣ ಮಾಡಿದರು. ನಂತರ ಮೇಲುಕೋಟೆಗೆ ತೆರಳಿದರು. ಶ್ರೀರಾಮಾನುಜಾಚಾರ್ಯರದ್ದು ಅಸಾಧಾರಣವಾದ ವ್ಯಕ್ತಿತ್ವ ದಷ್ಟಪುಷ್ಟವೂ, ಅಧೀನವೂ, ತೇಜೋಪುಂಜವೂ ಆದ ಮೂರ್ತಿ ಸ್ವರೂಪ ಪ್ರಸನ್ನವೂ ಪ್ರತಿಭಾ ಪ್ರತ್ಯತವೂ ಆದ ನುಡಿ. ಇವರನ್ನು ರಾಜಾವಿಷ್ಣುವರ್ಧನನು ಗುರುವಾಗಿ ಸ್ವೀಕರಿಸಿ ಇವರಿಂದ ಪ್ರಚಲಿತವಾದ ವಿಶಿಷ್ಟಾದ್ವೈತ ಸಿದ್ಧಾಂತಕ್ಕೆ ಅನುಪಮವಾದ ಸಹಕಾರ, ಪ್ರೋತ್ಸಾಹ ನೀಡಿದನು. ಮೇಲುಕೋಟೆಯಲ್ಲಿ ಶಿಥಿಲವಾಗಿದ್ದ ಶ್ರೀಚೆಲುವನಾರಾಯಣ ಸ್ವಾಮಿ ಎಂಬ ಉತ್ಸವ ವಿಗ್ರಹವನ್ನು ಹರಿಜನರ (ತಿರುಕುಲತ್ತಾರ್) ಸಹಾಯದಿಂದ ದೇವಾಲಯ ನಿರ್ಮಿಸಿದರು. ಹಾಗೂ ಹನ್ನೆರಡು ವರ್ಷಗಳ ಕಾಲ ಭಾಷ್ಯದ ಉಪದೇಶವನ್ನು ಮಾಡುತ್ತಾ ಶ್ರೀಚೆಲುವನಾರಾಯಣ ಸ್ವಾಮಿ ಸನ್ನಿಧಿಯಲ್ಲಿ ಪಂಚರಾತ್ರಾಗಮ ರೀತಿಯಲ್ಲಿ ತಮ್ಮ ಇಚ್ಛೆಯಂತೆ ಪೂಜಾ ಕೈಂಕರ್ಯವು ನಡೆಯಲು ಸೂಕ್ತ ವ್ಯವಸ್ಥೆ ಮಾಡಿ ಉಪಪತ್ತಿಗಳನ್ನು ಕಲ್ಪಿಸಿ ಐವತ್ತಾರು ಶಿಷ್ಯರಿಗೆ ವಹಿಸಿಕೊಟ್ಟು ಅಲ್ಲಿಂದ ತೆರಳಿದರು. ಅಂದಿನಿಂದ ಶ್ರೀಕ್ಷೇತ್ರ ಮೇಲುಕೋಟೆ ಶ್ರೀವೈಷ್ಣವರಿಗೆ ಶ್ರೀರಂಗ, ಕಾಂಚೀಪುರ, ತಿರುಪತಿಗಳ ಜೊತೆಗೆ ನಿತ್ಯಸ್ಮರಣೀಯವಾದ ದಿವ್ಯಕ್ಷೇತ್ರವಾಗಿ ಪರಿಣಮಿಸಿದೆ.

ಭಗವಾನ್ ಶ್ರೀರಾಮಾನುಜಾಚಾರ್ಯರು ಹೊಯ್ಸಳ ರಾಜ್ಯದಲ್ಲಿ ಸುಮಾರು 20 ವರ್ಷ ಕಾಲ ರಾಜಾಶ್ರಯದಲ್ಲಿ ಧರ್ಮ ಪ್ರಸಾರಗೊಳಿಸಿ ಶ್ರೀವೈಷ್ಣವ ದೇವಾಲಯಗಳನ್ನು ನಿರ್ಮಿಸಲು ಅವಕಾಶ ದೊರೆಯಿತು. ಅದ್ವಿತೀಯವಾದ ಬೇಲೂರಿನ ಶ್ರೀಚೆನ್ನಕೇಶವ ದೇವಾಲಯದ (ಕ್ರಿ.ಶ. 1117) ಜೊತೆಗೆ ಹಲವಾರು ಸ್ಥಳಗಳಲ್ಲಿ ಕೇಶವ–ಜನಾರ್ಧನ ಗುಡಿಗಳನ್ನೂ ನಿರ್ಮಿಸಿದರು. ಅಂತೆಯೇ ಸಾಲಿಗ್ರಾಮದಲ್ಲಿ ವಡಗು ನಂಬಿ ಎಂಬುವವರಿಗೆ ತಮ್ಮ ಪಾದುಕೆಗಳನ್ನು ಹಾಗೂ ಶ್ರೀಪಾದತೀರ್ಥ ಕರುಣಿಸಿದರು ಎಂಬುದಾಗಿ ತಿಳಿದುಬರುತ್ತದೆ. ಶ್ರೀರಾಮಾನುಜಾಚಾರ್ಯರು ತಮ್ಮ ಪ್ರತೀಕವಾದ ಮೂರ್ತಿ ನಿರ್ಮಿಸಿ ತಮ್ಮ ಶಕ್ತಿಯನ್ನೆಲ್ಲಾಧಾರೆ ಎರೆದು ಶಿಷ್ಯರೊಡನೆ ಆ ವಿಗ್ರಹದಿಂದ ಮಾತನಾಡಿಸಿ ಪ್ರತಿಷ್ಠಾಪಿಸಿದ್ದು ಇಂದಿಗೂ ಮೇಲು ಕೋಟೆಯಲ್ಲಿ ನೆಲೆಸಿದ್ದಾರೆ. ಈ ರೀತಿಯಾಗಿ ಶ್ರೀರಾಮಾನುಜಾ ಚಾರ್ಯರು ಕರ್ನಾಟಕದಲ್ಲಿ ಕ್ರಿ.ಶ. 1096ರಿಂದ 1118ರವರೆಗೆ ಇಪ್ಪತ್ತೆರಡು ವರ್ಷ ನೆಲೆಸಿ ಧರ್ಮಾನುಚರಣೆ ಮಾಡಿ ವಿಶಿಷ್ಟಾದ್ವೈತವನ್ನು ಪ್ರತಿಪಾದಿಸಿದ ನಂತರ ಶ್ರೀರಂಗಕ್ಕೆ ತೆರಳಿದರು.

ಕರ್ನಾಟಕವನ್ನು ಆಳಿದ ವಿಜಯನಗರ ಸಾಮ್ರಾಜ್ಯದ ಪ್ರಸಿದ್ಧ ಚಕ್ರವರ್ತಿಯಾಗಿದ್ದ ಶ್ರೀಕೃಷ್ಣದೇವರಾಯ, ಮೈಸೂರು ಸಂಸ್ಥಾನದ ಯದುವಂಶಜರಾದ ರಾಜ ಒಡೆಯರ್, ಕಂಠೀರವ ನರಸರಾಜ ಒಡೆಯರ್ ಮೇಲು ಕೋಟೆಯನ್ನು ಅಭಿವೃದ್ಧಿಪಡಿಸಿ ಶ್ರೀ ಚೆಲುವ ನಾರಾಯಣಸ್ವಾಮಿಗೆ ಅನರ್ಘ್ಯ ರತ್ನಾಭರಣಗಳನ್ನಿತ್ತು ಉತ್ಸವಾದಿ ಏರ್ಪಡಿಸಿದರು. ನಂತರದ ಮುಮ್ಮಡಿ ಕೃಷ್ಣರಾಜ ಒಡೆಯರ್ ಕಾಲದಲ್ಲಿ ಶ್ರೀವೈಷ್ಣವ ಕ್ಷೇತ್ರ ಮೇಲುಕೋಟೆಯನ್ನು ಸಮೃದ್ಧಗೊಳಿಸಿ ಕೃಷ್ಣರಾಜಮುಡಿ ಎಂಬ ರತ್ನಕೀರಿಟ, ಪಚ್ಚೆಯ ಹಾರಾದಿ ಗಳಲ್ಲದೆ ಅನೇಕ ಆಭರಣಗಳನ್ನು ಶ್ರೀಚೆಲುವ ನಾರಾಯಣ ಸ್ವಾಮಿಗೆ ಸಮರ್ಪಿಸಿ ಶ್ರೀಕೃಷ್ಣ ರಾಜಮುಡಿ ಬ್ರಹ್ಮೋತ್ಸವವನ್ನು ಏರ್ಪಡಿಸಿದ್ದು ಅನೂಚಾನವಾಗಿ ಇಂದಿಗೂ ಉತ್ಸವವು ಜಗದ್ವಿಖ್ಯಾತವಾಗಿದೆ.

ಸುಮಾರು 120 ವರ್ಷಗಳ ಕಾಲ ಭೂಲೋಕದಲ್ಲಿ ವಾಸವಾಗಿದ್ದು ವಿಶಿಷ್ಟಾದ್ವೈತ ಸಿದ್ಧಾಂತ ಸ್ಥಾಪಿಸಿ, ಪ್ರಚುರಪಡಿಸಿ ಶ್ರೀವೈಷ್ಣವ ಪಂಥ ಉದ್ಧಾರಮಾಡಿ, ಭಕ್ತಿಶರಣಾಗತಿಗಳನ್ನು ಬೋಧಿಸಿ ಇಲ್ಲಿಗೆ ತಮ್ಮ ಇಹಲೋಕದ ಜೀವನ ಸಾಕೆಂದರಿತು ಕ್ರಿ.ಶ.1137ರ, ಮಾಘಶುದ್ದ ದಶಮಿ ಶನಿವಾರ ಮದ್ಯಾಹ್ನ ಶ್ರೀರಂಗನಾಥನ ಗುಡಿಯೆಡೆಗೆ ತಲೆಯನ್ನಿಟ್ಟು ತಮ್ಮ ಶಿರಸ್ಸನ್ನು ಶಿಷ್ಯರಾದ ಎಂಬಾರರ ಮಡಲಿನಲ್ಲಿಯೂ, ತಮ್ಮ ಪಾದಗಳನ್ನು ವಡಗನಂಬಿಗಳವರ ಮಡಿಲಿನಲ್ಲಿಯೂ ಇರಿಸಿ ಅಳವಂದಾರರ ದಿವ್ಯವಿಗ್ರಹವನ್ನು ಧ್ಯಾನಿಸುತ್ತಾ ಪೆರಿಯನಂಬಿಗಳ ಪಾದುಕೆಗಳನ್ನು ಮುಂದಿರಿಸಿಕೊಂಡು ಪರವಾಸುದೇವನನ್ನು ಧ್ಯಾನಿಸುತ್ತಾ ಪರವಶರಾಗಿರಲು ಆತ್ಮವು ಶಿರಃಕಪಾಲವನ್ನು ಭೇದಿಸಿ ದೇಹತ್ಯಾಗ ಮಾಡಿ ವೈಕುಂಠವನ್ನು ಸೇರಿತು. ಇಂದಿಗೂ ಶ್ರೀರಂಗಂನಲ್ಲಿರುವ ಶ್ರೀ ರಂಗನಾಥಸ್ವಾಮಿಯವರ ದೇವಸ್ಥಾನದ ಆವರಣದಲ್ಲಿ ಸಂರಕ್ಷಿಸಿರುವ ಶ್ರೀ ರಾಮಾನುಜರ ಶರೀರವನ್ನು ನಿತ್ಯದರ್ಶನ ಪಡೆಯಬಹುದಾಗಿದೆ. ಧರ್ಮವೃದ್ಧಿಯನ್ನು ಸಹಿಸದ ಕಲಿಯನ್ನು ನಿವಾರಿಸಿದಂತಹ ಪ್ರಭಾವಶೀಲರಾದ ಉಡೈರವರ ರಾಮಾನುಜ ಎಂಬ ಚತುರಕ್ಷರ ಮಂತ್ರವನ್ನು ಅನುಸಂದಾನ ಮಾಡುವವರಿಗೆ ಜ್ಞಾನ, ಭಕ್ತ ವೈರಾಗ್ಯಗಳು ದೊರಕಿ ವೃದ್ಧಿಹೊಂದುವರು ಅಂತಹ ತಿರುನಾಮವನ್ನು ಅನುಸಂಧಾನ ಮಾಡಲು ಪ್ರಾರಂಭಿಸಿದೊಡನೆಯೇ ವಾಕಿನಲ್ಲಿ ಅಮೃತವು ತುಂಬಿಕೊಳ್ಳುವುದು, ಬ್ರಹ್ಮಹತ್ಯವೇ ಮೊದಲಾದ ಪಂಚ ಪಾತಕಗಳು ಸಮೂಲವಾಗಿ ನಾಶವಾಗುವುದು ಎಂಬುದಾಗಿ ಅನುಯಾಯಿಗಳ ನಂಬಿಕೆ. ಇಂತಹ ಪರಮಯತಿ ಶ್ರೀಮದ್‌ರಾಮಾನುಜಾಚಾರ್ಯರ ಜಯಂತಿ ಇದೇ ಏ.22ರಂದು ಸಂಭ್ರಮದಿಂದ ಎಲ್ಲೆಡೆ ಆಚರಿಸುತ್ತಿರುವುದು ಸಂತಸದ ವಿಷಯವಾಗಿದೆ.



ನಂ.ಶ್ರೀಕಂಠಕುಮಾರ್
ಮೈಸೂರು.
ಮೊ.9481067333

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಬಾಕಿ ವೇತನ ಸೇರಿದಂತೆ ಹಲವು ಬೇಡಿಕೆ ಈಡೇರಿಕೆಗೆ ಆಗ್ರಹಿಸಿ

ಬೆಂಗಳೂರಲ್ಲಿ ಸಾರಿಗೆ ನೌಕರರ ಮುಷ್ಕರ

ಮೈಸೂರಿಂದ 80ಕ್ಕೂ ಅಧಿಕ ನೌಕರರು ಭಾಗಿ

ಮೈಸೂರು, ಏ.21(ಎಂಟಿವೈ)– ಸರ್ಕಾರಿ ನೌಕರರಂತೆ ವೇತನ ಪರಿಷ್ಕರಣೆ ಮಾಡಿ ಬಾಕಿ ವೇತನ ಬಿಡುಗಡೆ ಮಾಡುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ ನಡೆಯುತ್ತಿರುವ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಒಕ್ಕೂಟದ ಮುಷ್ಕರದಲ್ಲಿ ಮೈಸೂರಿನ 80ಕ್ಕೂ ಹೆಚ್ಚು ಸಾರಿಗೆ ನೌಕರರು ಪಾಲ್ಗೊಂಡಿದ್ದಾರೆ.

ಪ್ರಯಾಣಿಕರು ಹಾಗೂ ಸಾರಿಗೆ ಸಂಸ್ಥೆಗೆ ಅಡ್ಡಿಯಾಗದಂತೆ ಸಾಂಕೇತಿಕ ಮುಷ್ಕರಕ್ಕೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಒಕ್ಕೂಟ ಕರೆ ನೀಡಿತ್ತು. ಈ ಹಿನ್ನೆಲೆಯಲ್ಲಿ ಬಸ್‌ಗಳ ಸಂಚಾರದಲ್ಲಿ ಯಾವುದೇ ವ್ಯತ್ಯಯವಾಗದಂತೆ ನೌಕರರು ಮುಷ್ಕರದಲ್ಲಿ ಪಾಲ್ಗೊಳ್ಳುವ ಮೂಲಕ ತಮ್ಮ ಬೇಡಿಕೆ ಈಡೇರಿಸುವಂತೆ ಹಕ್ಕೊತ್ತಾಯ ಮಾಡಿದ್ದಾರೆ.

ಮುಷ್ಕರದಲ್ಲಿ ರಾಜ್ಯದ ಎಲ್ಲಾ ಜಿಲ್ಲೆ ಹಾಗೂ ನಿಗಮಗಳ ಸಾರಿಗೆ ನೌಕರರು ಪಾಲ್ಗೊಂಡಿದ್ದು, ರಜೆ, ವಾರದ ರಜೆ, ದೀರ್ಘ ರಜೆ ಹಾಕಿರುವ ನೌಕರರು ಮಾತ್ರ ಮುಷ್ಕರದಲ್ಲಿ ಪಾಲ್ಗೊಳ್ಳುವಂತೆ ಸೂಚಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಮೈಸೂರಿಂದ ವಾರದ ರಜೆಯಲ್ಲಿದ್ದ 80ಕ್ಕೂ ಹೆಚ್ಚು ಮಂದಿ ಬೆಂಗಳೂರಿಗೆ ತೆರಳಿ ಫ್ರೀಡಂ ಪಾರ್ಕ್‌ನಲ್ಲಿ ನಡೆಯುತ್ತಿರುವ ಮುಷ್ಕರದಲ್ಲಿ ಪಾಲ್ಗೊಂಡರು.

ಸರ್ಕಾರ ರಾಜ್ಯದ ಸಾರಿಗೆ ಸಂಸ್ಥೆ ನೌಕರರ ಬೇಡಿಕೆ ಈಡೇರಿಸಬೇಕು. ನೌಕರರು ಎದುರಿಸುತ್ತಿರುವ ಸಮಸ್ಯೆ ಬಗೆಹರಿಸಬೇಕು. ಬಾಕಿ ವೇತನ ಬಿಡುಗಡೆ ಮಾಡಬೇಕು. ಸಾರಿಗೆ ನೌಕರರ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಬೇಕು. ಸರ್ಕಾರಿ ನೌಕರರಂತೆ ಸಾರಿಗೆ ನೌಕರರಿಗೂ ವೇತನ ಹೆಚ್ಚಳ ಮಾಡಬೇಕು. ಇನ್ನಿತರೆ ಅಗತ್ಯ ಸೌಲಭ್ಯ ಒದಗಿಸಬೇಕು ಎಂದು ಪ್ರತಿಭಟನಾನಿರತ ಸಾರಿಗೆ ನೌಕರರು ಆಗ್ರಹಿಸಿದರು.


ಚಿತ್ರದುರ್ಗ, ಯಾದಗಿರಿಯಲ್ಲಿ ಬಸ್ ಅಗ್ನಿಗಾಹುತಿ ಹಿನ್ನೆಲೆ; ಸಾರಿಗೆ ನಿಯಮ ಉಲ್ಲಂಘನೆ ವಿರುದ್ಧ

ಮೈಸೂರು ಆರ್‌ಟಿಓ ಅಧಿಕಾರಿಗಳ ಕಾರ್ಯಾಚರಣೆ



ಆರ್‌ಟಿಓ ಅಧಿಕಾರಿಗಳು ಪ್ರವಾಸಿ ವಾಹನಗಳನ್ನು ತಪಾಸಣೆ ಮಾಡುತ್ತಿರುವುದು.





ಮೈಸೂರು,ಏ.21(ಜಿಎ)–ಮೈಸೂರಿಗೆ ಆಗಮಿಸುತ್ತಿರುವ ರಾಜ್ಯ ಮತ್ತು ಅಂತರರಾಜ್ಯ ಪ್ರವಾಸಿ ವಾಹನಗಳ ಮೇಲೆ ನಿಗಾವಹಿಸಿರುವ ಮೈಸೂರು ಆರ್‌ಟಿಓ ಅಧಿಕಾರಿಗಳು ನಿಯಮ ಬಾಹಿರವಾಗಿ ಸಂಚರಿಸುತ್ತಿರುವ ವಾಹನಗಳನ್ನು ಜಪ್ತಿ ಮಾಡಿ ದಂಡ ವಿಧಿಸುತ್ತಿದ್ದಾರೆ.

ರಾಜ್ಯದಲ್ಲಿ ಇತ್ತೀಚೆಗೆ ಚಿತ್ರದುರ್ಗ ಮತ್ತು ಯಾದಗಿರಿಯಲ್ಲಿ ನಡೆದ ಬಸ್ ಅಫಘಾತದಲ್ಲಿ ಅಗ್ನಿ ಅವಘಡ ಸಂಭವಿಸಿ ದೊಡ್ಡ ಮಟ್ಟದಲ್ಲಿ ದುರಂತ ಉಂಟಾದ ಹಿನ್ನೆಲೆಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ನಿಯಮ ಬಾಹಿರವಾಗಿ ಸಂಚರಿಸುವ ವಾಹನಗಳ ಮೇಲೆ ನಿಗಾವಹಿಸುವಂತೆ ಸೂಚನೆ ಹಿನ್ನೆಲೆಯಲ್ಲಿ ಮೈಸೂರಿನ ಪೂರ್ವ ಮತ್ತು ಪಶ್ಚಿಮ ಆರ್‌ಟಿಓ ಅಧಿಕಾರಿಗಳು ಜಂಟಿ ಕಾರ್ಯಾಚರಣೆ ನಡೆಸುತ್ತಿದ್ದಾರೆ. ಪ್ರಮುಖವಾಗಿ ಮೈಸೂರಿಗೆ ಬರುತ್ತಿರುವ ಪ್ರವಾಸಿ ವಾಹನಗಳು ಅರಮನೆ, ಮೃಗಾಲಯ, ಚಾಮುಂಡಿ ಬೆಟ್ಟ ಮತ್ತು ಮೈಸೂರು–ಬೆಂಗಳೂರು, ನಂಜನಗೂಡು, ಮಾನಂದವಾಡಿ ಹುಣಸೂರು ರಸ್ತೆ ಹಾಗೂ ಪಾರ್ಕಿಂಗ್ ಮಾಡುವ ಸ್ಥಳಗಳಲ್ಲಿ ಅಧಿಕಾರಿಗಳು ಪ್ರತಿದಿನ 150ಕ್ಕೂ ಹೆಚ್ಚು ವಾಹನಗಳನ್ನು ತಪಾಸಣೆ ನಡೆಸಿ, ಆಲ್ ಇಂಡಿಯಾ ಪರ್ಮಿಟ್, ಬಸ್ ಒಳಾಂಗಣ, ಸುರಕ್ಷತಾ ವ್ಯವಸ್ಥೆಗಳು ಮತ್ತು ದಾಖಲೆಗಳನ್ನು ಪರಿಶೀಲಿಸಲಾಗುತ್ತಿದೆ ಎಂದು ಮೈಸೂರು ಪೂರ್ವ ವಿಭಾಗದ ಆರ್‌ಟಿಓ ಎಸ್.ಎನ್.ಮಧುರಾ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಪೂರ್ವ ಮತ್ತು ಪಶ್ಚಿಮ ವಿಭಾಗಗಳ ತಂಡಗಳಿಂದ ಈ ತಪಾಸಣೆ ನಡೆಯುತ್ತಿದೆ. ಹಿಂದೆ ಸಿಬ್ಬಂದಿ ಕೊರತೆ ಇದ್ದರೂ, ಈಗ ಅದು ನಿವಾರಣೆಯಾಗಿದ್ದು, ಬೇಸಿಗೆ ರಜಾದಿನಗಳಲ್ಲಿ ಸುರಕ್ಷತಾ ತಪಾಸಣೆ ತೀವ್ರಗೊಳಿಸಲಾಗಿದೆ. ಇತ್ತೀಚೆಗೆ ಚಿತ್ರದುರ್ಗ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ನಡೆದ ಭೀಕರ ಬಸ್ ಅಪಘಾತಗಳಲ್ಲಿ ಬೆಂಕಿ ಕಾಣಿಸಿಕೊಂಡು ಜೀವಹಾನಿ ಸಂಭವಿಸಿದ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರದ ಸೂಚನೆಯಂತೆ ಈ ಕ್ರಮ ಕೈಗೊಳ್ಳಲಾಗಿದೆ ಎಂದರು.

ಮೈಸೂರು ಪ್ರವಾಸಿ ನಗರವಾಗಿರುವುದರಿಂದ ಪ್ರತಿದಿನ 200ರಿಂದ 300 ವಾಹನಗಳು ನಗರ ಪ್ರವೇಶಿಸುತ್ತವೆ. ವಾರಾಂತ್ಯ ಹಾಗೂ ರಜಾದಿನಗಳಲ್ಲಿ ಈ ಸಂಖ್ಯೆ 500 ಮೀರುತ್ತದೆ. ನಮ್ಮ ರಾಜ್ಯದ ವಾಹನಗಳಲ್ಲಿ ಹೆಚ್ಚಿನ ಉಲ್ಲಂಘನೆಗಳು ಕಂಡುಬಂದಿಲ್ಲ. ಆದರೆ ಹೊರ ರಾಜ್ಯದ ವಾಹನಗಳಲ್ಲಿ ಹಲವು ನಿಯಮ ಉಲ್ಲಂಘನೆ ಪತ್ತೆಯಾಗಿವೆ. ಪ್ರಮುಖವಾಗಿ ಆಲ್ ಇಂಡಿಯಾ ಪರ್ಮಿಟ್ ಇಲ್ಲದೇ ವಾಹನಗಳು ಸಂಚರಿಸುತ್ತಿದ್ದು, ಅಂತಹ ವಾಹನಗಳಿಗೆ ಸ್ಥಳದಲ್ಲೇ 5,000 ರೂ. ದಂಡ ವಿಧಿಸಲಾಗುತ್ತಿದೆ. ಜೊತೆಗೆ ಚಾಲಕರ ವಾಹನ ಪರವಾನಿಗೆ ಹಾಗೂ ಆರ್‌ಸಿಗಳನ್ನು ಅಮಾನತು ಮಾಡಲಾಗುತ್ತಿದೆ. ನಿಯಮ ಪಾಲಿಸದ ವಾಹನಗಳನ್ನು ತಕ್ಷಣ ವಶಕ್ಕೆ ಪಡೆದು, ಅಗತ್ಯ ದಾಖಲೆಗಳನ್ನು ಸಲ್ಲಿಸಿದ ಬಳಿಕ ಬಿಡುಗಡೆ ಮಾಡಲಾಗುತ್ತದೆ ಎಂದು ತಿಳಿಸಿದರು.

ಏಪ್ರಿಲ್ 1, 2026ರಿಂದ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯವು ಆಲ್ ಇಂಡಿಯಾ ಟೂರಿಸ್ಟ್ ಪರ್ಮಿಟ್ ನಿಯಮಗಳಲ್ಲಿ ತಿದ್ದುಪಡಿ ಮಾಡಿದೆ. ಹೊಸ ನಿಯಮದ ಪ್ರಕಾರ, ಪ್ರವಾಸಿ ವಾಹನಗಳು ತಮ್ಮ ರಾಜ್ಯದ ಹೊರಗೆ ಗರಿಷ್ಠ 60 ದಿನಗಳ ಕಾಲ ಮಾತ್ರ ನಿರಂತರ ವಾಗಿ ಸಂಚರಿಸಲು ಅವಕಾಶ ಇದೆ. ಈ ಮೊದಲು ಇದು 90 ದಿನಗಳಾಗಿತ್ತು. ಪ್ರವಾಸಿ ವಾಹನಗಳು ತಮ್ಮ ರಾಜ್ಯದಿಂದ ಹೊರಗೆ ಪ್ರಯಾಣ ಪ್ರಾರಂಭಿಸಿ, ಮತ್ತೆ ಸ್ವಂತ ರಾಜ್ಯಕ್ಕೆ 60 ದಿನಗಳೊಳಗೆ ಮರಳಬೇಕು. ಈ ನಿಯಮ ಉಲ್ಲಂಘಿಸಿದರೆ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ ಎಂದು ತಿಳಿಸಿದರು.

ಜೆಎಸ್‌ಎಸ್ ಮಕ್ಕಳ ವಿದ್ಯಾರ್ಥಿನಿಲಯಕ್ಕೆ ಅರ್ಜಿ ಆಹ್ವಾನ

ಮೈಸೂರು,ಏ.21–ಮೈಸೂರಿನ ಬೋಗಾದಿ 2ನೇ ಹಂತದಲ್ಲಿರುವ ಜೆಎಸ್‌ಎಸ್ ಮಕ್ಕಳ ವಿದ್ಯಾರ್ಥಿನಿಲಯದ ಪ್ರವೇಶಕ್ಕೆ 5ರಿಂದ 10ನೇ ತರಗತಿವರೆಗೆ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಮಾಹಿತಿಗೆ ದೂರವಾಣಿ: 0821–2548212 (ಜೆಎಸ್‌ಎಸ್ ಮಹಾವಿದ್ಯಾಪೀಠದ ಹಾಸ್ಟೆಲ್ ವಿಭಾಗ), ಕೆ.ಎಸ್.ಗೌರಿಶಂಕರ್ 9741452271, ಡಿ.ಎಂ.ಮಧು 9620501469 ಸಂಪರ್ಕಿಸಬಹುದು.

ಬಸವ ಜಯಂತಿ ಆಚರಣೆ...




ಮೈಸೂರು ಕೇಂದ್ರೀಯ ಬಸ್ ನಿಲ್ದಾಣದಲ್ಲಿ ಬಸವ ಜಯಂತಿ ಆಚರಿಸಲಾಯಿತು. ಈ ವೇಳೆ ವಿಭಾಗೀಯ ಸಂಚಲನಾಧಿಕಾರಿ ಹೇಮಂತ್‌ಕುಮಾರ್, ಸಹಾಯಕ ಸಂಚಾರ ನಿರೀಕ್ಷಕರಾದ ಗಂಗಾಧರ ಸ್ವಾಮಿ, ಯೂಸುಫ್ ಷರೀಫ್, ಸಂಚಾರ ನಿರೀಕ್ಷಕ ಅಣ್ಣಾಜಪ್ಪ, ಚಂದ್ರಶೇಖರ್, ನಿಂಗರಾಜಪ್ಪ, ನಿಜಲಿಂಗಪ್ಪ, ಲೆಕ್ಕಪತ್ರ ಮೇಲ್ವಿಚಾರಕ ರವಿಕುಮಾರ್, ಭದ್ರತಾ ಮೇಲ್ವಿಚಾರಕ ದೇವರಾಜ್‌ಕುಮಾರ್, ಕೆಎಸ್‌ಟಿ ಕಾನ್‌ಸ್ಟೇಬಲ್ ಸಚಿನ್, ಮಧು ಇನ್ನಿತರರು ಹಾಜರಿದ್ದರು.

ಮಹನೀಯರ ಜಯಂತಿ ಆಚರಣೆ...



ಮೈಸೂರಿನ ಸರ್ ಎಂ.ವಿಶ್ವೇಶ್ವರಯ್ಯ ನಲ್ಲಿ ಮತ್ತು ಒಳಚರಂಡಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘದಿಂದ ಡಾ.ಬಾಬು ಜಗಜೀವನ್ ರಾಂ, ಡಾ.ಅಂಬೇಡ್ಕರ್, ಬಸವ ಜಯಂತಿ ಆಚರಿಸಲಾಯಿತು. ಸಂಘದ ಅಧ್ಯಕ್ಷ ಮಹೇಶ್, ಜಂಟಿ ಕಾರ್ಯದರ್ಶಿ ಪ್ರಕಾಶ್, ಖಜಾಂಚಿ ರವಿಕುಮಾರ್, ನಿರ್ದೇಶಕರಾದ ಕುಮಾರ್, ಯೋಗೇಶ್, ಚಂದ್ರೇಗೌಡ, ಜಾಕಿರ್ ಹುಸೇನ್, ಶಿವರಾಜ್, ಕುಮಾರ್ ಇದ್ದರು.

ಹುಟ್ಟುಹಬ್ಬದ ಶುಭಾಶಯ...



ಕರ್ನಾಟಕ ರಾಜ್ಯ ವೈನ್ಸ್ ಫೆಡರೇಶನ್ ಅಧ್ಯಕ್ಷ, ಮೈಸೂರು ಜಿಲ್ಲಾ ಮದ್ಯ ಮಾರಾಟಗಾರರ ಸಂಘದ ಅಧ್ಯಕ್ಷ ಎಸ್.ಗುರುಸ್ವಾಮಿ ಅವರ 75ನೇ ವರ್ಷದ ಹುಟ್ಟುಹಬ್ಬಕ್ಕೆ ಕೋಣನೂರು ಶ್ರೀ ಲಕ್ಷ್ಮೀ ನರಸಿಂಹ ಸ್ವಾಮಿ ಸೇವಾ ಟ್ರಸ್ಟ್ ಸಮಿತಿ ವತಿಯಿಂದ ಶುಭ ಕೋರಲಾಯಿತು. ಮೈಸೂರು ಜಿಲ್ಲೆ ಮದ್ಯ ಮಾರಾಟ ಸನ್ನದ್ದುದಾರರಾದ ಕೆ.ಎಸ್.ಮುರುಳಿ, ಕೆ.ಎಸ್.ಯೋಗೇಶ್, ಕೆ.ಎಸ್.ದಿನೇಶ್, ಸಮಾಜ ಸೇವಕ ಎಸ್.ಶ್ರೀಕಾಂತ್, ಅಣ್ಣಪ್ಪ ಸ್ವಾಮಿ, ಹೇಮಂತ್‌ಕುಮಾರ್, ಮಧುಸೂದನ್ ಉಪಸ್ಥಿತರಿದ್ದರು.

ಶ್ರೀ ಭಿಕ್ಷದ ಮರಿಸ್ವಾಮೀಜಿ ಲಿಂಗೈಕ್ಯ

ಮೈಸೂರು, ಏ.21– ತಾಲೂಕಿನ ಕೂಡನಹಳ್ಳಿ ಶ್ರೀ ಗುರುಮಲ್ಲೇಶ್ವರ ದಾಸೋಹ ಮಠಾಧೀಶ ಭಿಕ್ಷದ ಮರಿಸ್ವಾಮೀಜಿ (85) ಅವರು ಮಂಗಳವಾರ ಲಿಂಗೈಕ್ಯರಾದರು.



ಪೂರ್ವಾಶ್ರಮದಲ್ಲಿ ನಂಜನಗೂಡು ತಾಲೂಕಿನ ಹೆಬ್ಯಾ ಗ್ರಾಮದವರಾದ ಇವರು, ಸುಮಾರು 12ನೇ ವಯಸ್ಸಿಗೆ ದೀಕ್ಷೆ ಸ್ವೀಕರಿಸಿದ್ದರು. ದೇವನೂರು ಗುರುಮಲ್ಲೇಶ್ವರ ಮಠ, ಹೆಬ್ಯಾ ಮಠದಲ್ಲಿ ಸೇವೆ ಸಲ್ಲಿಸಿದ ನಂತರ ಸುಮಾರು 30 ವರ್ಷಗಳಿಂದ ಕೂಡನಹಳ್ಳಿ ಮಠದಲ್ಲಿ ಸೇವೆ ಸಲ್ಲಿಸುತ್ತಿದ್ದರು. ವಿವಿಧ ಮಠಾಧೀಶರ ಸಮ್ಮುಖದಲ್ಲಿ ಮಠದ ಆವರಣದಲ್ಲಿ ಶ್ರೀಗಳ ಅಂತ್ಯಸಂಸ್ಕಾರ ನೆರವೇರಿತು ಎಂದು ಬಸಹಳ್ಳಿಹುಂಡಿ ಮಠದ ಶ್ರೀ ಬಸವರಾಜ ಸ್ವಾಮೀಜಿ ತಿಳಿಸಿದ್ದಾರೆ.

ವಿಶ್ರಾಂತ ಪೊಲೀಸ್ ಅಧಿಕಾರಿ ಜೆ.ಬಿ. ರಂಗಸ್ವಾಮಿ ಅವರಿಗೆ ಪತ್ನಿ ವಿಯೋಗ

ಮೈಸೂರು,ಏ.21– ಮೈಸೂರಿನ ಟೆರೇಷಿಯನ್ ಕಾಲೇಜು ನಿವೃತ್ತ ಪ್ರಾಧ್ಯಾಪಕಿ, ಆಲನಹಳ್ಳಿ ಬಡಾವಣೆ ನಿವಾಸಿ ಲಕ್ಷ್ಮೀ ರಂಗಸ್ವಾಮಿ ತೀವ್ರ ಹೃದಯಾಘಾತದಿಂದ ಸೋಮವಾರ ತಡರಾತ್ರಿ ನಿಧನರಾದರು. ಅವರಿಗೆ 75 ವರ್ಷ ವಯಸ್ಸಾಗಿತ್ತು.



ಮೃತರು ಪತಿ, ವಿಶ್ರಾಂತ ಪೊಲೀಸ್ ಅಧಿಕಾರಿ ಜೆ.ಬಿ.ರಂಗಸ್ವಾಮಿ, ಪುತ್ರ ದೀಪಕ್ ಜೇಬರ್, ಪುತ್ರಿ ದಿವ್ಯ ಜೇಬರ್ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಮೇರಿಕಾದಲ್ಲಿ ನೆಲೆಸಿರುವ ದೀಪಕ್ ಜೇಬರ್, ದಿವ್ಯ ಜೇಬರ್ ಅವರ ಆಗಮನದ ಬಳಿಕ ಏ.23ರ ಗುರುವಾರ ಮಧ್ಯಾಹ್ನ 12.30ರ ವೇಳೆಗೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ಅಂತಿಮ ವಿಧಿವಿಧಾನ ನೆರವೇರಲಿದೆ ಎಂದು ಮೃತರ ಕುಟುಂಬದ ಮೂಲಗಳು ತಿಳಿಸಿವೆ. ಸದ್ಯ ಲಕ್ಷ್ಮಿ ಅವರ ಪಾರ್ಥಿವ ಶರೀರವನ್ನು ಮೈಸೂರಿನ ಸೆಂಟ್ ಜೋಸೆಫ್ ಆಸ್ಪತ್ರೆಯ ಶೈತ್ಯಾಗಾರದಲ್ಲಿ ಇರಿಸಲಾಗಿದೆ. ಮಕ್ಕಳ ಆಗಮನದ ಬಳಿಕ ಸ್ವಗೃಹಕ್ಕೆ ತರಲಾಗುವುದು. ಲಕ್ಷ್ಮಿ ಅವರು ಇಂಗ್ಲಿಷ್ ಸಾಹಿತ್ಯವನ್ನು ಅಪಾರವಾಗಿ ಓದಿಕೊಂಡಿದ್ದರಲ್ಲದೆ, ಅದರೊಂದಿಗೆ ಕಾನೂನು ಪದವೀಧರೆ ಆಗಿದ್ದರು.

ಗ್ರೇಟರ್ ಮೈಸೂರು: ಆಸ್ತಿ ನಿಖರತೆ, ಖಾತರಿಗೆ ಡಿಜಿಟಲ್ ಟ್ವಿನ್ ಮಾಡೆಲ್ ಜಾರಿಗೆ ಸಿದ್ಧತೆ

●ರಾಜ್ಯದಲ್ಲಿ ಮೊದಲಿಗೆ ಸಾಕಾರಗೊಳ್ಳುತ್ತಿರುವ 15 ಕೋಟಿ ವೆಚ್ಚದ ಯೋಜನೆ ●ನಗರ ಭೂ ಸಾರಿಗೆ ನಿರ್ದೇಶನಾಲಯದ ಮಾರ್ಗದರ್ಶನದಲ್ಲಿ ಜಾರಿ

● ಪ್ರಾಯೋಗಿಕ ಪ್ರಯತ್ನದ ಯಶಸ್ವಿ ನಂತರ ವಿಶ್ವಾಸ; ಮೈಸೂರಿನ 2.31 ಆಸ್ತಿಗಳ ಕರಾರುವಕ್ಕಾದ ಮಾಹಿತಿ ಸಂಗ್ರಹ

● ಯಾವುದೇ ಆಸ್ತಿ ಒತ್ತುವರಿ, ಅತಿಕ್ರಮಣ ಆಟ ಇನ್ನು ನಡೆಯುವುದಿಲ್ಲ

● ಅಮರಾವತಿ, ಕಾಶಿ, ಪುಣೆ, ಮುಂಬೈ, ದೆಹಲಿಯಲ್ಲಿ ಈಗಾಗಲೇ ಜಾರಿ

ಮೈಸೂರು, ಏ.21(ಬಿಎಲ್‌ಯು)– ಡ್ರೋನ್ ಹಾಗೂ ಏರ್ ಕ್ರಾಫ್ಟ್ ಬಳಸಿ ಗ್ರೇಟರ್ ಮೈಸೂರಿನಲ್ಲಿ ಪ್ರತಿಯೊಂದು ಆಸ್ತಿಯನ್ನು ಲಿಡಾರ್ ಹಾಗೂ ರಡಾರ್ ಸುಧಾರಿತ ತಂತ್ರಜ್ಞಾನದ ಮೂಲಕ ಎಐ ಆಧಾರಿತ 3ಡಿ ವೈಮಾನಿಕ ಸಮೀಕ್ಷೆ ಡಿಜಿಟಲ್ ಟ್ವಿನ್ ಮಾಡೆಲ್ ಯೋಜನೆಯನ್ನು 15 ಕೋಟಿ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲು ಮೈಸೂರು ನಗರ ಪಾಲಿಕೆ ಸಿದ್ಧತೆ ನಡೆಸಿದೆ.

ಮೈಸೂರು ನಗರದ ಸಂತೆಪೇಟೆಯಲ್ಲಿ ಮಾರ್ಚ್ 7 ರಂದು 500 ಆಸ್ತಿಗಳ ಬಗ್ಗೆ ಪ್ರಾಯೋಗಿಕವಾಗಿ ನಡೆಸಿದ ಲಿಡಾರ್ (ಲೈಟ್ ಡಿಟೆಕ್ಷನ್ ಅಂಡ್ ರಾಂಗಿಂಗ್) ಮತ್ತು ರಡಾರ್ (ರೇಡಿಯೊ ಡಿಟೆಕ್ಷನ್ ಅಂಡ್ ರಾಂಗಿಂಗ್) 3ಡಿ ಸಮೀಕ್ಷೆ ಯಶಸ್ವಿಯಾದ ನಂತರ ಇಡೀ ಗ್ರೇಟರ್ ಮೈಸೂರಿನಲ್ಲಿ ಇದನ್ನು ಅನುಷ್ಠಾನಗೊಳಿಸಲು ನಗರ ಪಾಲಿಕೆ ತೀರ್ಮಾನ ಕೈಗೊಂಡಿದೆ.

ಕರ್ನಾಟಕದಲ್ಲಿ ಮೊದಲ ಬಾರಿಗೆ ಅನುಷ್ಠಾನಗೊಳಿಸುತ್ತಿರುವ ಈ ಯೋಜನೆ ಬಗ್ಗೆ ಮೈಸೂರು ನಗರ ಪಾಲಿಕೆ ಆಯುಕ್ತ ಷೇಕ್ ತನ್ವೀರ್ ಆಸೀಫ್ ಅವರು ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ ಅವರಿಗೆ ಸಮಗ್ರ ವಿವರಣೆ ನೀಡಿ ಮೌಖಿಕ ಸಮ್ಮತಿ ಪಡೆದಿದ್ದಾರೆ. ಇನ್ನು ಸರ್ಕಾರದ ಹಂತದಲ್ಲಿ ಈ ಯೋಜನೆಗೆ ಅನುಮೋದನೆ ಪಡೆದ ನಂತರ ಮಳೆಗಾಲಕ್ಕೂ ಮುನ್ನ ಡ್ರೋನ್ ಮೂಲಕ ಸಮೀಕ್ಷೆ ಪೂರ್ಣಗೊಳಿಸಲು ತೀರ್ಮಾನ ಕೈಗೊಳ್ಳಲಾಗಿದೆ.

ಕರ್ನಾಟಕ ಸರ್ಕಾರದ ನಗರಾಭಿವೃದ್ಧಿ ಇಲಾಖೆಯು ನಗರ ಭೂ ಸಾರಿಗೆ ನಿರ್ದೇಶನಾಲಯದ ಮಾರ್ಗದರ್ಶನದಲ್ಲಿ ಈ ಯೋಜನೆ ಕಾರ್ಯರೂಪಕ್ಕೆ ತರಲು ನಿರ್ಧಾರ ಮಾಡಲಾಗಿದೆ.

ಖಾಸಗಿ ಮನೆ, ಸಂಘ ಸಂಸ್ಥೆಗಳು, ಕಂಪನಿಗಳು, ಸರ್ಕಾರಿ ಕಚೇರಿಗಳು ಸೇರಿದಂತೆ ಮೈಸೂರಿನಲ್ಲಿ 2.31 ಲಕ್ಷ ಆಸ್ತಿಗಳಿದ್ದು, ಇಲ್ಲಿವರೆಗೆ ಇವುಗಳ ಬಗ್ಗೆ ಕರಾರುವಕ್ಕಾದ ಮಾಹಿತಿ ಇರಲಿಲ್ಲ. ಯುಪಿಒಆರ್ ದಾಖಲಾತಿ ಇದ್ದರೂ ಸರ್ಕಾರಿ ಆಸ್ತಿ ಮಾತ್ರವಲ್ಲದೆ ಖಾಸಗಿ ಆಸ್ತಿಗಳ ಒತ್ತುವರಿ ಹಾಗೂ ಅತಿಕ್ರಮಣ ನಡೆಯುತ್ತಿತ್ತು.

ಆದರೆ ಇನ್ನು ಈ ಆಟ ನಡೆಯುವುದಿಲ್ಲ. 3ಡಿ ಆಧಾರಿತ ವೈಜ್ಞಾನಿಕ ಸಮೀಕ್ಷೆಯಲ್ಲಿ ಪ್ರತಿಯೊಂದು ಆಸ್ತಿಯ ಸಮಗ್ರವಾದ ವಿವರ ನಗರ ಪಾಲಿಕೆಯಲ್ಲಿ ದಾಖಲಾಗಿರುತ್ತದೆ. ಪ್ರಸ್ತುತ ನಗರ ಪಾಲಿಕೆಯಲ್ಲಿರುವ ದಾಖಲಾತಿಗಳ ಆಧಾರದ ಮೇಲೆ ಒಂದು ಆಸ್ತಿಯ ಉದ್ದ, ಅಗಲ, ಎತ್ತರ ಸೇರಿದಂತೆ ಎಷ್ಟು ಚದರಡಿ ಇದೆ ಎಂಬುದು ಡಿಜಿಟಲ್ ಟ್ವಿನ್ ಮಾಡೆಲ್ ಯೋಜನೆಯಲ್ಲಿ ಸ್ಪಷ್ಟವಾಗಿ ದಾಖಲಾಗಿರುತ್ತದೆ.

ಉದಾಹರಣೆಗೆ ಪಕ್ಕದ ಮನೆಯವರು ತಮ್ಮ ಆಸ್ತಿ ಒತ್ತುವರಿ ಮಾಡಿಕೊಂಡರೆ ಇನ್ನು ಮುಂದೆ ಇದು ಸ್ಪಷ್ಟವಾಗಿ ತಿಳಿಯುತ್ತದೆ. ನಗರ ಪಾಲಿಕೆಯ ಕೈಗೊಳ್ಳುವ ಡಿಜಿಟಲ್ ಟ್ವಿನ್ ಮಾಡೆಲ್‌ನಲ್ಲಿರುವ ಆಸ್ತಿಯ ವಿವರ, ಪ್ರಸ್ತುತ ಇರುವ ಆಸ್ತಿಯ ವಿವರವನ್ನು ತಾಳೆ ಹಾಕಿದಾಗ ಒತ್ತುವರಿ ಹಾಗೂ ಅತಿಕ್ರಮಣ ನಿಶ್ಚಯವಾಗಿ ತಿಳಿಯುತ್ತದೆ.

ಮೊದಲು ಆಂಧ್ರ ಪ್ರದೇಶದ ರಾಜಧಾನಿ ಅಮರಾವತಿಯಲ್ಲಿ ಈ ಯೋಜನೆ ಕೈಗೆತ್ತಿಕೊಂಡು ಈಗಾಗಲೇ ಅನುಷ್ಠಾನಗೊಳಿಸಲಾಗಿದೆ. ತರುವಾಯ ವಾರಣಾಸಿ (ಕಾಶಿ), ನಂತರ ಪುಣೆಯಲ್ಲಿ ಈ ಯೋಜನೆಯನ್ನು ಕಾರ್ಯರೂಪಕ್ಕೆ ತರಲಾಗಿದೆ. ಇದಾದ ನಂತರ ವಾಣಿಜ್ಯ ನಗರಿ ಮುಂಬೈ, ರಾಷ್ಟ್ರ ರಾಜಧಾನಿ ದೆಹಲಿ, ಗುಜರಾತ್‌ನ ರಾಜಧಾನಿ ಅಹಮದಾಬಾದ್‌ನಲ್ಲಿ ಡಿಜಿಟಲ್ ಟ್ವಿನ್ ಮಾಡೆಲ್ ಕಾರ್ಯರೂಪಗೊಳಿಸಲಾಗಿದೆ.

ಈಗ ಕರ್ನಾಟಕದಲ್ಲಿ ಮೊದಲ ಬಾರಿಗೆ ಈ ಯೋಜನೆ ಕೈಗೆತ್ತಿಕೊಳ್ಳಲಾಗುತ್ತಿದೆ. ದೇಶದ ಮಾಹಿತಿ ತಂತ್ರಜ್ಞಾನ ರಾಜಧಾನಿ ಸಿಲಿಕಾನ್ ಸಿಟಿ ಬೆಂಗಳೂರಿನಲ್ಲೂ ಕಾರ್ಯರೂಪಕ್ಕೆ ತರಲು ಸಾಧ್ಯವಾಗದ ಈ ಯೋಜನೆ ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ರೂಪಿಸುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ.



ಯೋಜನೆ ಸಾಕಾರಗೊಂಡರೆ ಅಭಿವೃದ್ಧಿಗೆ 60 ಕೋಟಿ ಅನುದಾನ

ಕರ್ನಾಟಕದಲ್ಲಿ ಮೊದಲ ಬಾರಿಗೆ ಕಾರ್ಯರೂಪಕ್ಕೆ ತರುತ್ತಿರುವ ಡಿಜಿಟಲ್ ಟ್ವಿನ್ ಮಾಡೆಲ್ ಯೋಜನೆ ಯಶಸ್ವಿಯಾದರೆ ಕೇಂದ್ರ ಸರ್ಕಾರದಿಂದ ಮೈಸೂರು ನಗರದ ಅಭಿವೃದ್ಧಿಗೆ 60 ಕೋಟಿ ಅನುದಾನ ದೊರೆಯಲಿದೆ.

ಈ ಯೋಜನೆ ಅನುಷ್ಠಾನಕ್ಕಾಗಿ ನಮಗೆ 15 ಕೋಟಿ ರೂಪಾಯಿ ವೆಚ್ಚವಾಗಲಿದೆ. ಆದರೆ ಇದು ಕಾರ್ಯರೂಪಕ್ಕೆ ಬಂದರೆ ಕೇಂದ್ರ ಸರ್ಕಾರದಿಂದ ಮೈಸೂರಿನ ಅಭಿವೃದ್ಧಿಗೆ ಬಹಳಷ್ಟು ಅನುದಾನ ದೊರೆಯಲಿದೆ.

ಈ ಯೋಜನೆ ಅನುಷ್ಠಾನಕ್ಕೆ ತರುವ ಸಂಬಂಧ ರೂಪು ರೇಷೆ ಸಿದ್ಧಪಡಿಸಲು ಕಳೆದ ಆರು ತಿಂಗಳಿನಿಂದ ಅಧ್ಯಯನ ನಡೆಸಲಾಯಿತು. ಈಗ ಇದನ್ನು ಜಾರಿಗೊಳಿಸುವ ವಿಶ್ವಾಸ ಬಂದಿದೆ. ಮಳೆಗಾಲಕ್ಕೂ ಮುನ್ನ ಡ್ರೋನ್ ಸರ್ವೆ ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ. ತರುವಾಯ ಈ ಯೋಜನೆ ಪರಿಪೂರ್ಣವಾಗಿ ಅನುಷ್ಠಾನಗೊಳಿಸಲು ಒಂದು ವರ್ಷವಾದರೂ ಬೇಕಾಗುತ್ತದೆ.

ಆಧುನಿಕ ತಂತ್ರಜ್ಞಾನ ಬಳಸಿಕೊಂಡು ಮೈಸೂರು ನಗರದ ಬಗ್ಗೆ ನಡೆಸುವ 3ಡಿ ಆಧಾರಿತ ವೈಜ್ಞಾನಿಕ ಸಮೀಕ್ಷೆ ಬಹುಪಯೋಗಿಯಾಗಿದೆ.

–ಶೇಕ್ ತನ್ವೀರ್ ಆಸೀಫ್, ಆಯುಕ್ತರು, ಮೈಸೂರು ಮಹಾ ನಗರ ಪಾಲಿಕೆ.

ಡಿಜಿಟಲ್ ಟ್ವಿನ್ ಮಾಡೆಲ್ ಯೋಜನೆಯಲ್ಲಿ ಆಸ್ತಿಗಳು ಮಾತ್ರವಲ್ಲದೆ ಮೈಸೂರು ನಗರದ ರಸ್ತೆಗಳು, ಫುಟ್‌ಪಾತ್‌ಗಳ ಬಗ್ಗೆ ಕೂಡ ಸಮಗ್ರ ಮಾಹಿತಿ ದೊರೆಯಲಿದೆ.

ಇನ್ನು ಮುಂದೆ ರಸ್ತೆ ಹಾಗೂ ಫುಟ್‌ಪಾತ್‌ಗಳ ನಿರ್ಮಾಣ, ಡಾಂಬರೀಕರಣ, ಒಳ ಚರಂಡಿ ಸೇರಿದಂತೆ ಯಾವುದೇ ಕಾಮಗಾರಿ ಕೈಗೊಳ್ಳಬೇಕಾದರೂ ಕರಾರುವಕ್ಕಾದ ಅಂದಾಜು ವೆಚ್ಚದ ವಿವರ (ಎಸ್ಟಿಮೇಟ್) ದೊರೆಯುತ್ತದೆ.

ಕೇವಲ 50 ಲಕ್ಷದಲ್ಲಿ ಆಗುವ ಕಾಮಗಾರಿಯನ್ನು ಒಂದು ಕೋಟಿಗೆ ಮಾಡುವ ಅಧಿಕಾರಿಗಳ ಆಟ ಇನ್ನು ಮುಂದೆ ನಡೆಯುವುದಿಲ್ಲ. ಈ ಯೋಜನೆ ಸಾಕಾರಗೊಂಡ ನಂತರ ಪ್ರತಿಯೊಂದು ಕಾಮಗಾರಿಯನ್ನು ಡಿಜಿಟಲ್ ಟ್ವಿನ್ ಮಾಡೆಲ್ ನಲ್ಲಿ ಮಾಹಿತಿ ಪಡೆದು ಅಂತಿಮವಾಗಿ ನಿರ್ಧಾರ ಮಾಡಲಾಗುವುದು.

ಅಗ್ನಿ ಶಾಮಕ ದಳ ಸಿಬ್ಬಂದಿಗೆ ಬಹುಪಯೋಗಿ

ಡಿಜಿಟಲ್ ಟ್ವಿನ್ ಮಾಡೆಲ್‌ನಲ್ಲಿ ಪ್ರತಿಯೊಂದು ರಸ್ತೆಯ ಮಾಹಿತಿ ದೊರೆಯುವ ಕಾರಣ ಬೆಂಕಿ ಅವಘಡ ಸಂಭವಿಸಿದಾಗ ಅಗ್ನಿ ಶಾಮಕ ದಳದವರು ಆ ಸ್ಥಳಕ್ಕೆ ಸುಲಭ ಮಾರ್ಗದಲ್ಲಿ ಹೋಗಲು ಈ ಯೋಜನೆಯಿಂದ ಅನುಕೂಲವಾಗುತ್ತದೆ.

ಬೆಂಕಿ ಅವಘಡ ಸಂಭವಿಸಿದ ಸ್ಥಳವನ್ನು ಡಿಜಿಟಲ್ ಟ್ವಿನ್ ಮಾಡೆಲ್‌ನಲ್ಲಿ ಸರ್ಚ್‌ಗೆ ಹಾಕಿದಾಗ ಆ ಸ್ಥಳದ ಬಗ್ಗೆ ಮಾಹಿತಿ ದೊರೆಯುತ್ತದೆ. ಅಲ್ಲದೆ ಅಗಲವಾದ ರಸ್ತೆಯಲ್ಲಿ ಶೀಘ್ರವಾಗಿ ಸಾಗುವ ಮಾರ್ಗ ಯಾವುದೆಂದು ಅಗ್ನಿ ಶಾಮಕದಳ ಸಿಬ್ಬಂದಿಗೆ ಸ್ಪಷ್ಟ ಮಾಹಿತಿ ಲಭ್ಯವಾಗಲಿದೆ. ಅಷ್ಟೆ ಅಲ್ಲದೆ ಮಳೆಗಾಲದಲ್ಲಿ ಅತಿವೃಷ್ಟಿಯಾದಾಗ ಪ್ರವಾಹ ಉಂಟಾಗುವ ಸ್ಥಳ ಯಾವುದೆಂದು ಈ ಯೋಜನೆಯಿಂದ ತಿಳಿಯಲಿದೆ. ಇದರಿಂದ ಆ ಸ್ಥಳದಲ್ಲಿ ಪ್ರವಾಹ ತಡೆಗಟ್ಟುವ ನಿಟ್ಟಿನಲ್ಲಿ ಮಾರ್ಗೋಪಾಯ ಕಂಡುಕೊಳ್ಳಲು ನಗರ ಪಾಲಿಕೆಗೆ ಸಹಕಾರಿಯಾಗಲಿದೆ.

ಪ್ರತಿ ಕಟ್ಟಡದ 3ಡಿ ರೂಪದ ಸ್ಪಷ್ಟತೆ

ಡಿಜಿಟಲ್ ಟ್ವಿನ್ ಮಾಡೆಲ್‌ನಿಂದ ಪ್ರತಿಯೊಂದು ಮನೆ, ಕಟ್ಟಡ ಮತ್ತು ರಸ್ತೆಗಳ 3ಡಿ ರೂಪ ಕಾಣಿಸುತ್ತದೆ. ಪ್ರಸ್ತುತ ಪ್ರತಿಯೊಬ್ಬರು ಯಾವುದಾದರೊಂದು ಸ್ಥಳ ತಿಳಿಯಲು ಗೂಗಲ್ ನಲ್ಲಿ ಡಿಜಿಟಲ್ ಮ್ಯಾಪ್ ನಲ್ಲಿ ನೋಡುತ್ತಾರೆ. ಆದರೆ ಅಲ್ಲಿ ಆ ಸ್ಥಳದ ಬಗ್ಗೆ ಸ್ಪಷ್ಟತೆ ಹಾಗೂ ನಿಖರತೆ ಇರುವುದಿಲ್ಲ.

ಆದರೆ ಡಿಜಿಟಲ್ ಟ್ವಿನ್ ಮಾಡೆಲ್ ಯೋಜನೆಯಲ್ಲಿ ಪ್ರತಿಯೊಂದು ಕಟ್ಟಡಗಳ ಸ್ಪಷ್ಟ ರೂಪ ಕಾಣಿಸುತ್ತದೆ. ಇದರಿಂದ ಮೈಸೂರು ನಗರದ ಯಾವುದೇ ಸ್ಥಳದ ಪತ್ತೆಗೆ ಪರದಾಡುವ, ಗೊಂದಲಕ್ಕೀಡಾಗುವ ಪರಿಸ್ಥಿತಿ ಬರುವುದಿಲ್ಲ.

ಕೇರಳದ ತ್ರಿಶೂರ್‌ನಲ್ಲಿ ಪಟಾಕಿಗಳ ಸ್ಫೋಟ; 13 ಜನ ಸಾವು



ತ್ರಿಶೂರ್, ಏ. 21– ಕೇರಳದ ತ್ರಿಶೂರ್ ಜಿಲ್ಲೆಯ ಮುಂಡತ್ತಿಕೋಡ್‌ನಲ್ಲಿ ಇಂದು ಸಂಭವಿಸಿದ ಪಟಾಕಿಗಳ ಸ್ಫೋಟದಲ್ಲಿ 13 ಜನರು ಸಾವನ್ನಪ್ಪಿದ್ದಾರೆ ಮತ್ತು ಹಲವರು ಗಾಯಗೊಂಡಿದ್ದಾರೆ. ಈ ಸ್ಫೋಟ ಸಂಭವಿಸಿದ ತಿರುವಾಂಬಾಡಿ ದೇವಸ್ಥಾನದ ಬಳಿ ಪಟಾಕಿಗಳನ್ನು ಸಂಗ್ರಹಿಸಿ ಇಡಲಾಗಿತ್ತು. ಇದರಿಂದ ಸ್ಫೋಟ ಉಂಟಾಗಿ ಸುತ್ತಲೂ ಬೆಂಕಿ ಆವರಿಸಿದೆ. ಬೆಂಕಿ ಹೊತ್ತಿಕೊಂಡ ಕೂಡಲೆ ಸಾಲುಸಾಲಾಗಿ ಪಟಾಕಿಗಳು ಸ್ಫೋಟಗೊಳ್ಳುವ ಸದ್ದು ಇಡೀ ಊರನ್ನು ಆವರಿಸಿತು.

ಇಲ್ಲಿಯವರೆಗೆ ಸುಮಾರು 13 ಜನರನ್ನು ರಕ್ಷಿಸಲಾಗಿದೆ. ಗಾಯಾಳುಗಳಲ್ಲಿ 8 ಜನ ಗಂಭೀರ ಸ್ಥಿತಿಯಲ್ಲಿ ದ್ದಾರೆ. ಕನಿಷ್ಠ 40 ಜನರಿಗೆ ಸಣ್ಣಪುಟ್ಟ ಗಾಯಗಳಾಗಿವೆ ಎಂದು ಮಾಧ್ಯಮ ವರದಿ ಮಾಡಿದೆ. ಪೂರಂಗಾಗಿ ಸಿದ್ಧತೆ ನಡೆಸುತ್ತಿದ್ದಾಗ ಈ ಅಪಘಾತ ಸಂಭವಿಸಿದೆ. ಪೂರಂಗಾಗಿ ಪಟಾಕಿ ಸಾಮಗ್ರಿಗಳನ್ನು ಅಲ್ಲಿ ಸಂಗ್ರಹಿಸಲಾಗಿತ್ತು. ಸ್ಥಳಕ್ಕೆ ತುರ್ತು ಸೇವೆಗಳನ್ನು ನಿಯೋಜಿಸಲಾಗಿದೆ. ರಕ್ಷಣಾ ಕಾರ್ಯಾಚರಣೆ ಮುಂದುವರೆದಿದೆ. ಸ್ಫೋಟದ ನಿಖರವಾದ ಕಾರಣವನ್ನು ಅಧಿಕಾರಿಗಳು ಇನ್ನೂ ಖಚಿತಪಡಿಸಿಲ್ಲ.

ಕೇರಳದ ಆರೋಗ್ಯ ಸಚಿವೆ ವೀಣಾ ಜಾರ್ಜ್ ಅವರು ಪಟಾಕಿ ಸ್ಫೋಟದಲ್ಲಿ ಗಾಯಗೊಂಡವರಿಗೆ ತಕ್ಷಣ ಉತ್ತಮ ವೈದ್ಯಕೀಯ ಚಿಕಿತ್ಸೆ ನೀಡಲು ನಿರ್ದೇಶಿಸಿದ್ದಾರೆ. ಅವರ ಚಿಕಿತ್ಸೆಗಾಗಿ ತ್ರಿಶೂರ್ ವೈದ್ಯಕೀಯ ಕಾಲೇಜಿನಲ್ಲಿ ಅಗತ್ಯವಿರುವ ವ್ಯವಸ್ಥೆಗಳನ್ನು ಮಾಡಬೇಕೆಂದು ಅವರು ಸೂಚನೆ ನೀಡಿದ್ದಾರೆ.

ಇಂದು ಮಧ್ಯಾಹ್ನ 3.30ರ ಸುಮಾರಿಗೆ ಈ ಅಪಘಾತ ಸಂಭವಿಸಿದೆ. ಹಲವಾರು ಕಾರ್ಮಿಕರಿಗೆ ಸುಟ್ಟ ಗಾಯಗಳಾಗಿವೆ. ಸಾವಿನ ಸಂಖ್ಯೆ ಹೆಚ್ಚಾಗುವ ಸಾಧ್ಯತೆಯಿದೆ ವಿವಿಧ ಸ್ಥಳಗಳಲ್ಲಿ ದೇಹದ ಭಾಗಗಳು ಪತ್ತೆಯಾಗಿವೆ. 18 ಜನರನ್ನು ತ್ರಿಶೂರ್ ವೈದ್ಯಕೀಯ ಕಾಲೇಜಿಗೆ ದಾಖಲಿಸಲಾಗಿದೆ.

ಪ್ರಧಾನಿ ಮೋದಿ ಒಬ್ಬ ಟೆರರಿಸ್ಟ್: ಮಲ್ಲಿಕಾರ್ಜುನ ಖರ್ಗೆ ವಿವಾದಾತ್ಮಕ ಹೇಳಿಕೆ!

ಬಳಿಕ ಭಿನ್ನ ಸ್ಪಷ್ಟನೆ



ಚೆನ್ನೈ, ಏ.21– ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಮಂಗಳವಾರ ಪ್ರಧಾನಿ ನರೇಂದ್ರ ಮೋದಿ ಅವರನ್ನು 'ಭಯೋತ್ಪಾದಕ' ಎಂದು ಟೀಕಿಸುವ ಮೂಲಕ ವಿವಾದ ಮೈಮೇಲೆ ಎಳೆದುಕೊಂಡಿದ್ದಾರೆ.

ತಮಿಳುನಾಡಿನಲ್ಲಿ ಚುನಾವಣಾ ಪ್ರಚಾರದ ಕೊನೆಯ ದಿನವಾದ ಇಂದು ಚೆನ್ನೈನಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಖರ್ಗೆ ಅವರು, ಟೆರರಿಸ್ಟ್ ಪ್ರಧಾನಿ ಮೋದಿ ಅವರೊಂದಿಗೆ ಎಐಎಡಿಎಂಕೆ ಕೈಜೋಡಿಸಿರುವುದು ನಿಜಕ್ಕೂ ವಿಷಾದನೀಯ ಎಂದು ಹೇಳಿದರು.

ಮಹಿಳಾ ಮೀಸಲಾತಿ ಮಸೂದೆ ಮತ್ತು ಕ್ಷೇತ್ರ ಪುನರ್ ವಿಂಗಡಣೆ ಮಸೂದೆಯನ್ನು ಸೋಲಿಸುವ ಸಮಯದಲ್ಲಿ ವಿರೋಧ ಪಕ್ಷದ ಒಗ್ಗಟ್ಟನ್ನು ಎತ್ತಿ ತೋರಿಸಿದ ಕಾಂಗ್ರೆಸ್ ಅಧ್ಯಕ್ಷರು, ಬಿಜೆಪಿಯನ್ನು ಬೆಂಬಲಿಸಿದ್ದಕ್ಕಾಗಿ ಎಐಎಡಿಎಂಕೆಯನ್ನು ಟೀಕಿಸಿದರು ಮತ್ತು ಪ್ರಧಾನಿ ಮೋದಿಯವರನ್ನು 'ಸಮಾನತೆಯಲ್ಲಿ ನಂಬಿಕೆಯಿಲ್ಲದ ಭಯೋತ್ಪಾದಕ' ಎಂದು ಟೀಕಿಸಿದರು.

ತಮಿಳುನಾಡಿನಲ್ಲಿ ಎಐಎಡಿಎಂಕೆ ಮತ್ತು ಬಿಜೆಪಿ ನಡುವಿನ ಮೈತ್ರಿಯ ಔಚಿತ್ಯವನ್ನು ಪ್ರಶ್ನಿಸಿದ ಮಲ್ಲಿಕಾರ್ಜುನ ಖರ್ಗೆ, ಸಮಾನತೆ ಮತ್ತು ನ್ಯಾಯದ ಮೇಲೆ ನಂಬಿಕೆ ಇರದ ಪಕ್ಷದೊಂದಿಗೆ ಎಐಎಡಿಎಂಕೆ ನಂಬಿಕೆ ಇಟ್ಟಿರುವುದು ಆಶ್ಚರ್ಯ ಎಂದು ಗುಡುಗಿದರು.

ನಮಗೆ ಹೆಚ್ಚು ಸಂಸದರನ್ನು ನೀಡಿದ ತಮಿಳುನಾಡು ಜನರಿಗೆ ನಾನು ಧನ್ಯವಾದ ಹೇಳುತ್ತೇನೆ. ಅದಕ್ಕಾಗಿಯೇ ನಾವು ಮಸೂದೆಯನ್ನು ಹೋರಾಡಿ ಸೋಲಿಸಲು ಸಾಧ್ಯವಾಯಿತು. ಇದು ಪೆರಿಯಾರ್, ಡಾ. ಅಂಬೇಡ್ಕರ್, ಅಣ್ಣಾದೊರೈ, ಮಹಾನ್ ಕಾಮರಾಜ್ ಮತ್ತು ಕರುಣಾನಿಧಿ ಅವರ ವೈಜ್ಞಾನಿಕ ಚಿಂತನೆ ಮತ್ತು ಆದರ್ಶಗಳ ನಾಡು ಎಂದರು.

ಇನ್ನೂ ಪ್ರಧಾನಿ ವಿರುದ್ಧ ಬಳಸಿದ ಪದಗಳ ಬಗ್ಗೆ ಪ್ರಶ್ನಿಸಿದಾಗ, ಖರ್ಗೆ ತಮ್ಮನ್ನು ತಾವು ಸಮರ್ಥಿಸಿಕೊಂಡರು ಮತ್ತು ಪ್ರಧಾನಿ ತಮ್ಮ ರಾಜಕೀಯ ವಿರೋಧಿಗಳನ್ನು, ಇಡಿ, ಸಿಬಿಐ, ಐಟಿ ಬಳಸುವ ಮೂಲಕ ಭಯಭೀತಗೊಳಿಸುತ್ತಿದ್ದಾರೆ ಎಂದು ಹೇಳುವುದು ನನ್ನ ಉದ್ದೇಶ ಎಂದು ಸ್ಪಷ್ಟಪಡಿಸಿದರು.

ಅವರು (ಪ್ರಧಾನಿ ಮೋದಿ) ಜನರನ್ನು ಮತ್ತು ರಾಜಕೀಯ ಪಕ್ಷಗಳನ್ನು ಭಯಭೀತಗೊಳಿಸುತ್ತಿದ್ದಾರೆ. ಅವರು ಭಯೋತ್ಪಾದಕರೆಂದು ನಾನು ಎಂದಿಗೂ ಹೇಳಿಲ್ಲ... ನಾನು ಇದನ್ನು ಸ್ಪಷ್ಟಪಡಿಸಲು ಬಯಸುತ್ತೇನೆ, ಮೋದಿ ಯಾವಾಗಲೂ ಬೆದರಿಕೆ ಹಾಕುತ್ತಾರೆ. ಇಡಿ, ಐಟಿ ಮತ್ತು ಸಿಬಿಐನಂತಹ ಸಂಸ್ಥೆಗಳು ಅವರ ಕೈಯಲ್ಲಿವೆ. ಅವರು ಕ್ಷೇತ್ರ ಪುನರ್ ವಿಂಗಡಣೆಯನ್ನು ತಮ್ಮ ಕೈಗೆ ತೆಗೆದುಕೊಳ್ಳಲು ಬಯಸುತ್ತಿದ್ದಾರೆ ಎಂದು ಖರ್ಗೆ ಹೇಳಿದರು.

ಎಂಡಿಎ ಅಧಿಕಾರಿಗಳ ಕಾರ್ಯಾಚರಣೆ; ಕೋಟ್ಯಾಂತರ ಮೌಲ್ಯದ 9 ಎಕರೆ ರಕ್ಷಣೆ



ಎಂಡಿಎ ಅಧಿಕಾರಿಗಳು ಜೆಸಿಬಿ ಮೂಲಕ ತೆರವು ಕಾರ್ಯಾಚರಣೆ ನಡೆಸಿದರು.

ಮೈಸೂರು, ಏ.21– ಮೈಸೂರು ಅಭಿವೃದ್ಧಿ ಪ್ರಾಧಿಕಾರದ (ಎಂಡಿಎ) ಅಧಿಕಾರಿಗಳು ನಗರದ ಹೊರವಲಯದ ದೇವನೂರಿನಲ್ಲಿ ಎರಡು ಕಡೆ ಪ್ರತ್ಯೇಕ ಕಾರ್ಯಾಚರಣೆ ನಡೆಸಿ ಒತ್ತುವರಿಯಾಗಿದ್ದ ಒಟ್ಟು 9 ಎಕರೆ ಜಾಗವನ್ನು ತೆರವುಗೊಳಿಸಿ, ವಶಕ್ಕೆ ಪಡೆದಿದ್ದಾರೆ.

ಎಂಡಿಎ ಆಯುಕ್ತ ಪ್ರಭಾರ ಕೆ.ಆರ್.ರಕ್ಷಿತ್ ಅವರ ಸೂಚನೆ ಮೇರೆಗೆ ಪೊಲೀಸ್ ಭದ್ರತೆಯಲ್ಲಿ ಸ್ಥಳಕ್ಕೆ ಆಗಮಿಸಿದ ಅಧಿಕಾರಿಗಳು, ಜೆಸಿಬಿಗಳ ಮೂಲಕ ವಾಹನ ಪಾರ್ಕಿಂಗ್ ಹಾಗೂ ಇತರೆ ಶೆಡ್‌ಗಳನ್ನು ತೆರವು ಮಾಡಿದರು.

ಮೈಸೂರು ತಾಲೂಕು ದೇವನೂರು ಬಡಾವಣೆಯ ಸರ್ವೇ ನಂ.155, 156, 153/2ರ ವ್ಯಾಪ್ತಿಯ 5 ಎಕರೆ, 19 ಗುಂಟೆ ಹಾಗೂ ಸರ್ವೇ ನಂ. 228/2, 229/1, 229/2ರ ವ್ಯಾಪ್ತಿಯ 3 ಎಕರೆ, 22 ಗುಂಟೆ ಜಾಗವನ್ನು ತೆರವು ಮಾಡಲಾಯಿತು.

ಈ ವೇಳೆ ಎಂಡಿಎ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಸುನಿತಾ ಸೇರಿದಂತೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ನಮ್ಮ ಯಾವುದೇ ನಿಯೋಗ ಪಾಕ್‌ಗೆ ಭೇಟಿ ನೀಡಿಲ್ಲ

ಇಸ್ಲಾಮಾಬಾದ್‌ಗೆ ತೆರಳಲು ಸಿದ್ಧವಾದ ಟ್ರಂಪ್‌ಗೆ ಇರಾನ್ ಶಾಕ್!

ಟೆಹರಾನ್, ಏ.21– ಎರಡು ವಾರಗಳ ಕದನ ವಿರಾಮ ನಾಳೆಗೆ ಮುಕ್ತಾಯಗೊಳ್ಳಲಿದ್ದು, ಅಮೆರಿಕ ಜೊತೆಗಿನ ಎರಡನೇ ಸುತ್ತಿನ ಸಂಭವನೀಯ ಶಾಂತಿ ಮಾತುಕತೆಗೂ ಮುನ್ನ ಸಾಕಷ್ಟು ಊಹಾಪೋಹಗಳು ಕೇಳಿಬರುತ್ತಿದ್ದು, ಇರಾನ್‌ನ ಸರ್ಕಾರಿ ಸ್ವಾಮ್ಯದ ದೂರದರ್ಶನ ಮಂಗಳವಾರ ಇರಾನ್‌ನಿಂದ ಯಾವುದೇ ನಿಯೋಗ ಇಲ್ಲಿಯವರೆಗೆ ಪಾಕಿಸ್ತಾನದ ಇಸ್ಲಾಮಾಬಾದ್‌ಗೆ ಭೇಟಿ ನೀಡಿಲ್ಲ ಎಂದಿದೆ.

ಇಲ್ಲಿಯವರೆಗೆ, ಇರಾನ್‌ನಿಂದ ಯಾವುದೇ ನಿಯೋಗ ಪಾಕಿಸ್ತಾನಕ್ಕೆ ತೆರಳಿಲ್ಲ. ಹಾಗಾಗಿ ಇರಾನ್ ಈಗಾಗಲೇ ಸಂಧಾನಕಾರರನ್ನು ಕಳುಹಿಸಿದೆ ಎಂಬ ವರದಿಗಳು ಸುಳ್ಳು ಎಂದು ಇರಾನ್ ದೂರದರ್ಶನ ಹೇಳಿದೆ.

ವಾರಾಂತ್ಯದಲ್ಲಿ ಅಮೆರಿಕ ನೌಕಾಪಡೆಯು ಇರಾನ್‌ನ ಹಡಗನ್ನು ವಶಪಡಿಸಿಕೊಂಡಿರುವುದಕ್ಕೆ ಪ್ರತಿಕ್ರಿಯಿಸಲು ಎದುರು ನೋಡುತ್ತಿರುವಾಗ, ಅಮೆರಿಕದೊಂದಿಗಿನ ಶಾಂತಿ ಮಾತುಕತೆಗೆ ಗೈರಾಗುವ ಕುರಿತು ಸೂಚನೆಗಳು ಲಭ್ಯವಾಗಿವೆ.

ಇರಾನ್‌ನ ರಾಜ್ಯ ದೂರದರ್ಶನ ಸ್ವತಂತ್ರ ಅಥವಾ ತಟಸ್ಥವಾಗಿಲ್ಲ. ಬದಲಾಗಿ, ಇರಾನ್‌ನ ಆಡಳಿತ ವ್ಯವಸ್ಥೆಯಲ್ಲಿ ಹೆಚ್ಚು ಸಂಪ್ರದಾಯವಾದಿ ಮತ್ತು ಕಟ್ಟುನಿಟ್ಟಾದ ರಾಜಕೀಯ–ಧಾರ್ಮಿಕ ಬಣವಾದ ಕಠಿಣವಾದಿಗಳಿಂದ ದೀರ್ಘಕಾಲದಿಂದ ನಿಯಂತ್ರಿಸಲ್ಪಟ್ಟಿದೆ.

ಮಾತುಕತೆಗಾಗಿ ನಿಯೋಗ ಇಸ್ಲಾಮಾಬಾದ್‌ಗೆ ಹೋಗಲಿದೆ ಎಂದು ಯಾವುದೇ ಸರ್ಕಾರಿ ಅಧಿಕಾರಿ ಖಚಿತಪಡಿಸಿಲ್ಲ. ಆದರೆ, ಅದೇ ಸಮಯದಲ್ಲಿ ಮಾತುಕತೆಗಳು ಸಂಭವಿಸಿದಲ್ಲಿ ಅಧಿಕಾರಿಗಳು ಈಗಾಗಲೇ ಸಿದ್ಧರಾಗಿದ್ದಾರೆ.

ಯುಎಸ್ ಉಪಾಧ್ಯಕ್ಷ ಜೆಡಿ ವ್ಯಾನ್ಸ್ ಅಮೆರಿಕದ ತಂಡವನ್ನು ಮಾತುಕತೆಗೆ ಮುನ್ನಡೆಸುವ ನಿರೀಕ್ಷೆಯಿದೆ. ತನ್ನ ನಿಯೋಗವನ್ನು ಯಾರು ಮುನ್ನಡೆಸಬಹುದು ಎಂಬುದರ ಕುರಿತು ಇರಾನ್ ಸದ್ಯಕ್ಕೆ ಯಾವುದೇ ಮಾಹಿತಿ ನೀಡಿಲ್ಲ. ಕಳೆದ ಬಾರಿ, ಸಂಸದೀಯ ಸ್ಪೀಕರ್ ಮೊಹಮ್ಮದ್ ಬಾಗರ್ ಖಲಿಬಾಫ್ ಇರಾನ್ ನಿಯೋಗವನ್ನು ಮುನ್ನಡೆಸಿದ್ದರು.

ಬಿಸಿಲಿನ ತಾಪಕ್ಕೆ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಸಾವು



ಬೆಳಗಾವಿ, ಏ.21– ಹಿಟ್ ಸ್ಟ್ರೋಕ್‌ಗೆ ರಾಜ್ಯದಲ್ಲಿ ಎರಡನೇಯ ಬಲಿಯಾಗಿದೆ. ಬಿಸಿಲಿನ ತಾಪಕ್ಕೆ ಬೆಳಗಾವಿ ಜಿಲ್ಲೆಯ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಬಲಿಯಾಗಿದ್ದಾರೆ.

ಬೆಳಗಾವಿ ಜಿಲ್ಲೆಯ ರಾಯಬಾಗ ಪಟ್ಟಣದ ನಿವಾಸಿಯಾಗಿರುವ ವೆಂಕಟೇಶ್ ಬಳ್ಳಾರಿ(35) ಮೃತ ದುರ್ದೈವಿ. ರಾಯಬಾಗ ತಾಲೂಕಿನ ಚಿಂಚಲಿ ಪಟ್ಟಣ ಪಂಚಾಯತ್ ಮುಖ್ಯಾಧಿಕಾರಿಯಾಗಿ ಕೆಲಸ ಮಾಡುತ್ತಿದ್ದರು ಎಂದು ತಿಳಿದುಬಂದಿದೆ. ಸೋಮವಾರ (ಏ.21) ಬಸವೇಶ್ವರ ಜಯಂತಿ ಸಂದರ್ಭದಲ್ಲಿ ಫೋಟೋ ಪೂಜೆ ಬಳಿಕ ಮೆರವಣಿಗೆ ಸಂದರ್ಭದಲ್ಲಿ ತಲೆ ತಿರುಗಿ ಕುಸಿದು ಬಿದ್ದಿದ್ದರು. ಬಳಿಕ ಅವರನ್ನು ಆಸ್ಪತ್ರೆಗೆ ರವಾನಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾರೆ.

ಈ ಕುರಿತು ಆಪ್ತರು ಮಾಹಿತಿ ನೀಡಿದ್ದು, ವೆಂಕಟೇಶ ಅವರು ಬಿಸಿಲಿನ ತಾಪ ತಾಳಲಾರದೇ ಹೃದಯಾಘಾತದಿಂದ ಸಾವನ್ನಪ್ಪಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ.

ಜೆಇಇ ಫಲಿತಾಂಶ: ಶೇ.99.99 ಅಂಕ ಪಡೆದ ಕರ್ನಾಟಕದ ಇಬ್ಬರು ವಿದ್ಯಾರ್ಥಿಗಳು

ಬೆಂಗಳೂರು, ಏ.21– ಜೆಇಇ ಫಲಿತಾಂಶ ಪ್ರಕಟವಾಗಿದ್ದು, ರಾಜ್ಯದ ಇಬ್ಬರು ವಿದ್ಯಾರ್ಥಿಗಳು ಶೇ. 99.99 ಅಂಕಗಳನ್ನು ಗಳಿಸುವ ಮೂಲಕ ರಾಜ್ಯಕ್ಕೆ ಟಾಪರ್‌ಗಳಾಗಿ ಹೊರಹೊಮ್ಮಿದ್ದಾರೆ. ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ಸೋಮವಾರ ಸಂಜೆ ಫಲಿತಾಂಶಗಳನ್ನು ಪ್ರಕಟಿಸಿದೆ.

ಬೆಂಗಳೂರಿನ ನಾರಾಯಣ ಸಿಓ ಕಾವೇರಿ ಭವನದ ವಿದ್ಯಾರ್ಥಿ ವಿಷ್ಣು ಸಾಯಿ ತೇಜ, ಜೆಇಇ ಮುಖ್ಯ ಸೆಷನ್ 2ರಲ್ಲಿ ಶೇ. 99.99 ಅಂಕಗಳಿಸುವ ಮೂಲಕ ಮತ್ತೆ ರಾಜ್ಯದ ಟಾಪರ್ ಆಗಿ ಹೊರಹೊಮ್ಮಿದ್ದಾರೆ. ಕರ್ನಾಟಕದ ಮತ್ತೊಬ್ಬ ವಿದ್ಯಾರ್ಥಿ ಆದರ್ಶ್ ಕುಮಾರ್ ಬೆಹೆರಾ, ಪರಿಶಿಷ್ಟ ಜಾತಿ (ಎಸ್‌ಸಿ) ಪಟ್ಟಿಯಲ್ಲಿ ಎರಡನೇ ಟಾಪರ್ ಆಗಿ 99.99 ಶೇಕಡಾ ಅಂಕಗಳನ್ನು ಗಳಿಸಿದ್ದಾರೆ. ಅತೀ ಹೆಚ್ಚು ಅಂಕಗಳಿಸಿದವರಲ್ಲಿ ತೇಜಾ 28ನೇ ಸ್ಥಾನ ಪಡೆದಿದ್ದಾರೆ.

ಪಹಲ್ಗಾಮ್ ದಾಳಿಗೆ ವರ್ಷ: 'ಆಪರೇಷನ್ ಸಿಂಧೂರ' ನೆನಪಿಸಿದ ಭಾರತೀಯ ಸೇನೆ

ನ್ಯಾಯ ದೊರಕಿದೆ, ಭಾರತ ಒಗ್ಗಟ್ಟಿನಿಂದ ನಿಂತಿದೆ: ಸೇನೆಯಿಂದ ಪೋಸ್ಟ್

ನವದೆಹಲಿ, ಏ.21– ಬೈಸರನ್ ವ್ಯಾಲಿಗೆ ಪ್ರವಾಸಕ್ಕೆಂದು ಹೋಗಿದ್ದಾಗ 26 ಜನರು ಸಾವನ್ನಪ್ಪಿದ್ದ ಭಯೋತ್ಪಾದಕ ದಾಳಿಗೆ ನಾಳೆ (ಏ.22) ಒಂದು ವರ್ಷ. ಈ ದುರಂತದ ದಿನದಂದು ಹಲವರು ತಮ್ಮ ಪ್ರೀತಿಪಾತ್ರರನ್ನು ಕಳೆದುಕೊಂಡಿದ್ದು, ಭಾರತೀಯ ಸೇನೆ 'ಆಪರೇಷನ್ ಸಿಂಧೂರ'ವನ್ನು ನೆನಪಿಸಿ, ಸಂದೇಶವೊಂದನ್ನು ನೀಡಿದೆ.

2025ರ ಏ.22 ಭಾರತಕ್ಕೆ ಕರಾಳ ದಿನ. ಪಹಲ್ಗಾಮ್‌ನಲ್ಲಿರುವ ಬೈಸರನ್ ವ್ಯಾಲಿಗೆ ಪ್ರವಾಸಕ್ಕೆಂದು ತೆರಳಿದ್ದವರ ಪೈಕಿ 26 ಜನರು ಭಯೋತ್ಪಾದಕ ದಾಳಿಯಲ್ಲಿ ಸಾವನ್ನಪ್ಪಿದ್ದರು. ಇದರ ಬೆನ್ನಲ್ಲೇ ಭಾರತೀಯ ಸೇನೆ ಪಾಕ್‌ನ ಉಗ್ರ ನೆಲೆಗಳ ಮೇಲೆ ದಾಳಿ ನಡೆಸಿ ಸೇಡು ತೀರಿಸಿಕೊಂಡಿತ್ತು. ಇದೀಗ ಭಾರತೀಯ ಸೇನೆ ಪೋಸ್ಟ್‌ವೊಂದನ್ನು ಹಂಚಿಕೊಂಡಿದ್ದು, ಹಿಂದೂಗಳ ನರ ಮೇಧ ನಡೆಸಿದವರ ಜೀವ ತೆಗೆದುಕೊಂಡು ನ್ಯಾಯ ದೊರಕಿಸಿಕೊಟ್ಟಿದ್ದೇವೆ. ಭಾರತ ಒಗ್ಗಟ್ಟಾಗಿದೆ ಎಂದು ಬಲವಾದ ಸಂದೇಶ ನೀಡಿದೆ.

ಮಾನವೀಯತೆ ಮಿತಿಗಳನ್ನು ಮೀರಿದಾಗ ಪ್ರತಿಕ್ರಿಯೆ ನಿರ್ಣಾಯಕವಾಗಿರುತ್ತದೆ. ಕೆಲ ಮಿತಿಗಳನ್ನು ಮೀರಿದಾಗ ದೇಶ ಒಗ್ಗಟ್ಟಾಗಿ ನಿಲ್ಲುತ್ತದೆ. ಭಯೋತ್ಪಾದನೆಯ ಹಿಂದಿರುವವರಿಗೆ ಎಚ್ಚರಿಕೆ ನೀಡಿ, ನಾಗರಿಕರಿಗೆ ಬೆನ್ನೆಲುಬಾಗಿರುತ್ತದೆ ಎಂದು ಆಪರೇಷನ್ ಸಿಂಧೂರವನ್ನು ನೆನಪಿಸಿಕೊಂಡಿದೆ.

ಒಂದು ವರ್ಷದ ಹಿಂದೆ ನಡೆದ ಘಟನೆಯಿಂದಾಗಿ ಕುಟುಂಬಗಳು ಇಂದಿಗೂ ನೋವಿನಲ್ಲಿವೆ. ಗಾಯ ಮಾಸಿದರೂ ಅದರಿಂದಾದ ನೋವು ಇಂದಿಗೂ ದುಃಖ ನೀಡುತ್ತಿದೆ. ಇದೆಲ್ಲದರ ಜೊತೆಗೆ ಕೆಲ ಕುಟುಂಬಗಳು ತಮ್ಮ ಪ್ರೀತಿಪಾತ್ರರ ನೆನಪುಗಳನ್ನು ಜೀವಂತವಾಗಿಟ್ಟುಕೊಂಡು ಜೀವನವನ್ನು ಪುನರ್ನಿರ್ಮಿಸಲು ಪ್ರಯತ್ನಿಸುತ್ತಿದ್ದಾರೆ.

ಆ ದಿನ ಏನಾಯ್ತು: ಅಂದು ಏ.22, ಕನ್ನಡಿಗರು ಸೇರಿದಂತೆ ಹಲವಾರು ಜನರು ಪಹಲ್ಗಾಮ್‌ನ ಬೈಸರನ್ ವ್ಯಾಲಿಗೆ ಪ್ರವಾಸಕ್ಕೆಂದು ತೆರಳಿದ್ದರು. ಈ ವೇಳೆ ಏಕಾಏಕಿ ಭಯೋತ್ಪಾದಕರು ದಾಳಿ ನಡೆಸಿ, ಅಲ್ಲಿದ್ದವರಿಗೆ ಕಲಿಮಾ ಬರುತ್ತದೆಯಾ ಎಂದು ಕೇಳಿ ಹಿಂದೂಗಳನ್ನು ಸಾಲಾಗಿ ನಿಲ್ಲಿಸಿ ಗುಂಡಿಕ್ಕಿ ಕೊಂದಿದ್ದರು.

ಮೂವರು ಭಯೋತ್ಪಾದಕರು ಪ್ರವಾಸಿಗರನ್ನು ಒಟ್ಟುಗೂಡಿಸಿ ಪುರುಷ ಮತ್ತು ಮಹಿಳಾ ಗುಂಪುಗಳಾಗಿ ವಿಂಗಡಿಸಿದ್ದರು. ಸೇನಾ ಸಮವಸ್ತ್ರದಲ್ಲಿ ಬಂದ ಉಗ್ರರನ್ನು ನೋಡಿ ಪ್ರವಾಸಿಗರು ಇವರು ಸೈನಿಕರು ಎಂದೇ ಭಾವಿಸಿದ್ದರು. ಸುಮಾರು 20 ನಿಮಿಷ ಸ್ಥಳದಲ್ಲಿ ಇದ್ದ ಉಗ್ರರು ಹಿಂದೂಗಳನ್ನು ಸಾಲಾಗಿ ನಿಲ್ಲಿಸಿ ಹತ್ಯೆ ಮಾಡಿದ್ದರು. ಈ ವೇಳೆ ಕೆಲವರು ಓಡಿ ಹೋಗಲು ಯತ್ನಿಸಿದಾಗ ಅವರ ಮೇಲೂ ಶೂಟ್ ಮಾಡಿದ್ದರು.

ದಾಳಿಯಿಂದ ಪಾರಾಗಲು ಪ್ರವಾಸಿಗರು ಡೇರೆಗಳಲ್ಲಿ ಅಡಗಿ ಕುಳಿತಿದ್ದರು. ಈ ಡೇರೆಗೆ ಬಂದ ಉಗ್ರರು ಪುರುಷರನ್ನು ಕರೆದು ನಿನ್ನ ಧರ್ಮ ಯಾವುದು, ಕಲಿಮಾ ಹೇಳು ಎಂದು ಕೇಳಿದ್ದರು. ಕಲಿಮಾ ಹೇಳದ್ದಕ್ಕೆ ಹಾಗೂ ಪ್ರವಾಸಿಗರ ಗುರುತಿನ ಚೀಟಿಗಳನ್ನು ಪರಿಶೀಲಿಸಿ, ಮುಸ್ಲಿಮೇತರರೆಂದು ಗುರುತಿಸಿ ಗುಂಡಿಕ್ಕಿ ಹತ್ಯೆ ಮಾಡಿದ್ದರು.

ಪಾಕಿಸ್ತಾನ ಮೂಲದ ಭಯೋತ್ಪಾದಕ ಸಂಘಟನೆ ಲಷ್ಕರ್–ಎ–ತೈಬಾದ ಒಂದು ಅಂಗವಾದ ರೆಸಿಸ್ಟೆನ್ಸ್ ಫ್ರಂಟ್ ಈ ದಾಳಿಯ ಹೊಣೆ ಹೊತ್ತುಕೊಂಡಿದೆ. ದಾಳಿಯ ನಂತರ, ಭದ್ರತಾ ಪಡೆಗಳು ಸ್ಥಳಕ್ಕೆ ಆಗಮಿಸಿ, ಗಾಯಾಳುಗಳನ್ನು ಹತ್ತಿರದ ಆಸ್ಪತ್ರೆಗಳಿಗೆ ಸಾಗಿಸಿದರು. ಪಹಲ್ಗಾಮ್ ದಾಳಿ ಇಡೀ ದೇಶವನ್ನೇ ಬೆಚ್ಚಿಬೀಳಿಸಿತ್ತು.

ಶ್ಯಾದನಹಳ್ಳಿ ಬಳಿಯ ಕೋಟ್ಯಾಂತರ ಮೌಲ್ಯದ ಸರ್ಕಾರಿ ಭೂಮಿ ರಕ್ಷಣೆಗೆ ಅಧಿಕಾರಿಗಳು ನಿರಾಸಕ್ತಿ


●ದೂರು ನೀಡಿದರೂ ನಾಮಕಾವಸ್ತೆ ಪರಿಶೀಲನೆ ಹೊರತು ಸೂಕ್ತ ಕ್ರಮ ವಹಿಸದೆ ಮೌನ

●ಗಣಿಗಾರಿಕೆ ಅವಧಿ ಮುಗಿದು ಮೂರು ದಶಕ ಕಳೆದರೂ ತಿರುಗಿ ನೋಡದೆ ನಿರ್ಲಕ್ಷ್ಯ ಆರೋಪ

ಮೈಸೂರು, ಏ.21– ಮೈಸೂರಲ್ಲಿ ಅಧಿಕಾರಿಗಳ ನಿರ್ಲಕ್ಷ್ಯದಿಂದ ಕೋಟ್ಯಾಂತರ ಬೆಲೆಬಾಳುವ ಸರ್ಕಾರಿ ಜಾಗ ಕಂಡವರ ಪಾಲಾಗುತ್ತಿರುವ ಮತ್ತೊಂದು ಪ್ರಕರಣ ಬೆಳಕಿಗೆ ಬಂದಿದೆ.

ಗುತ್ತಿಗೆ ಅವಧಿ ಮೀರಿ ಸ್ಥಗಿತಗೊಂಡಿರುವ ಗಣಿ ಜಾಗ ಭೂಗಳ್ಳರ ಪಾಲಾಗುತ್ತಿರುವ ಬಗ್ಗೆ ಅಧಿಕಾರಿಗಳಿಗೆ ದೂರು ನೀಡಿ, ಕ್ರಮಕ್ಕೆ ಆಗ್ರಹಿಸಿದರೂ ಪ್ರಯೋಜನವಾಗಿಲ್ಲ. ನಾಮಕಾವಸ್ತೆಗೆ ಪರಿಶೀಲನೆ ನಡೆಸಿ, ಮೌನಕ್ಕೆ ಜಾರಿದ್ದಾರೆ ಎಂಬ ಗಂಭೀರ ಆರೋಪ ಕೇಳಿಬಂದಿದೆ.

ಗಣಿಗಾರಿಕೆ ಸ್ಥಗಿತಗೊಂಡ ಬಳಿಕ ಸ್ಥಳದಲ್ಲಿರುವ ಅಪಾರ ಮೌಲ್ಯದ ಖನಿಜ ಪದಾರ್ಥಗಳು ಖದೀಮರ ಪಾಲಾಗುತ್ತಿದೆ. ಅಲ್ಲದೆ ಸದರಿ ಜಾಗವನ್ನು ಖಾಸಗಿಯವರು ಅತಿಕ್ರಮಿಸಿಕೊಂಡು, ನಿವೇಶನಗಳಾಗಿ ಪರಿವರ್ತಿಸಿಕೊಳ್ಳುತ್ತಿದ್ದಾರೆ. ಸರ್ಕಾರಿ ಭೂಮಿ ನೋಡು ನೋಡುತ್ತಿರುವಂತೆ ಕಂಡವರ ಪಾಲಾಗುತ್ತಿದೆ. ಈ ಅಕ್ರಮವನ್ನು ತಡೆದು ಸರ್ಕಾರಿ ಭೂಮಿಯನ್ನು ರಕ್ಷಿಸಬೇಕೆಂದು ಆರ್‌ಟಿಐ ಕಾರ್ಯಕರ್ತರೊಬ್ಬರು ಮನವಿ ನೀಡಿ, ಒತ್ತಾಯಿಸಿದರೂ ಯಾವುದೇ ಗಂಭೀರ ಕ್ರಮಕ್ಕೆ ಮುಂದಾಗಿಲ್ಲ. ಅಧಿಕಾರಿಗಳ ಈ ಮೌನದ ನಡೆ, ಹಲವು ಅನುಮಾನಗಳನ್ನು ಸೃಷ್ಟಿಸಿದೆ.



ಮೈಸೂರಿನ ಶ್ಯಾದನಹಳ್ಳಿಯಲ್ಲಿರುವ ಈ ಹಿಂದೆ ಗಣಿಗಾರಿಕೆಗೆ ನೀಡಲಾಗಿದ್ದ ಸರ್ಕಾರಿ ಜಾಗ.

ಪ್ರಕರಣದ ವಿವರ: ಮೈಸೂರು ತಾಲೂಕು, ಕಸಬಾ ಹೋಬಳಿ, ಶ್ಯಾದನಹಳ್ಳಿ ಗ್ರಾಮದ ಸರ್ವೆ ನಂ.116 ಹಾಗೂ 119ರ ಭೂಮಿ, ಅಧಿಕಾರಿಗಳ ಜಾಣ ಕುರುಡತನದಿಂದ ಭೂಗಳ್ಳರ ಪಾಲಾಗುತ್ತಿದೆ. ಸರ್ಕಾರವು ಸರ್ವೆ ನಂ.116 ರಲ್ಲಿ 4 ಎಕರೆ 8 ಗುಂಟೆ ಹಾಗೂ ಸರ್ವೆ ನಂ.119 ರಲ್ಲಿ 1 ಎಕರೆ 4 ಗುಂಟೆ ಪ್ರದೇಶವನ್ನ 1970ರಲ್ಲಿ 20 ವರ್ಷದ ಅವಧಿಗೆ ರಾಜೀ.ವಿ.ರಾಮನ್ ಎಂಬುವರಿಗೆ ಗಣಿಗಾರಿಕೆ ಗುತ್ತಿಗೆ ನೀಡಿತ್ತು. ಗುತ್ತಿಗೆ ಅವಧಿ ಮುಗಿದ ನಂತರ ಗಣಿ ಕಾರ್ಯ ಸ್ಥಗಿತಗೊಳಿಸಿ, ಗುತ್ತಿಗೆದಾರ ಆ ಜಾಗವನ್ನು ಸರ್ಕಾರಕ್ಕೆ ಹಿಂದಿರುಗಿಸಿದ್ದರು. ನಂತರ ಸರ್ಕಾರವು ತನ್ನ ಆಸ್ತಿಯನ್ನು ರಕ್ಷಣೆ ಮಾಡಿಕೊಳ್ಳುವಲ್ಲಿ ವಿಫಲವಾಗಿದೆ.

ಈ ಸರ್ಕಾರಿ ಜಾಗಕ್ಕೆ ಹೇಳುವವರು ಕೇಳುವವರು ಯಾರೂ ಇಲ್ಲ. ಪರಿಣಾಮ ಕೆಲವು ಸ್ಥಳೀಯರು ಗಣಿಯಲ್ಲಿ ಉಳಿದಿದ್ದ ಬೆಲೆಬಾಳುವ ವಸ್ತುಗಳನ್ನು ಅಕ್ರಮವಾಗಿ ಸಾಗಿಸಿದ್ದಾರೆ. ಅಲ್ಲದೆ ಕೆಲ ಪ್ರಭಾವಿಗಳು ಗಣಿ ಪ್ರದೇಶವನ್ನ ನಿವೇಶನಗಳನ್ನಾಗಿ ಪರಿವರ್ತಿಸಿ, ಯಾರಿಗೋ ಮಾರಾಟ ಮಾಡಿ ಕಾಲ್ಕಿತ್ತಿದ್ದಾರೆ. ಸದರಿ ಸರ್ಕಾರಿ ಜಾಗದಲ್ಲಿ ಕೆಲವು ನಿರ್ಮಾಣಗಳೂ ತಲೆ ಎತ್ತಿವೆ ಎನ್ನಲಾಗಿದೆ.

ಇದೆಲ್ಲದರ ಬಗ್ಗೆ ಸಾಮಾಜಿಕ ಕಾರ್ಯಕರ್ತ ಬಿ.ಎನ್.ನಾಗೇಂದ್ರ, ದಾಖಲೆ ಹಾಗೂ ಜಾಗದ ವೀಡಿಯೋ ಸಮೇತ ದೂರು ನೀಡಿ, ಅಕ್ರಮ ತಡೆಯುವಂತೆ ತಾಲೂಕು ಹಾಗೂ ಜಿಲ್ಲಾಡಳಿತಕ್ಕೆ ಮನವಿ ನೀಡಿದ್ದಾರೆ. ದೂರಿನನ್ವಯ ಸ್ಥಳಕ್ಕೆ ಬಂದ ತಹಸೀಲ್ದಾರ್, ಆರ್‌ಐ ಹಾಗೂ ವಿಎ, ಪರಿಶೀಲನೆ ನಡೆಸಿ ಹಿಂದಿರುಗಿದ್ದಾರೆ. ವರ್ಷ ಕಳೆದರೂ ಕ್ರಮ ಜರುಗಿಸಿಲ್ಲ. ಆಸ್ತಿ ರಕ್ಷಣೆಗೂ ಅಧಿಕಾರಿಗಳು ಮುಂದಾಗಿಲ್ಲ. ಸರ್ವೆ ನಡೆಸಿದ ಇಬ್ಬರು ಭಿನ್ನ ವರದಿ ನೀಡಿ, ಗೊಂದಲ ಸೃಷ್ಟಿಸುವ ಮೂಲಕ ಅಕ್ರಮಕ್ಕೆ ರಹದಾರಿ ಮಾಡಿಕೊಟ್ಟಿದ್ದಾರೆ. ಸದರಿ ಬಿ ಖರಾಬು ಭೂಮಿಯಲ್ಲಿ ಅಕ್ರಮ ಗಣಿಗಾರಿಕೆ ನಡೆದಿರುವಂತೆ ಕಂಡುಬಂದರೂ ಅಧಿಕಾರಿಗಳು ಮಾತ್ರ ಗಂಭೀರವಾಗಿ ಪರಿಗಣಿಸಿಲ್ಲ ಎಂದು ಸಾರ್ವಜನಿಕರು ದೂರಿದ್ದಾರೆ.

ಮೈಸೂರಿನಲ್ಲಿ ಇಂತಹ ಹಲವು ಪ್ರಕರಣಗಳು ಬೆಳಕಿಗೆ ಬರುತ್ತಿವೆ. ಸರ್ಕಾರಿ ಭೂಮಿ ರಕ್ಷಿಸುವುದು ಅಧಿಕಾರಿಗಳ ಕರ್ತವ್ಯ. ಆದರೆ ಸಾರ್ವಜನಿಕರೇ ದೂರು ನೀಡಿ, ಗಮನಕ್ಕೆ ತಂದರೂ ಸರ್ಕಾರಿ ಆಸ್ತಿ ಉಳಿಸಿಕೊಳ್ಳುವಲ್ಲಿ ಉದಾಸೀನತೆ ತೋರುತ್ತಿದ್ದಾರೆ. ಅಕ್ರಮಗಳನ್ನು ಹತ್ತಿಕ್ಕುವ ಬದಲು ಮೌನವಾಗಿರುವ ಮೂಲಕ ಮತ್ತಷ್ಟು ಪ್ರೋತ್ಸಾಹ ನೀಡುತ್ತಿದ್ದಾರೆ. ಈಗಲಾದರೂ ಶ್ಯಾದನಹಳ್ಳಿ ಬಳಿ ಕಂಡವರ ಪಾಲಾಗುತ್ತಿರುವ ಭೂಮಿ ರಕ್ಷಣೆಗೆ ಅಧಿಕಾರಿಗಳು ಸೂಕ್ತ ಕ್ರಮ ವಹಿಸಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಸಾಮಾಜಿಕ ಜಾಲತಾಣದ ಅತೀ ಬಳಕೆಯಿಂದ ಮನುಷ್ಯನ ಸಂಬಂಧ ಹಾಳಾಗುತ್ತಿದೆ

ಮುಕ್ತ ವಿವಿ ಡೀನ್ ಪ್ರೊ. ವಿ.ಚಂದ್ರೇಗೌಡ ವಿಷಾದ



ಮೈಸೂರು ಮಹಾರಾಜ ಕಾಲೇಜಿನಲ್ಲಿ ಮಂಗಳವಾರ ಕನ್ನಡ ಸಂಘದ ಕಾರ್ಯಕ್ರಮಗಳ ಸಮಾರೋಪ ಮತ್ತು 'ತಳಿರು ಪತ್ರಿಕೆ' ಬಿಡುಗಡೆ ಕಾರ್ಯಕ್ರಮ ನಡೆಯಿತು.

ಮೈಸೂರು, ಏ.21(ಎಂಕೆ)– ಕುಮಾರ ವ್ಯಾಸನ 'ಕರ್ಣಾಟ ಭಾರತ ಕಥಾ ಮಂಜರಿ' ಓದಿದರೆ ಕನ್ನಡ ಸಾಹಿತ್ಯದ ಶ್ರೀಮಂತಿಕೆ ತಿಳಿಯಲಿದ್ದು, ಇಂತಹ ಭವ್ಯ ಪರಂಪರೆಯನ್ನೊಳಗೊಂಡ ಕನ್ನಡ ಸಾಹಿತ್ಯವನ್ನು ಮತ್ತಷ್ಟು ಶ್ರೀಮಂತಗೊಳಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಡೀನ್(ಅಧ್ಯಯನ ಕೇಂದ್ರ) ಪ್ರೊ.ವಿ.ಚಂದ್ರೇಗೌಡ ತಿಳಿಸಿದರು.

ಮೈಸೂರು ಮಹಾರಾಜ ಕಾಲೇಜಿನ ಜೂನಿಯರ್ ಬಿಎ ಹಾಲ್‌ನಲ್ಲಿ ಕನ್ನಡ ವಿಭಾಗದ ಕನ್ನಡ ಸಂಘದ ಕಾರ್ಯಕ್ರಮಗಳ ಸಮಾರೋಪ ಮತ್ತು 'ತಳಿರು ಪತ್ರಿಕೆ' ಬಿಡುಗಡೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಕನ್ನಡ ಸಾಹಿತ್ಯ ಅಧ್ಯಯನದಿಂದ ಜ್ಞಾನ ವೃದ್ಧಿಯ ಜೊತೆಗೆ ಹೊಸ ಸಾಹಿತ್ಯ ರಚನೆಗೆ ಪ್ರೇರಣೆ ದೊರೆಯಲಿದೆ ಎಂದರು.

ಕಲಿಕೆಗೆ ಎಂದಿಗೂ ಕೊನೆಯಿಲ್ಲ ವಿದ್ಯಾರ್ಥಿಗಳಲ್ಲಿ ಕಲಿಕಾ ಹಸಿವು ಹೆಚ್ಚಿರಬೇಕು. ವಿದ್ಯಾಭ್ಯಾಸದ ಜೊತೆಗೆ ಕೌಶಲ್ಯಗಳನ್ನು ರೂಢಿಸಿಕೊಳ್ಳಬೇಕು. ಓದುವ ಸಮಯದಲ್ಲಿ ವಿದ್ಯೆಗೆ ಪ್ರಾಮುಖ್ಯತೆ ನೀಡಬೇಕು. ವರ್ತಮಾನ ಕಾಲದ ಪ್ರಜ್ಞೆ ಮತ್ತು ನಾಳಿನ ಪರಿಕಲ್ಪನೆ ವಿದ್ಯಾರ್ಥಿಗಳಲ್ಲಿ ಇರಬೇಕಿದ್ದು, ಕುವೆಂಪು ಅವರ ಮಾತಿನಂತೆ ವಿದ್ಯಾರ್ಥಿಗಳು ಭತ್ತ ಬೆಳೆಯುವ ಗದ್ದೆಗಳಾಗಬೇಕೇ ಹೊರತು ಭತ್ತ ತುಂಬುವ ಚೀಲಗಳಾಗಬಾರದು ಎಂದು ಸಲಹೆ ನೀಡಿದರು.

ಆಧುನಿಕತೆ ಬೆಳೆದಂತೆ ಪುಸ್ತಕ ಹಿಡಿದು ಓದುವರರ ಸಂಖ್ಯೆಯೂ ಕಡಿಮೆಯಾಗುತ್ತಿದೆ. ಯಾರ ಕೈಯಲ್ಲಿ ನೋಡಿದರೂ ಮೊಬೈಲ್ ಇರುತ್ತದೆ. ವಿದ್ಯಾರ್ಥಿಗಳಂತು ಸಾಮಾಜಿಕ ಜಾಲತಾಣಗಳ ಬಳಕೆಯಲ್ಲಿ ಮುಳುಗಿದ್ದಾರೆ. ಇದೆಲ್ಲದರಿಂದ ಮನುಷ್ಯ–ಮನುಷ್ಯನ ನಡುವಿನ ಸಂಬಂಧ ಹಾಳಾಗುತ್ತಿದೆ. ಯಂತ್ರಗಳಂತೆ ವರ್ತಿಸುತ್ತಿದ್ದಾರೆ. ಆದ್ದರಿಂದ ಇಂತಹ ಸಾಹಿತ್ಯಾಭಿರುಚಿ ಬೆಳೆಸುವ ಕಾರ್ಯಕ್ರಮಗಳು ನಿರಂತರವಾಗಿ ನಡೆಯುತ್ತಿರಬೇಕು ಎಂದು ತಿಳಿಸಿದರು.

ಪತ್ರಿಕಾ ಛಾಯಾಗ್ರಾಹಕ ನಾಗೇಶ್ ಪಾಣತ್ತಲೆ 'ತಳಿರು ಪತ್ರಿಕೆ' ಬಿಡುಗಡೆ ಮಾಡಿದರು. ಕಾಲೇಜು ಪ್ರಾಂಶುಪಾಲ ಪ್ರೊ.ವಿ.ಷಣ್ಮುಗಂ, ಆಡಳಿತಾಧಿಕಾರಿ ಪ್ರೊ.ಗೋವಿಂದರಾಜು, ಕನ್ನಡ ವಿಭಾಗ ಮುಖ್ಯಸ್ಥರಾದ ಡಾ.ಡಿ.ವಿಜಯಲಕ್ಷ್ಮಿ, ಕನ್ನಡ ಸಂಘದ ಸಂಚಾಲಕಿ ಪ್ರೊ.ಬಿ.ಪಿ. ಆಶಾ ಕುಮಾರಿ, ತಳಿರು ಪತ್ರಿಕೆ ಸಂಪಾದಕ ವಿದ್ಯಾರ್ಥಿ ಎ.ಎಸ್.ನಂದೀಶ್ ಮತ್ತಿತರರಿದ್ದರು.

ಮೈಸೂರಿನಲ್ಲಿ ಶ್ರೀ ಶಂಕರಾಚಾರ್ಯರ ಅರ್ಥಪೂರ್ಣ ಜಯಂತ್ಯೋತ್ಸವ

ಅಲ್ಪಾಯುಷ್ಯದಲ್ಲೇ ಆದಿಶಂಕರಾಚಾರ್ಯರಿಂದ ಅಭೂತಪೂರ್ವ ಸಾಧನೆ: ಶಾಸಕ ಟಿ.ಎಸ್.ಶ್ರೀವತ್ಸ



ಮೈಸೂರಿನ ಕಲಾಮಂದಿರದ ಕಿರುರಂಗ ಮಂದಿರದಲ್ಲಿ ಮಂಗಳವಾರ ಜಿಲ್ಲಾಡಳಿತ ಹಾಗೂ ಶ್ರೀ ಶಂಕರಾಚಾರ್ಯ ಜಯಂತ್ಯೋತ್ಸವ ಸಮಿತಿ ಸಂಯುಕ್ತವಾಗಿ ಆಯೋಜಿಸಿದ್ದ ಶ್ರೀ ಶಂಕರಾಚಾರ್ಯರ ಜಯಂತಿ ಕಾರ್ಯಕ್ರಮವನ್ನು ಶಾಸಕ ಟಿ.ಎಸ್.ಶ್ರೀವತ್ಸ ಅವರು ಉದ್ಘಾಟಿಸಿದರು.

ಮೈಸೂರು, ಏ.21(ಬಿಎಲ್‌ಯು)– ಅದ್ವೈತ ಸಿದ್ಧಾಂತದ ಮೂಲಕ ವಿಶ್ವಕ್ಕೆ ಮಾದರಿಯಾದ ಆದಿ ಶಂಕರಾಚಾರ್ಯರು 32 ವರ್ಷ ಅಲ್ಪಾಯುಷ್ಯದಲ್ಲೇ ಭವಿಷ್ಯದ ಹಲವು ಪೀಳಿಗೆಗಳು ನೆನಪಿನಲ್ಲಿಟ್ಟುಕೊಳ್ಳುವ ಅಭೂತಪೂರ್ವ ಬೋಧನೆ ಸಾಧನೆ ಮಾಡಿದ್ದಾರೆ ಎಂದು ಶಾಸಕ ಟಿ.ಎಸ್.ಶ್ರೀವತ್ಸ ಅಭಿಪ್ರಾಯಪಟ್ಟರು.

ಮೈಸೂರಿನ ಕಲಾಮಂದಿರದ ಕಿರುರಂಗ ಮಂದಿರದಲ್ಲಿ ಇಂದು ಜಿಲ್ಲಾಡಳಿತ ಹಾಗೂ ಶ್ರೀ ಶಂಕರಾಚಾರ್ಯ ಜಯಂತ್ಯೋತ್ಸವ ಸಮಿತಿ ಸಂಯುಕ್ತವಾಗಿ ಆಯೋಜಿಸಿದ್ದ ಶ್ರೀ ಶಂಕರಾಚಾರ್ಯರ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಶಂಕರಾಚಾರ್ಯರು ಭಾರತದ ನಾಲ್ಕು ದಿಕ್ಕುಗಳಲ್ಲಿ ಚತುರ್ದಾಮ ಪೀಠ ಅಥವಾ ಮಠಗಳನ್ನು ಸ್ಥಾಪಿಸಿ, ಮನೆ ಮಾತಾಗಿದ್ದಾರೆ ಎಂದರು.

ಶಂಕರಾಚಾರ್ಯರು ಇಡೀ ಭಾರತದಾದ್ಯಂತ ಕಾಲ್ನಡಿಗೆಯಲ್ಲಿ ಸಂಚರಿಸಿ ಅದ್ವೈತ ಸಿದ್ಧಾಂತವನ್ನು ಪ್ರತಿಪಾದಿಸಿದರು. ಮುನ್ನೂರಕ್ಕೂ ಹೆಚ್ಚು ಶ್ಲೋಕಗಳನ್ನು ರಚಿಸಿದ್ದು, ಇದರಲ್ಲಿ ಶಂಕರಾಚಾರ್ಯರು ರಚಿಸಿದ 'ಭಜಗೋವಿಂದಂ' ಅತ್ಯಂತ ಶ್ರೇಷ್ಠ ಶ್ಲೋಕವಾಗಿದೆ ಎಂದು ಶ್ರೀವತ್ಸ ಅಭಿಪ್ರಾಯ ವ್ಯಕ್ತಪಡಿಸಿದರು.

ನಂತರ ಮಾತನಾಡಿದ ಶ್ರೀ ರಾಮಕೃಷ್ಣ ಆಶ್ರಮದ ಕನ್ನಡ ಪುಸ್ತಕ ಪ್ರಕಟಣಾ ವಿಭಾಗದ ಸ್ವಾಮಿ ಸರ್ವಜಯಾನಂದಜಿ ಅವರು, ಶ್ರೀ ಶಂಕರಾಚಾರ್ಯರು ತಮ್ಮ ಜೀವಿತಾವಧಿಯಲ್ಲಿ ಅತ್ಯದ್ಭುತ ಸಾಧನೆ ಮಾಡಿದ್ದಾರೆ. ಅವರ ಅದ್ವೈತ ಸಿದ್ಧಾಂತವನ್ನು ಜನ ಸಾಮಾನ್ಯರಿಗೆ ಸರಳವಾಗಿ ತಿಳಿಸಬೇಕು ಎಂದು ಸಲಹೆ ನೀಡಿದರು.

ಭಾರತದ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಪ್ರಮುಖ ಮಠಗಳನ್ನು ಸ್ಥಾಪಿಸಿದ ಶಂಕರಾಚಾರ್ಯರು ವಿಶ್ವಕ್ಕೆ ಮಾದರಿಯಾಗಿದ್ದಾರೆ ಎಂದು ಹೇಳಿದರು.

ತರುವಾಯ ಮಾತನಾಡಿದ ಸಂಸ್ಕೃತಿ ಚಿಂತಕ ಗ.ನಾ.ಭಟ್, ಹಲವು ಮತಗಳಿಂದ ದಾಳಿಗೊಳಗಾದ ಹಿಂದು ಧರ್ಮವನ್ನು ಪುನರುತ್ಥಾನಗೊಳಿಸಿದ ಶಂಕರಾಚಾರ್ಯರಲ್ಲಿ ಭಾವುಕತೆ ಹಾಗೂ ವೈಚಾರಿಕತೆ ಸಮಾಗಮಗೊಂಡಿತ್ತು. ಗೋವಿಂದ ಭಾಗವತ್ಪಾದರ ಶಿಷ್ಯರಾಗಿದ್ದ ಶಂಕರಾಚಾರ್ಯರು 8ನೇ ವಯಸ್ಸಿನಲ್ಲೇ ನಾಲ್ಕು ವೇದಗಳನ್ನು ಪಠಣ ಮಾಡಿದ್ದರು. ಜ್ಞಾನ ಮಾರ್ಗ ತಲುಪುವ ಏಣಿಯಾಗಿ ಮೂರ್ತಿ ಪೂಜೆಯನ್ನು ತಂದರು ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ, ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಜಿ.ಟಿ.ಪ್ರಕಾಶ್, ಶ್ರೀಕಂಠ ಕುಮಾರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಬಸವ ಮಾರ್ಗ ಫೌಂಡೇಷನ್‌ನಿಂದ ಬಸವ ಜಯಂತಿ ಆಚರಣೆ



ಬಸವಮಾರ್ಗ ಫೌಂಡೇಷನ್‌ನಲ್ಲಿ ಬಸವ ಜಯಂತಿ ಆಚರಿಸಲಾಯಿತು.

ಮೈಸೂರು, ಏ.21(ಎಂಕೆ)– ಮೈಸೂರಿನ ಹೆಬ್ಬಾಳ ಸಮೀಪದ ರಿಂಗ್ ರಸ್ತೆಯಲ್ಲಿರುವ ಬಸವಮಾರ್ಗ ಫೌಂಡೇಷನ್‌ನಲ್ಲಿ ಬಸವ ಜಯಂತಿ ಆಚರಿಸಲಾಯಿತು.

ಕಾಯಕಯೋಗಿ ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಬಸವಮಾರ್ಗ ಫೌಂಡೇಷನ್ ಸಂಸ್ಥಾಪಕ ಅಧ್ಯಕ್ಷ ಎಸ್.ಬಸವರಾಜು, ಜಾತಿ ವ್ಯವಸ್ಥೆ ವಿರೋಧಿಸಿ, ಸಮಾನತೆಗೆ ಆದ್ಯತೆ ನೀಡಿದ ಬಸವಣ್ಣನವರು 'ಕಾಯಕವೇ ಕೈಲಾಸ' ಸಂದೇಶದ ಮೂಲಕ ಕೆಲಸದ ಮಹತ್ವವನ್ನು ಸಾರಿದ್ದಾರೆ. ಶರಣರ ವಚನಗಳಲ್ಲಿ ಮಾನವೀಯ ಮೌಲ್ಯಗಳಿದ್ದು, ಬಸವಣ್ಣನವರು ಸ್ಥಾಪಿಸಿದ ಅನುಭವ ಮಂಟಪ ವಿಶ್ವದ ಮೊದಲ ಸಂಸತ್ತು ಎಂದೇ ಪ್ರಸಿದ್ಧವಾಗಿದೆ ಎಂದು ಸ್ಮರಿಸಿದರು.

ಜಗಜ್ಯೋತಿ ಬಸವಣ್ಣನವರ ಸಂದೇಶಗಳು ಇಂದಿಗೂ ಅನುಕರಣೀಯ ಮತ್ತು ಪ್ರೇರಣದಾಯಕವಾಗಿದೆ. 12ನೇ ಶತಮಾನದಲ್ಲಿ ಪ್ರಜಾಪ್ರಭುತ್ವ ಹಾಗೂ ಜನರ ಆಡಳಿತದ ಬಗ್ಗೆ ಬಸವಣ್ಣನವರು ಆಲೋಚನೆ ಮಾಡಿದ್ದರು. ಪುರುಷ ಮತ್ತು ಸ್ತ್ರೀ ಭೇದವಿಲ್ಲದೆ ಎಲ್ಲರಿಗೂ ಸಮಾನ ಸ್ಥಾನಮಾನಗಳನ್ನು ದೊರಕಿಸಿಕೊಡುವಲ್ಲಿ ಅವರು ಶ್ರಮಿಸಿದರು. ಬಸವಣ್ಣ ಅವರ ಸಂದೇಶಗಳು ಇಂದಿನ ಪೀಳಿಗೆಗೆ ದೊಡ್ಡ ಆಸ್ತಿಯಾಗಿದೆ ಎಂದರು. ನಗರ ಪಾಲಿಕೆ ಮಾಜಿ ಸದಸ್ಯ ಸ್ನೇಕ್ ಶ್ಯಾಮ್, ಅಕ್ಷರ ಫೌಂಡೇಷನ್ ಅಧ್ಯಕ್ಷ ಡಾ.ಸುನೀಲ್, ಸಿಬ್ಬಂದಿ ರಾಘವೇಂದ್ರ, ಸಂಜಯ್ ಗೌಡ, ನಂದೀಶ್ ಹಾಗೂ ಬೇಸಿಗೆ ಶಿಬಿರದ ಮಕ್ಕಳು ಉಪಸ್ಥಿತರಿದ್ದರು.

ನಾಳೆಯಿಂದ ಶ್ರೀ ವೆಂಕಟೇಶ್ವರ ಧ್ಯಾನ ಕೇಂದ್ರದ 8ನೇ ವಾರ್ಷಿಕೋತ್ಸವ

10 ದಿನಗಳ ಕಾಲ ವಿಶೇಷ ಕಾರ್ಯಕ್ರಮ ಸರಣಿ



ಮೈಸೂರು, ಏ.21– ಶ್ರೀರಾಮಪುರದಲ್ಲಿರುವ ಉತ್ತರಾದಿ ಮಠದ ಶಾಖೆ, ಶ್ರೀವೆಂಕಟೇಶ್ವರ ಧ್ಯಾನ ಕೇಂದ್ರದ 8ನೇ ವಾರ್ಷಿಕೋತ್ಸವ ಸಮಾರಂಭ ಏ.23ರಿಂದ ಮೇ 2ರವರೆಗೆ ಜರುಗಲಿದೆ.

ಕಾರ್ಯಕ್ರಮದ ಪ್ರಯುಕ್ತ ಏ.23ರಿಂದ 25 ರವರೆಗೆ ನಿತ್ಯ ಸಂಜೆ 4 ರಿಂದ 7.30 ರವರೆಗೆ ಪಂಡಿತ ಬಾದರಾಯಣಾಚಾರ್ಯರಿಂದ ಗಾಯತ್ರಿ ಚಿಂತನ ವಿಶೇಷ ಪ್ರವಚನ, ಏ.26ರ ಬೆಳಗ್ಗೆ 108 ಕುಂಡಗಳಲ್ಲಿ ಹೋಮ ಮತ್ತು ಅಂದು ಸಂಜೆ ಶ್ರೀನಿವಾಸ ಕಲ್ಯಾಣ ಉತ್ಸವ ನೆರವೇರಲಿದೆ.

ಹರಿನಾಮ ಸಂಕೀರ್ತನೆ: ಏ.27ರ ಬೆಳಗ್ಗೆ ಸರ್ವ ಮೂಲ ಮತ್ತು ವೇದಪಾರಾಯಣ, ಸಂಜೆ 6ಕ್ಕೆ ಕುಮಾರಿ ಎ.ಆರ್.ಕೌಸಲ್ಯಾ ಮತ್ತು ಮತ್ತು ಎ.ಆರ್.ಅಪ್ರಮೇಯ ಅವರಿಂದ ಹರಿನಾಮ ಸಂಕೀರ್ತನೆ, ಏ.28ರ ಸಂಜೆ 6ಕ್ಕೆ ಪಂಡಿತ ಅನಿರುದ್ಧಾಚಾರ್ಯ ಪಾಂಡುರಂಗಿ ಅವರಿಂದ ಶ್ರೀ ಧನ್ವಂತ್ರಿ ಮಹಿಮೆ ಪ್ರವಚನ, ಏ.29ರ ಬೆಳಗ್ಗೆ ಧನ್ವಂತ್ರಿ ಹೋಮ, ಅಂದು ಸಂಜೆ 6ಕ್ಕೆ ನರಸಿಂಹ ಮಹಿಮೆ ಕುರಿತು ಪಂಡಿತ ವ್ಯಾಸತೀರ್ಥ ಆಚಾರ್ಯರಿಂದ ಪ್ರವಚನ, ಏ.30ರ ಬೆಳಗ್ಗೆ ನರಸಿಂಹ ಹೋಮ, ಅಂದು ಸಂಜೆ 6ಕ್ಕೆ ಕೂರ್ಮಾವತಾರ ಕುರಿತು ಪಂಡಿತ ಆದ್ಯ ಗೋವಿಂದಾಚಾರ್ಯರಿಂದ ಪ್ರವಚನ ಇರಲಿದೆ.

ಮಹಾರಥೋತ್ಸವ: ಮೇ 1 ರಂದು ಪುರುಷಸೂಕ್ತ ಮತ್ತು ಶ್ರೀ ಲಕ್ಷ್ಮೀ ಶೋಭಾನೆ ಪಾರಾಯಣದ ಸಮರ್ಪಣೆ ಅಂಗವಾಗಿ ಬೆಳಗ್ಗೆ ಪುರುಷಸೂಕ್ತ, ಶ್ರೀಸೂಕ್ತ ಹೋಮ, ಸಂಜೆ ರಾಜಬೀದಿಯಲ್ಲಿ ಶ್ರೀ ವೆಂಕಟೇಶ ದೇವರ ಮಹಾರಥೋತ್ಸವ ಜರುಗಲಿದೆ. ಮೇ 2ರ ಬೆಳಗ್ಗೆ 8ಕ್ಕೆ ಶ್ರೀ ಉತ್ತರಾದಿ ಮಠಾಧೀಶರಾದ ಶ್ರೀ ಸತ್ಯಾತ್ಮತೀರ್ಥ ಸ್ವಾಮೀಜಿ ಅವರಿಗೆ ಪಾದಪೂಜೆ, ಮುದ್ರಾಧಾರಣೆ, ಶ್ರೀಗಳಿಂದ ವೆಂಕಟೇಶ ದೇವರಿಗೆ ಕ್ಷೀರಾಭಿಷೇಕ, ನಂತರ ಅನುಗ್ರಹ ಸಂದೇಶವಿದ್ದು, ಈ ಎಲ್ಲಾ ಕಾರ್ಯಕ್ರಮಗಳಿಗೂ ಭಕ್ತರು ಅಪಾರ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಕೇಂದ್ರದ ವ್ಯವಸ್ಥಾಪಕ ಪಂಡಿತ ಹೇಮಂತಾಚಾರ್ಯ ಗುಡಿ ಮನವಿ ಮಾಡಿದ್ದಾರೆ.

ಗುಂಡ್ಲುಪೇಟೆ ತಾಲೂಕಿನ ಅಭಿವೃದ್ಧಿಗೆ ವಿಶೇಷ ಆದ್ಯತೆ



ಡಿ.ದೇವರಾಜ್ ಅರಸು ಕ್ರೀಡಾಂಗಣದಲ್ಲಿ ನಡೆದ ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆಗೆ ಸಿಎಂ ಸಿದ್ದರಾಮಯ್ಯ ಚಾಲನೆ ನೀಡಿದರು.

ಚಾಮರಾಜನಗರ, ಏ.21(ಎಸ್‌ಎಸ್)– ರಾಜ್ಯದ 45 ಹಿಂದುಳಿದ ತಾಲೂಕುಗಳ ಪೈಕಿ ಗುಂಡ್ಲುಪೇಟೆ ತಾಲೂಕು ಕೂಡ ಒಂದಾಗಿದ್ದು, ತಾಲೂಕಿನ ಅಭಿವೃದ್ಧಿಗೆ ವಿಶೇಷ ಆದ್ಯತೆ ನೀಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದ್ದಾರೆ.

ಪಟ್ಟಣದ ಡಿ.ದೇವರಾಜ ಅರಸು ಕ್ರೀಡಾಂಗಣದಲ್ಲಿ ನಡೆದ ತಾಲೂಕಿನ 110 ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ ಚಾಲನೆ ಹಾಗೂ ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಹಾಗೂ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಗುಂಡ್ಲುಪೇಟೆಯಲ್ಲಿ 475 ಕೋಟಿ ರೂ.ಗಳ ವೆಚ್ಚದಡಿ 110 ಕೆರೆಕಟ್ಟೆಗಳಿಗೆ ನೀರು ತುಂಬಿಸುವ ಯೋಜನೆಯೂ ಸೇರಿದಂತೆ ಒಟ್ಟು 523 ಕೋಟಿ ರೂ. ಮೊತ್ತದ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ. ನಂಜುಂಡಪ್ಪ ವರದಿಯ ಪ್ರಕಾರ ಗುಂಡ್ಲುಪೇಟೆ ಯನ್ನು ಅತಿ ಹಿಂದುಳಿದ ತಾಲೂಕೆಂದು ಗುರುತಿಸಲಾಗಿದ್ದು, ಈ ತಾಲೂಕಿಗೆ ವಿಶೇಷ ಆದ್ಯತೆಯನ್ನು ನೀಡಲಾಗಿದೆ ಎಂದು ತಿಳಿಸಿದರು.

ವಿರೋಧಪಕ್ಷಗಳ ಅಪಪ್ರಚಾರ: ನಮ್ಮ ಸರ್ಕಾರದ ಮೂರು ವರ್ಷಗಳ ಅಧಿಕಾರದ ಅವಧಿಯಲ್ಲಿ ರಾಜ್ಯವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುತ್ತಿದೆ. ಆದಾಗ್ಯೂ ವಿರೋಧ ಪಕ್ಷಗಳು ರಾಜಕೀಯ ದುರುದ್ದೇಶದಿಂದ ಅಪಪ್ರಚಾರ ಮಾಡುತ್ತಿದೆ. ಆದರೆ ಜನರು ಇದರ ಸತ್ಯಾಸತ್ಯತೆ ಅರಿಯಬೇಕು ಎಂದರು.

ರಾಜ್ಯದ ಗ್ಯಾರಂಟಿ ಯೋಜನೆಗಳನ್ನು ಬಿಜೆಪಿಯವರು ವಿರೋಧಿಸಿದರು. ಆದರೆ ನಮ್ಮ ಗ್ಯಾರಂಟಿ ಯೋಜನೆಗಳನ್ನು ಬಿಜೆಪಿಯವರು ಹಲವು ರಾಜ್ಯಗಳಲ್ಲಿ ಅನುಸರಿಸುತ್ತಿದ್ದಾರೆ. ಗ್ಯಾರಂಟಿಗಳನ್ನು ಜಾರಿಗೊಳಿಸಿದರೆ, ಕರ್ನಾಟಕ ದಿವಾಳಿಯಾಗುತ್ತದೆ ಎಂದು ಪ್ರಧಾನಿ ಮೋದಿಯವರೇ ಟೀಕಿಸಿದ್ದರು. ಆದರೂ, ಗ್ಯಾರಂಟಿಗಳ ಜೊತೆಗೆ ಅಭಿವೃದ್ಧಿಯನ್ನು ಸಾಧಿಸುತ್ತಿರುವುದಕ್ಕೆ ಇಂದಿನ ಕಾರ್ಯಕ್ರಮವೇ ಸಾಕ್ಷಿಯಾಗಿದೆ. ಕಾಂಗ್ರೆಸ್ ಸರ್ಕಾರ ಎಂದಿಗೂ ನುಡಿದಂತೆ ನಡೆಯುತ್ತದೆ ಎಂದು ಸಾರಿದರು.

ಎಸ್‌ಸಿಎಸ್‌ಪಿ, ಟಿಎಸ್‌ಪಿಗೆ ಹೆಚ್ಚು ಅನುದಾನ: ಮೂರು ವರ್ಷಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೆ ಒಟ್ಟು 1 ಲಕ್ಷ 60 ಸಾವಿರ ಕೋಟಿ ವೆಚ್ಚ ಮಾಡಲಾಗಿದೆ. ಬಿಜೆಪಿ ನಾಲ್ಕು ವರ್ಷ ಅಧಿಕಾರದಲ್ಲಿದ್ದರೂ ಎಸ್‌ಸಿಎಸ್‌ಪಿ ಹಾಗೂ ಟಿಎಸ್‌ಪಿ ಯೋಜನೆಯಡಿ 1 ಲಕ್ಷ 10 ಸಾವಿರ ಕೋಟಿ ಮಾತ್ರ ವೆಚ್ಚ ಮಾಡಿದೆ ಎಂದು ಸಿದ್ದರಾಮಯ್ಯ ಆಪಾದಿಸಿದರು. ನೀರಾವರಿ, ಲೋಕೋಪಯೋಗಿ, ಗ್ರಾಮೀಣಾಭಿವೃದ್ಧಿ, ಇಂಧನ, ಕೃಷಿ ಸೇರಿದಂತೆ ಎಲ್ಲಾ ಇಲಾಖೆಗಳ ಮೂಲಕ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದ್ದೇವೆ ಎಂದರು.

ಸಂಚಾರಿ ಪೊಲೀಸ್ ಠಾಣೆ : ಗುಂಡ್ಲುಪೇಟೆಯಲ್ಲಿ ಸಂಚಾರಿ ಪೊಲೀಸ್ ಠಾಣೆಯನ್ನು ಸ್ಥಾಪಿಸಲು ಈ ಬಾರಿಯ ಆಯವ್ಯಯದಲ್ಲಿ ಘೋಷಣೆ ಮಾಡಲಾಗಿದೆ. ಕನಕ ಭವನಕ್ಕೂ ಅನುದಾನ ನೀಡಲಾಗುವುದು. ತೆರಕಣಾಂಬಿಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸಿ 30 ಹಾಸಿಗೆಗಳ ಆಸ್ಪತ್ರೆಯನ್ನಾಗಿಸಲಾಗಿದೆ. ಇಡೀ ಕ್ಷೇತ್ರದ ಅಭಿವೃದ್ಧಿಯನ್ನು ಶಾಸಕರು ಮಾಡಲಿದ್ದಾರೆ. ಕೆರೆಗಳನ್ನು ತುಂಬಿಸುವ ಕೆಲಸ ನಾಳೆಯಿಂದಲೇ ಪ್ರಾರಂಭವಾಗಲಿದೆ ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ಸಚಿವರಾದ ಡಾ.ಎಚ್.ಸಿ. ಮಹದೇವಪ್ಪ ಸತೀಶ್‌ಜಾರಕಿಹೋಳಿ, ಸಂಸದ ಸುನೀಲ್ ಬೋಸ್, ಶಾಸಕರಾದ ಸಿ. ಪುಟ್ಟರಂಗಶೆಟ್ಟಿ, ಎ.ಆರ್. ಕೃಷ್ಣಮೂರ್ತಿ, ಎಚ್.ಎಂ. ಗಣೇಶ ಪ್ರಸಾದ್, ದರ್ಶನ್ ಧ್ರುವನಾರಾಯಣ್, ಮಾಜಿ ಶಾಸಕರಾದ ಗೀತಾ ಮಹದೇವ ಪ್ರಸಾದ್, ಕಳಲೆ ಕೇಶವಮೂರ್ತಿ, ಕಾಡಾ ಧ್ಯಕ್ಷ ಮರಿಸ್ವಾಮಿ, ಗ್ಯಾರಂಟಿ ಯೋಜನೆ ಅಧ್ಯಕ್ಷ ಎಚ್.ವಿ. ಚಂದ್ರು, ಜಿಲ್ಲಾಧಿಕಾರಿ ಶ್ರೀರೂಪಾ, ಸಿಇಓ ಮೋನಾರೋತ್, ಅಪರ ಜಿಲ್ಲಾಧಿಕಾರಿ ಜವರಶೆಟ್ಟಿ, ಉಪ ವಿಭಾಗಾಧಿಕಾರಿ ದಿನೇಶ್‌ಕುಮಾರ್ ಮೀನಾ ಸೇರಿದಂತೆ ಇತರರು ಇದ್ದರು.

ಕೆರೆಗಳಿಗೆ ನೀರು ತುಂಬಿಸುವ ಯೋಜನೆಯಿಂದ 100ಕ್ಕೂ ಹೆಚ್ಚು ಗ್ರಾಮಗಳಿಗೆ ಅನುಕೂಲ

ಚಾಮರಾಜನಗರ, ಏ.21(ಎಸ್‌ಎಸ್)– ಕೆರೆಗಳಿಗೆ ನೀರು ತುಂಬಿಸುವ ಯೋಜನೆಯಿಂದ ತಾಲೂಕಿನ 100ಕ್ಕೂ ಹೆಚ್ಚು ಗ್ರಾಮಗಳಿಗೆ ಅನುಕೂಲವಾಗುತ್ತದೆ ಎಂದು ಶಾಸಕ ಎಚ್.ಎಂ. ಗಣೇಶಪ್ರಸಾದ್ ತಿಳಿಸಿದ್ದಾರೆ.

ತಾಲೂಕಿನ ಇತಿಹಾಸದಲ್ಲಿಯೇ ಇದೊಂದು ಮಹತ್ವಪೂರ್ಣ ಕಾರ್ಯಕ್ರಮವಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೆರೆಗಳಿಗೆ ನೀರು ತುಂಬಿಸುವುದು ಸೇರಿದಂತೆ ವಿವಿಧ ಕಾಮಗಾರಿಗಳ ಶಂಕುಸ್ಥಾಪನೆ, ಉದ್ಘಾಟನೆ ನೆರವೇರಿಸಿದ್ದಾರೆ. ಇದರಿಂದ ತಾಲೂಕಿನ 100ಕ್ಕೂ ಹೆಚ್ಚು ಗ್ರಾಮಗಳ ಕುಡಿಯುವ ನೀರಿನ ಸಮಸ್ಯೆಗಳು ಪರಿಹಾರವಾಗಲಿದೆ. ರಾಜ್ಯದಲ್ಲಿಯೇ ಮೊದಲ ಬಾರಿಗೆ ತಾಲೂಕಿನ ಬೊಮ್ಮನಹಳ್ಳಿಯಲ್ಲಿ ಅಂಬೇಡ್ಕರ್ ವಸತಿ ಶಾಲೆ ನೂತನ ಕಟ್ಟಡ ಆರಂಭವಾಗಿದೆ. ಪಟ್ಟಣದ ಒಳಚರಂಡಿ ವ್ಯವಸ್ಥೆಗಾಗಿ ಸರ್ಕಾರದಿಂದ ಅನುದಾನ ಮಂಜೂರಾಗಿದೆ ಎಂದು ತಮ್ಮ ಅಧ್ಯಕ್ಷ ಭಾಷಣದಲ್ಲಿ ಹೇಳಿದರು.

ಗುಂಡ್ಲುಪೇಟೆ ತಾಲೂಕು ಕೇರಳ ಹಾಗೂ ತಮಿಳುನಾಡು ರಾಜ್ಯಗಳೊಂದಿಗೆ ಗಡಿ ಹಂಚಿಕೊಂಡಿದ್ದು, ಕಾನೂನು ಸುವ್ಯವಸ್ಥೆಗಾಗಿ ಪೊಲೀಸ್ ಸಂಚಾರಿ ಠಾಣೆ ಅತ್ಯವಶ್ಯಕವಾಗಿದೆ. ಸಾರ್ವಜನಿಕ ಆಸ್ಪತ್ರೆಯಲ್ಲಿ ಟ್ರಾಮಾ ಸೆಂಟರ್ ಆರಂಭವಾಗಿದೆ. ಮುಖ್ಯಮಂತ್ರಿಗಳು ಕ್ಷೇತ್ರದ ಅಭಿವೃದ್ದಿಗೆ ಸಾಕಷ್ಟು ಅನುದಾನ ನೀಡಿದ್ದಾರೆ. ಕ್ಷೇತ್ರಕ್ಕೆ ಇನ್ನೂ ಹೆಚ್ಚಿನ ಅನುದಾನ ತಂದು ತಾಲೂಕು ಅಭಿವೃದ್ಧಿಗೆ ಕಾಳಜಿ ವಹಿಸಲಾಗುವುದು ಎಂದು ತಿಳಿಸಿದರು.

ಸಂಸದ ಸುನೀಲ್‌ಬೋಸ್ ಮಾತನಾಡಿ, ಕೆರೆಗಳಿಗೆ ನೀರು ತುಂಬಿಸುವ ಯೋಜನೆಯಿಂದ ಈ ಭಾಗದ ರೈತರಿಗೆ ತುಂಬಾ ಅನುಕೂಲವಾಗಲಿದೆ. ಎಂದು ಹೇಳಿದರು.

ಕಾರ್ಯಕ್ರಮದ ಕೇಂದ್ರ ಬಿಂದುವಾದ ಡಿಕೆ

ಚಾಮರಾಜನಗರ, ಏ.21– ಗುಂಡ್ಲುಪೇಟೆಯ ಡಿ. ದೇವರಾಜು ಅರಸು ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದ ಮುಖ್ಯ ವೇದಿಕೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಒಟ್ಟಿಗೆ ಆಗಮಿಸುತ್ತಿದ್ದಂತೆ ಮುಂಭಾಗದಲ್ಲಿದ್ದ ಜನರು ಡಿಕೆ... ಡಿಕೆ... ಎಂದು ಘೋಷಣೆ ಕೂಗಲಾರಂಭಿಸಿದರು. ಇದರಿಂದ ಮುಖ್ಯಮಂತ್ರಿ ಸಿದ್ದ ರಾಮಯ್ಯ ಗರಂ ಆದರು. ಕೋಪದಿಂದಲೇ ಸುಮ್ಮನೇ ಕೂರುವಂತೆ ಕೈ ಸನ್ನೆ ಮಾಡುತ್ತಿದ್ದಂತೆ ಮತ್ತೊಂದು ಗುಂಪಿನ ಜನರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪರವಾಗಿ ಘೋಷಣೆ ಕೂಗಿದರು. ಇದರಿಂದ ಮುಖ್ಯಮಂತ್ರಿಗಳ ಮುಖದಲ್ಲಿ ಕೊಂಚ ಸಮಾಧಾನ ಉಂಟಾಯಿತು.

ಇಡೀ ಕಾರ್ಯಕ್ರಮದಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕೇಂದ್ರ ಬಿಂದುವಾಗಿದ್ದರು. ಆರಂಭದಿಂದ ಕಾರ್ಯಕ್ರಮದ ಕೊನೆಯವರೆಗೂ ಡಿಕೆಶಿ ಹೆಸರು ಪ್ರಸ್ತಾಪವಾದಾಗಲೆಲ್ಲ ಅಭಿಮಾನಿಗಳು ಉತ್ಸಾಹದಿಂದ ಡಿಕೆಶಿ ಪರ ಘೋಷಣೆ ಕೂಗಿದರು.

2 ಗಂಟೆ ವಿಳಂಬ; ಸಿದ್ಧರಾಮಯ್ಯ ಭಾಷಣಕ್ಕೂ ಮೊದಲೇ ಹೊರ ನಡೆದ ಜನತೆ



ಗುಂಡ್ಲುಪೇಟೆ ಪಟ್ಟಣದ ಡಿ. ದೇವರಾಜು ಅರಸು ತಾಲೂಕು ಕ್ರೀಡಾಂಗಣದಲ್ಲಿ ನಡೆದ 110 ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಹಾಗೂ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ಕಾರ್ಯಕ್ರಮದಲ್ಲಿ ತಾಲೂಕಿನ ಸುತ್ತಮುತ್ತಲ ಗ್ರಾಮಗಳಿಂದ ಸಾವಿರಾರು ಜನರು ಪಾಲ್ಗೊಂಡಿದ್ದರು.

ತಾಲೂಕಿನ ವಿವಿಧೆಡೆಯಿಂದ ಜನರು ಬಸ್, ಕಾರು, ಬೈಕ್ ಸೇರಿದಂತೆ ಹಲವು ವಾಹನಗಳಲ್ಲಿ ಬಂದಿದ್ದರು.

10 ಆಹಾರ ವಿತರಣೆ ಕೌಟರ್: ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಜನರಿಗೆ ನೀರು ಹಾಗೂ ಉಪಹಾರ ವಿತರಣೆ ಮಾಡಲು ಕ್ರೀಡಾಂಗಣದಲ್ಲಿ ಸುಮಾರು 10ಕ್ಕೂ ಹೆಚ್ಚು ಆಹಾರ ಕೌಂಟರ್‌ಗಳನ್ನು ತೆರೆಯಲಾಗಿತ್ತು.

ಕಾದು– ಕಾದು ಸುಸ್ತಾದ ಜನರು: ನಿಗದಿಯಂತೆ ಬೆಳಗ್ಗೆ 11 ಗಂಟೆಗೆ ಆರಂಭವಾಗಬೇಕಿದ್ದ ಕಾರ್ಯಕ್ರಮವು ಮಧ್ಯಾಹ್ನ 1 ಗಂಟೆ ಸುಮಾರಿಗೆ ಆರಂಭವಾಯಿತು. ಇದರಿಂದ ಕಾರ್ಯಕ್ರಮಕ್ಕೆ ಆಗಮಿಸಿದ ಜನರು ಕಾದು– ಕಾದು ಸುಸ್ತಾದರು.

ಬೇಸಿಗೆಯ ಸುಡುಬಿಸಿಲಿನಲ್ಲಿ ಜನರು ಸಿಎಂಗಾಗಿ ಕಾದು ಹೈರಾಣರಾದರು. ಮಧ್ಯಾಹ್ನ 2 ಗಂಟೆಯಾದರೂ ಕಾರ್ಯಕ್ರಮ ಮುಕ್ತಾಯ ವಾಗದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭಾಷಣ ಆರಂಭವಾಗುವ ಮೊದಲೇ ಜನರು ಹೊರ ನಡೆಯಲೂ ಆರಂಭಿಸಿದರು.

ಮಹಿಳಾ ಮೀಸಲಾತಿಗೆ ವಿರೋಧ: 'ಕೈ' ಅಸಲಿ ಮುಖ ಬಯಲಾಗಿದೆ

ಮಾಜಿ ಡಿಸಿಎಂ ಅಶ್ವತ್ಥ ನಾರಾಯಣ್ ಆಕ್ರೋಶ



ಸುದ್ದಿಗೋಷ್ಠಿಯಲ್ಲಿ ಮಾಜಿ ಉಪ ಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥ ನಾರಾಯಣ್ ಮಾತನಾಡಿದರು.

ಮಂಡ್ಯ, ಏ.21– ಮಹಿಳಾ ಮೀಸಲಾತಿಗೆ ಪ್ರತಿಪಕ್ಷಗಳಾದ ಕಾಂಗ್ರೆಸ್ ಸೇರಿದಂತೆ ಅದರ ಮಿತ್ರಕೂಟಗಳ ಬೆಂಬಲ ಇಲ್ಲದೆ ಸೋಲಾಗಿದ್ದು, ಈ ಮೂಲಕ ಕಾಂಗ್ರೆಸ್ ಪಕ್ಷದ ಅಸಲಿ ಮುಖ ಬಯಲಾಗಿದೆ ಎಂದು ಮಾಜಿ ಉಪಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥ ನಾರಾಯಣ್ ಆಕ್ರೋಶ ವ್ಯಕ್ತಪಡಿಸಿದರು.

ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಹಿಳೆಯರಿಗೆ ಮೀಸಲಾತಿ ಕೊಡಬಾರದು ಎಂಬುದು ಕಾಂಗ್ರೆಸ್ ಪಕ್ಷದ ನಿಲುವಾಗಿದೆ. ಕೇವಲ ತೋರ್ಪಡಿಕೆಗೆ ಮಾತ್ರ ಮಹಿಳೆಯರ ಪರ ಎನ್ನುತ್ತಾರೆ. ಮಹಿಳಾ ಮೀಸಲಾತಿ ಮಸೂದೆಯನ್ನು ವಿರೋಧಿಸಿದ್ದಾದರೂ ಏಕೆ ಎಂದು ಅವರು ಪ್ರಶ್ನಿಸಿದರು.

ಮಹಿಳಾ ಮೀಸಲಾತಿಗೆ ಬೆಂಬಲ ನೀಡದೆ ಏನೇನೋ ಕಾರಣ ಕೊಡುತ್ತಿದ್ದಾರೆ. ಕ್ಷೇತ್ರ ಮರು ವಿಂಗಡಣೆಯಿಂದ ದಕ್ಷಿಣ ರಾಜ್ಯಗಳಿಗೆ ಅನ್ಯಾಯವಾಗುತ್ತದೆ ಎಂದು ಆರೋಪಿಸುತ್ತಿದ್ದಾರೆ. ಕ್ಷೇತ್ರ ಮರು ವಿಂಗಡಣೆಯಾದರೆ ದಕ್ಷಿಣ ರಾಜ್ಯಗಳಿಗೆ ಹೆಚ್ಚು ಅನುಕೂಲವಾಗಲಿದೆ ಎಂದು ತಿಳಿಸಿದರು.

ಕಾಂಗ್ರೆಸ್‌ನವರು ದೇಶ ಒಡೆಯುವ ಮತ್ತು ಮಹಿಳಾ ಮೀಸಲಾತಿಗೆ ವಿರೋಧ ಮಾಡುತ್ತಿದ್ದಾರೆ ಎಂದ ಅವರು, 1971ರ ಜನಗಣತಿ ಆಧಾರದ ಮೇಲೆ 543 ಲೋಕಸಭಾ ಕ್ಷೇತ್ರಗಳಿವೆ. ಆ ಸಂದರ್ಭ ದೇಶದ ಜನಸಂಖ್ಯೆ 55 ಕೋಟಿ ಜನಸಂಖ್ಯೆ ಇತ್ತು. ಪ್ರಸ್ತುತ 140 ಕೋಟಿ ಜನಸಂಖ್ಯೆ ಇದೆ. ಹೀಗಾಗಿ ಮಹಿಳೆಯರಿಗೆ ಮೀಸಲಾತಿ ನೀಡಿ, ಕ್ಷೇತ್ರ ಮರು ವಿಂಗಡಣೆಗೆ ಪ್ರಧಾನಿ ನರೇಂದ್ರ ಮೋದಿ ಮುಂದಾದರು. ಆದರೆ, ಕಾಂಗ್ರೆಸ್‌ನವರು ಬೆಂಬಲ ನೀಡದೆ ಮಸೂದೆ ಅನುಷ್ಠಾನವಾಗದಂತೆ ತಡೆದರು ಎಂದು ಆರೋಪಿಸಿದರು.

ದಲಿತರು, ರೈತರು, ಹಿಂದುಳಿದವರ ಪರ ಕೆಲಸ ಮಾಡುತ್ತಿರುವ ಪ್ರಧಾನಿ ನರೇಂದ್ರ ಮೋದಿ ಅವರು ನೂರಾರು ಯೋಜನೆಗಳನ್ನು ಜಾರಿಗೆ ತಂದಿದ್ದಾರೆ. ಕಾಂಗ್ರೆಸ್‌ನವರ ಆರೋಪಗಳೆಲ್ಲವೂ ಆಧಾರರಹಿತ ಮತ್ತು ಕಪೋಲಕಲ್ಪಿತ ಎಂದು ಹೇಳಿದರು.

ಕಾಂಗ್ರೆಸ್ ಮತ್ತು ಅದರ ಮಿತ್ರ ಪಕ್ಷಗಳು ಒಂದು ದೇಶ ಒಂದು ಚುನಾವಣೆ, ರಾಷ್ಟ್ರೀಯ ಶಿಕ್ಷಣ ನೀತಿ, ದೇಶ ಕಟ್ಟುವ ಕೆಲಸ ಮತ್ತು ಕೋವಿಡ್ ಸೇರಿದಂತೆ ಹಲವು ಅಭಿವೃದ್ಧಿ ಯೋಜನೆಗಳಿಗೆ ವಿರೋಧ ಮಾಡುತ್ತಲೇ ಬಂದಿದ್ದಾರೆ. ಚುನಾವಣೆ ಬಂದಾಗ ಮಾತ್ರ ಇಂತಹ ಯೋಜನೆಗಳನ್ನು ಜಾರಿಗೆ ತರಲು ಮುಂದಾಗುತ್ತಾರೆ ಎಂಬ ಆರೋಪ ನಿರಾಧಾರ ಎಂದರು.

ಕಾಂಗ್ರೆಸ್ ನಾಯಕರ ಢೋಂಗಿ ರಾಜಕಾರಣ ದೇಶದ ಜನತೆಗೆ ಅರ್ಥವಾಗಿರುವುದರಿಂದಲೇ ಪಕ್ಷ ಹೀನಾಯ ಸ್ಥಿತಿಗೆ ತಲುಪಿದೆ. ರಾಷ್ಟ್ರೀಯ ಪಕ್ಷವಾಗಿದ್ದ ಕಾಂಗ್ರೆಸ್ ಇಂದು ಒಂದು ಪ್ರಾದೇಶಿಕ ಪಕ್ಷವಾಗಿದೆ. ಮುಂದಿನ ದಿನಗಳಲ್ಲಿ ಕಾಂಗ್ರೆಸ್ ಪ್ರಾದೇಶಿಕ ಪಕ್ಷವಾಗಿಯೂ ಇರಲಾರದು ಎಂದು ಭವಿಷ್ಯ ನುಡಿದರು.

ಸುದ್ದಿಗೋಷ್ಠಿಯಲ್ಲಿ ಮಾಜಿ ಸಚಿವ ಕೆ.ಸಿ.ನಾರಾಯಣಗೌಡ, ಮಹಿಳಾ ಘಟಕದ ರಾಜ್ಯ ಕಾರ್ಯದರ್ಶಿ ಲಕ್ಷ್ಮಿ ಅಶ್ವಿನ್‌ಗೌಡ, ಜಿಲ್ಲಾಧ್ಯಕ್ಷೆ ಮಂಗಳಾ, ಮುಖಂಡರಾದ ಇಂಡುವಾಳು ಸಚ್ಚಿದಾನಂದ, ಡಾ.ಸಿದ್ದರಾಮಯ್ಯ, ಅಶೋಕ್ ಜಯರಾಂ, ರೂಪಾ ಹಾಜರಿದ್ದರು.

ನಾಳೆ ಶ್ರೀರಂಗಮುಡಿ ಮಹೋತ್ಸವ



ಶ್ರೀರಂಗಪಟ್ಟಣ, ಏ.21– ಪಟ್ಟಣದ ಐತಿಹಾಸಿಕ ಶ್ರೀರಂಗನಾಥಸ್ವಾಮಿ ದೇವಾಲಯದಲ್ಲಿ ಏ.23ರಂದು ಶ್ರೀರಂಗಮುಡಿ ಮಹೋತ್ಸವ ವಿಜೃಂಭಣೆಯಿಂದ ನಡೆಯಲಿದೆ ಎಂದು ದೇವಾಲಯದ ಶ್ರೀರಂಗಮುಡಿ ಕೈಂಕರ್ಯ ಸಭಾ ಮುಖ್ಯಸ್ಥ ಅರ್ಚಕ ವಿಜಯಸಾರಥಿ ತಿಳಿಸಿದರು.

ಶ್ರೀರಂಗಮುಡಿ ಮಹೋತ್ಸವ ಅಂಗವಾಗಿ ಅಂದು ಮುಂಜಾನೆಯಿಂದಲೇ ದೇವಾಲಯದಲ್ಲಿ ಶ್ರೀರಂಗನಾಥಸ್ವಾಮಿ ಹಾಗೂ ರಂಗನಾಯಕಿ ಅಮ್ಮನವರಿಗೆ ವಿಶೇಷ ಪೂಜೆ ನೆರವೇರಿಸಲಾಗುವುದು. ಮಧ್ಯಾಹ್ನ ದೇವಾಲಯಕ್ಕೆ ಆಗಮಿಸುವ ಭಕ್ತರಿಗೆ ಪ್ರಸಾದ ವಿನಿಯೋಗ ಮಾಡಲಾಗುವುದು. ಸಂಜೆ ಪಟ್ಟಣದ ಉಪ ಖಜಾನೆಯಿಂದ ವಜ್ರ ಖಚಿತ ಚಿನ್ನದ ಕಿರೀಟ ತಂದು ರಂಗನಾಥಸ್ವಾಮಿಗೆ ಧಾರಣೆ ಮಾಡಿ ಪಲ್ಲಕ್ಕಿಯಲ್ಲಿ ಪಟ್ಟಣದ ರಾಜಬೀದಿ, ಪೂರ್ಣಯ್ಯ ಬೀದಿ ಮತ್ತು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಗುವುದು ಎಂದರು.

ಮೆರವಣಿಗೆಗೆ ಶಾಸಕ ರಮೇಶ್‌ಬಾಬು, ಜಿಲ್ಲಾಧಿಕಾರಿ ಡಾ.ಕುಮಾರ್, ದೇವಾಲಯದ ಇಓ ಸೇರಿದಂತೆ ಗಣ್ಯರು ಚಾಲನೆ ನೀಡಲಿದ್ದಾರೆ ಎಂದರು.

ರೈತರು ಕೃಷಿ ವಿವಿ ಸದುಪಯೋಗಪಡಿಸಿಕೊಳ್ಳಿ



ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಉದ್ಘಾಟಿಸಿದರು.

ಮಂಡ್ಯ, ಏ.21– ರೈತರ ಅಭಿವೃದ್ಧಿಗಾಗಿ ಮಂಡ್ಯ ಜಿಲ್ಲೆಗೆ ಕೃಷಿ ವಿಶ್ವವಿದ್ಯಾನಿಲಯ ತರಲಾಗಿದೆ ಜಿಲ್ಲೆಯ ರೈತರು ಕೃಷಿ ವಿಶ್ವವಿದ್ಯಾನಿಲಯವನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಕೃಷಿ ಇಲಾಖೆಯಿಂದ ಮಂಡ್ಯ ವಿಶ್ವವಿದ್ಯಾಲಯದ ಆವರಣದಲ್ಲಿ ಆಯೋಜಿಸಿದ್ದ ಹೈಟೆಕ್ ಹಾರ್ವೆಸ್ಟ್ ಹಬ್ ಮತ್ತು ಸೆಕೆಂಡರಿ ಕೃಷಿ ಯೋಜನೆಗಳ ರೈತ ಫಲಾನುಭವಿಗಳಿಗೆ ಯಂತ್ರೋಪಕರಣ ವಿತರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕಳೆದ 3 ವರ್ಷಗಳಿಂದ 2 ಸಾವಿರ ಕೋಟಿಗೂ ಹೆಚ್ಚು ಮೌಲ್ಯದ ಕೃಷಿ ಯಂತ್ರೋಪಕರಣಗಳನ್ನು ರಾಜ್ಯದ ರೈತರಿಗೆ ವಿತರಿಸಲಾಗಿದೆ ಎಂದರು.

ಪ.ವರ್ಗಗಳಿಗೆ 50 ಲಕ್ಷ ಮತ್ತು ಸಾಮಾನ್ಯ ವರ್ಗಗಳಿಗೆ 40 ಲಕ್ಷ ರೂ. ಸಬ್ಸಿಡಿ ದರದಲ್ಲಿ ಹೈಟೆಕ್ ಹಾರ್ವೆಸ್ಟ್ ಹಬ್ ಖರೀದಿಸಲು ಅವಕಾಶ ನೀಡಲಾಗುತ್ತಿದೆ. ದೇಶದ ಯಾವುದೇ ರಾಜ್ಯದಲ್ಲೂ ಸದರಿ ಯೋಜನೆ ಇಲ್ಲವಾಗಿದ್ದು, ಹೈಟೆಕ್ ಹಾರ್ವೆಸ್ಟ್ ಹಬ್ ಸಂಪೂರ್ಣ ಯೋಜನೆ ರಾಜ್ಯ ಸರ್ಕಾರದ್ದಾಗಿದೆ. ರಾಜ್ಯದಲ್ಲಿ 400 ಕ್ಕೂ ಹೈಟೆಕ್ ಹಾರ್ವೆಸ್ಟ್ ಹಬ್ ಯಂತ್ರಗಳನ್ನು ರೈತರಿಗೆ ನೀಡಲಾಗಿದೆ ಎಂದರು.

ವಿವಿಧ ಬೆಳೆಗಳ ಕಟಾವಿಗೆ ಹೈಟೆಕ್ ಹಾರ್ವೆಸ್ಟ್ ಹಬ್ ಯಂತ್ರಗಳು ಉಪಯುಕ್ತವಾಗಿದೆ. ಕೃಷಿ ಕೆಲಸಗಳಿಗೆ ಮಾನವ ಸಂಪನ್ಮೂಲ ಕಡಿಮೆಯಾಗಿರುವ ಈ ಕಾಲಘಟ್ಟದಲ್ಲಿ ಈ ಯಂತ್ರೋಪಕರಣಗಳನ್ನು ಬಳಸಿ ಕಡಿಮೆ ವೆಚ್ಚದಲ್ಲಿ ಹೆಚ್ಚು ಪರಿಣಾಮಕಾರಿಯಾಗಿ ಬೆಳೆಗಳನ್ನು ಕಟಾವು ಮಾಡಬಹುದಾಗಿದೆ ಹಾಗೂ ರೈತನಿಗೆ ಹಣ ಉಳಿತಾಯವಾಗುತ್ತದೆ ಎಂದು ತಿಳಿಸಿದರು.

ಕಳೆದ 3 ವರ್ಷಗಳಿಂದ ನಾನು ಕೃಷಿ ಸಚಿವನಾಗಿ ರೈತರಿಗೆ ಕೃಷಿ ತಾಂತ್ರಿಕ ತರಬೇತಿ ಹಾಗೂ ಯಂತ್ರೋಪಕರಣಗಳ ವಿತರಣೆ ಸೇರಿದಂತೆ ಹಲವಾರು ಯೋಜನೆಗಳನ್ನು ಯಶಸ್ವಿಯಾಗಿ ಜಾರಿಗೊಳಿಸಿದ್ದೇನೆ ಎಂದು ಹೇಳಿದರು.

ನಮ್ಮ ಸರ್ಕಾರ ಅಧಿಕಾರಕ್ಕೆ ಬರುವ ಮೊದಲು 12 ಲಕ್ಷಕ್ಕೂ ಹೆಚ್ಚು ರೈತರು ಬೆಳೆ ವಿಮೆ ಮಾಡಿಸಿದ್ದರು. ಆದರೆ ಇಂದು 28 ಲಕ್ಷಕ್ಕೂ ಅಧಿಕ ರೈತರು ತಮ್ಮ ಬೆಳೆಗಳಿಗೆ ವಿಮೆ ಮಾಡಿಸಿದ್ದಾರೆ. ವಿಮೆಗೆ ಸುಮಾರು 6 ಸಾವಿರ ಕೋಟಿಗೂ ಹೆಚ್ಚು ಹಣ ನೀಡಲಾಗಿದೆ ಎಂದರು.

ಶಾಸಕ ಎ.ಬಿ.ರಮೇಶ್ ಬಂಡಿಸಿದ್ದೇಗೌಡ ಮಾತನಾಡಿ, ಚಲುವರಾಯಸ್ವಾಮಿ ಅವರು ಕೃಷಿ ಸಚಿವರಾದ ನಂತರ ರಾಜ್ಯದ ರೈತರ ಆರ್ಥಿಕ ಸ್ಥಿತಿ ಹೆಚ್ಚಿಸಲು ಹಲವಾರು ಯೋಜನೆಗಳನ್ನು ಜಾರಿಗೊಳಿಸಿದ್ದಾರೆ. ಮಂಡ್ಯ ಕೃಷಿ ಪ್ರಧಾನ ಜಿಲ್ಲೆಯಾಗಿದ್ದು, ಜಿಲ್ಲೆಯ ರೈತರ ಅಭಿವೃದ್ಧಿಗಾಗಿ ಮಂಡ್ಯದಲ್ಲಿ ಕೃಷಿ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿದ್ದಾರೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಡಾ.ಕುಮಾರ, ಜಿ.ಪಂ. ಸಿಇಓ ಕೆ.ಆರ್.ನಂದಿನಿ, ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಅಶೋಕ್, ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಈಜಲು ಹೋದ ಯುವಕ ಜಲಸಮಾಧಿ



ಹಲಗೂರು, ಏ.21– ಕಾವೇರಿ ನದಿಯಲ್ಲಿ ಈಜಲು ಹೋದ ಯುವಕ ನೀರಿನಲ್ಲಿ ಮುಳುಗಿ ಸಾವನ್ನಪ್ಪಿರುವ ಘಟನೆ ಇಲ್ಲಿಗೆ ಸಮೀಪದ ಮುತ್ತತ್ತಿಯಲ್ಲಿ ಸೋಮವಾರ ನಡೆದಿದೆ.

ಬೆಂಗಳೂರಿನ ಬೊಮ್ಮನಹಳ್ಳಿ ವಾರ್ಡ್ ನಿವಾಸಿ ನಿಂಗೇಗೌಡರ ಪುತ್ರ ಎನ್.ಶ್ರೇಯಸ್ (19) ಸಾವನ್ನಪ್ಪಿದ ಯುವಕ. ಬೆಂಗಳೂರಿನ ಜಯನಗರದ ಎಸ್‌ಎಸ್‌ಆರ್‌ಎಂವಿ ಕಾಲೇಜಿನಲ್ಲಿ ಪ್ರಥಮ ಬಿಕಾಂ ವ್ಯಾಸಂಗ ಮಾಡುತ್ತಿದ್ದ ಈತ ತನ್ನ ಐವರು ಸ್ನೇಹಿತರೊಂದಿಗೆ ಸೋಮವಾರ ಬೆನಮನಹಳ್ಳಿ ಗ್ರಾಮದ ಚೇತನ್ ಅವರ ಮನೆಯ ಗೃಹ ಪ್ರವೇಶಕ್ಕೆ ಆಗಮಿಸಿದ್ದ. ಕಾರ್ಯಕ್ರಮ ಮುಗಿದ ನಂತರ ಮುತ್ತತ್ತಿಗೆ ತೆರಳಿ ಕಾವೇರಿ ನದಿಗೆ ಇಳಿದು ಈಜಲು ಹೋದಾಗ ನೀರಿನ ತೀವ್ರ ಸೆಳೆತಕ್ಕೆ ಸಿಲುಕಿ ಮುಳುಗಿ ಸಾವನ್ನಪ್ಪಿದ್ದಾನೆ ಎನ್ನಲಾಗಿದೆ. ಈ ಸಂಬಂಧ ಹಲಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮುಸಲ್ಮಾನರ ದಮನಕ್ಕೆ ಮುಂದಾಗಿರುವ ಕಾಂಗ್ರೆಸ್ ಸರಕಾರ



ಸುನ್ನಿ ಸಮನ್ವಯ ಸಮಿತಿಯ ಜಿಲ್ಲಾ ಘಟಕದ ನಾಯಕರು ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು.

ಮಡಿಕೇರಿ, ಏ.21–ಜಾತ್ಯಾತೀತ ನೆಲೆಗಟ್ಟಿನಲ್ಲಿ ಉತ್ತಮ ಸಮಾಜ ಸ್ಥಾಪಿಸಬೇಕೆನ್ನುವ ಉದ್ದೇಶದಿಂದ ರಾಜ್ಯದ ಸಮಸ್ತ ಮುಸಲ್ಮಾನರು ಒಗ್ಗಟ್ಟಿನಿಂದ ಕಾಂಗ್ರೆಸ್ಸನ್ನು ಅಧಿಕಾರಕ್ಕೆ ತಂದರೆ, ಈಗ ಅದೇ ಕಾಂಗ್ರೆಸ್ ಸರಕಾರ ಮುಸಲ್ಮಾನರ ದಮನಕ್ಕೆ ಮುಂದಾಗಿದೆ ಎಂದು ಸುನ್ನಿ ಸಮನ್ವಯ ಸಮಿತಿಯ ಜಿಲ್ಲಾ ಘಟಕ ತೀವ್ರ ಅಸಮಾಧಾನ ವ್ಯಕ್ತ ಪಡಿಸಿದೆ.

ಕಾಂಗ್ರೆಸ್ ಪಕ್ಷ ಇತ್ತೀಚಿನ ದಿನಗಳಲ್ಲಿ ಮುಸಲ್ಮಾನರನ್ನು ಕಡೆಗಣಿಸುತ್ತಿದ್ದು, ಈ ಬೆಳವಣಿಗೆ ಅತ್ಯಂತ ನೋವನ್ನುಂಟು ಮಾಡಿದೆ ಎಂದು ಬೇಸರ ವ್ಯಕ್ತಪಡಿಸಿದರು. ಕಾಂಗ್ರೆಸ್ ಪಕ್ಷ ಕರ್ನಾಟಕದ ಮುಸ್ಲಿಂ ಸಮುದಾಯ ಮತ್ತು ಅದರ ನಾಯಕರೊಂದಿಗೆ ನಡೆದುಕೊಳ್ಳುತ್ತಿರುವ ರೀತಿಯನ್ನು, ಕೊಡಗು ಜಿಲ್ಲೆಯ ಪ್ರಮುಖ ಮುಸ್ಲಿಂ ಸಂಘಟನೆಗಳಾದ ಎಸ್‌ಕೆಎಸ್ ಎಸ್‌ಎಫ್, ಎಸ್‌ಎಸ್‌ಎಫ್, ಮುಸ್ಲಿಂ ಸಂಘ ಸಂಸ್ಥೆಗಳು ಹಾಗೂ ಒಕ್ಕೂಟಗಳು ತೀವ್ರವಾಗಿ ಖಂಡಿಸುತ್ತವೆ ಎಂದು ಸುನ್ನಿ ಸಮನ್ವಯ ಸಮಿತಿಯ ಜಿಲ್ಲಾ ಮಾಧ್ಯಮ ಪ್ರತಿನಿಧಿ ಸಿ.ಎಂ.ಅಬ್ದುಲ್ ಹಮೀದ್ ಮೌಲವಿ, ಸುದ್ದಿಗೋಷ್ಠಿಯಲ್ಲಿ ಕಿಡಿಕಾರಿದರು.

ಮುಸ್ಲಿಮರು ನೀಡಿರುವ ಒಗ್ಗಟ್ಟಿನ ಬೆಂಬಲದಿಂದ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ ಮುಸ್ಲಿಮರನ್ನು ಘನತೆಯಿಂದ ನಡೆಸಿಕೊಳ್ಳುತ್ತಿಲ್ಲ. ಗೆಲುವಿನಲ್ಲಿ ನಿರ್ಣಾಯಕ ಪಾತ್ರ ವಹಿಸಿರುವ ಮುಸ್ಲಿಂ ಸಮುದಾಯಕ್ಕೆ ರಾಜಕೀಯ ನೇಮಕಾತಿಗಳಲ್ಲಿ ಹಾಗೂ ಅಧಿಕಾರ ಶಾಹಿಯ ಪ್ರಮುಖ ಹುದ್ದೆಗಳಲ್ಲೂ ಸೂಕ್ತ ಪ್ರಾತಿನಿಧ್ಯ ನೀಡುತ್ತಿಲ್ಲ. ಕಾಂಗ್ರೆಸ್ ಪಕ್ಷ ಮತ್ತೆ ಮತ್ತೆ ಮುಸ್ಲಿಂ ಸಮುದಾಯವನ್ನು ಅವಮಾನಿಸುತ್ತಿದೆ ಎಂಬ ನೋವಿನ ಭಾವನೆ ಸಮುದಾಯದಲ್ಲಿ ತೀವ್ರವಾಗುತ್ತಿದೆ ಎಂದು ಆರೋಪಿಸಿದರು.

ಕಾಂಗ್ರೆಸ್‌ನ ಈ ಪಕ್ಷಪಾತಿ ಧೋರಣೆಯನ್ನು ಜಿಲ್ಲೆಯ ಮುಸ್ಲಿಂ ಸಮುದಾಯ ಇನ್ನು ಮುಂದೆ ಸಹಿಸುವುದಿಲ್ಲ. ನಮ್ಮ ಸಮುದಾಯದ ಕೆಲ ನಾಯಕರನ್ನು ಪಕ್ಷ ವಿರೋಧಿ ಚಟುವಟಿಕೆಯ ಕಟಕಟೆಯಲ್ಲಿ ನಿಲ್ಲಿಸಿ, ಶಿಸ್ತಿನ ಪಾಠ ಹೇಳುತ್ತಿರುವ ಕಾಂಗ್ರೆಸ್ ಪಕ್ಷ, ಈ ಹಿಂದೆ ಇದೇ ರೀತಿಯ ಸಂದರ್ಭಗಳಲ್ಲಿ ಪಕ್ಷದಿಂದ ತಗೆದುಕೊಳ್ಳಲಾದ ಶಿಸ್ತು ಕ್ರಮ ಗಳೇನು ಎಂಬುದನ್ನು ಸ್ಪಷ್ಟಪಡಿಸಬೇಕು. ಇಲ್ಲದಿದ್ದಲ್ಲಿ, ಪಕ್ಷದ ಶಿಸ್ತು ನಿಯಮಗಳು ಕೇವಲ ಒಂದು ಸಮುದಾಯಕ್ಕೆ ಮಾತ್ರ ಅನ್ವಯವಾಗುತ್ತಿದೆಯೇ ಎಂಬ ಗಂಭೀರ ಪ್ರಶ್ನೆ ಉದ್ಭವಿಸುತ್ತದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸುನ್ನಿ ಸಮನ್ವಯ ಸಮಿತಿಯ ಜಿಲ್ಲಾ ಕಾರ್ಯದರ್ಶಿ ಎಂ.ವೈ.ಅಬ್ದುಲ್ ಹಫೀಳ್ ಸಹದಿ ಮಾತನಾಡಿ, ಮುಂದಿನ ದಿನಗಳಲ್ಲಿ ಕಾಂಗ್ರೆಸ್ ಪಕ್ಷ ತನ್ನ ತಪ್ಪನ್ನು ತಿದ್ದಿಕೊಳ್ಳದಿದ್ದಲ್ಲಿ ಮುಸಲ್ಮಾನರು ಪರ್ಯಾಯ ವ್ಯವಸ್ಥೆಯನ್ನು ಕಂಡುಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಸಮಿತಿಯ ಕಾರ್ಯದರ್ಶಿ ವೈ.ಎಂ.ಉಮ್ಮರ್ ಫೈಝಿ, ಸದಸ್ಯರುಗಳಾದ ಎನ್.ಎನ್.ಇಕ್ಬಾಲ್ ಮೌಲವಿ, ಅಬ್ದುಲ್ ಹಮೀದ್ ಮದನಿ ಹಾಗೂ ಮಡಿಕೇರಿಯ ಮಕ್ಕಾ ಮಸೀದಿಯ ಮೌಲಾನಾ ಅಬ್ದುಲ್ ಹಕೀಂ ಉಪಸ್ಥಿತರಿದ್ದರು.

ಮುಳ್ಳುಸೋಗೆ : ಅಪ್ರಾಪ್ತ ಬಾಲಕಿ ನಿಶ್ಚಿತಾರ್ಥ ಮೊಟಕುಗೊಳಿಸಿದ ಅಧಿಕಾರಿಗಳು

ಕುಶಾಲನಗರ, ಏ.21–ಪುರಸಭೆ ವ್ಯಾಪ್ತಿಯ ಮುಳ್ಳುಸೋಗೆ ಗ್ರಾಮದಲ್ಲಿ ಅಪ್ರಾಪ್ತ ಬಾಲಕಿಗೆ ನಡೆಸಲು ಉದ್ದೇಶಿಸಿದ್ದ ನಿಶ್ಚಿತಾರ್ಥ ಕಾರ್ಯಕ್ರಮವನ್ನು ಅಧಿಕಾರಿಗಳು ಮೊಟಕುಗೊಳಿಸಿದ ಪ್ರಸಂಗ ಮಂಗಳವಾರ ನಡೆದಿದೆ. ಎಸ್ಸೆಸ್ಸೆಲ್ಸಿ ಉತ್ತೀರ್ಣರಾಗಿರುವ 16 ವರ್ಷ ಪ್ರಾಯದ ಅಪ್ರಾಪ್ತೆಗೆ ಪಿರಿಯಾಪಟ್ಟಣ ಯುವಕನೊಂದಿಗೆ ನಿಶ್ಚಿತಾರ್ಥ ಏರ್ಪಡಿಸಲಾಗಿತ್ತು. ಸ್ಥಳೀಯರ ಮಾಹಿತಿ ಮೇರೆಗೆ ಸ್ಥಳಕ್ಕೆ ಧಾವಿಸಿದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ತಾಲೂಕು ಅಧಿಕಾರಿ ಶ್ರೀದೇವಿ, ಜಿಲ್ಲಾ ಮಕ್ಕಳ ಸಹಾಯವಾಣಿಯ ಎ.ಎಸ್‌ಯೋಗೇಶ್ ಟೌನ್ ಪೊಲೀಸ್ ಠಾಣೆ ಸಿಬ್ಬಂದಿಗಳ ಸಮ್ಮುಖದಲ್ಲಿ ಕಾರ್ಯಕ್ರಮ ಮೊಟಕುಗೊಳಿಸಿ ಪೋಷಕರಿಗೆ ತಿಳುವಳಿಕೆ ನೀಡಿ ಮಕ್ಕಳ ಕಲ್ಯಾಣ ಸಮಿತಿಗೆ ಮುಂದಿನ ಕ್ರಮಕ್ಕೆ ಹಸ್ತಾಂತರಿಸಿದ್ದಾರೆ.

ಪ್ರಸ್ತುತ ಆಡಳಿತ ನಡೆಸುವವರು ನುಡಿದಂತೆ ನಡೆಯುತ್ತಿಲ್ಲ

ಬಸವ ಜಯಂತಿಯಲ್ಲಿ ಮಹಾಂತ ಸ್ವಾಮೀಜಿ ಬೇಸರ



ಮಡಿಕೇರಿಯ ಗಾಂಧಿ ಭವನದಲ್ಲಿ ನಡೆದ ಶ್ರೀ ಜಗಜ್ಯೋತಿ ಬಸವೇಶ್ವರ ಜಯಂತಿಯನ್ನು ಶ್ರೀ ಮಹಾಂತ ಸ್ವಾಮೀಜಿ ಉದ್ಘಾಟಿಸಿದರು.

ಮಡಿಕೇರಿ, ಏ.21– ಪ್ರಸ್ತುತ ದಿನಮಾನದಲ್ಲಿ ನುಡಿದಂತೆ ನಡೆಯುವವರು ಕಡಿಮೆ. ಆಡಳಿತ ನಡೆಸುವವರು ಕೂಡ ನುಡಿದಂತೆ ನಡೆಯುತ್ತಿಲ್ಲ ಎಂದು ಕೊಡ್ಲಿಪೇಟೆ ಕಲ್ಲು ಮಠದ ಶ್ರೀ ಮಹಾಂತ ಸ್ವಾಮೀಜಿ ಬೇಸರ ವ್ಯಕ್ತಪಡಿಸಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ನಗರದ ಗಾಂಧಿ ಭವನದಲ್ಲಿ ನಡೆದ ಶ್ರೀ ಜಗಜ್ಯೋತಿ ಬಸವೇಶ್ವರ ಜಯಂತಿಯಲ್ಲಿ ಮಾತನಾಡಿದ ಅವರು, ಚುನಾವಣಾ ಸಮಯದಲ್ಲಿ ರಾಜಕಾರಣಿಗಳು ನಿಡಿದ ವಚನವನ್ನು ಆಡಳಿತ ಗದ್ದುಗೆ ಏರಿದ ನಂತರ ಅದನ್ನು ಈಡೇರಿಸುವುದೇ ಇಲ್ಲ ಎಂದು ವಿಷಾದಿಸಿದರು.

ಬಸವ ಜಯಂತಿಯಂದು ಕಾಯಕ ಮಾಡಬೇಕು. ಅದನ್ನು ಬಿಟ್ಟು ರಜೆ ನೀಡಿದ್ದಾರೆ. ಕಾಯಕ ಮಾಡಿ ಬಸವಣ್ಣ ಅವರಿಗೆ ಗೌರವ ಸಲ್ಲಿಸಬೇಕು. ಅದನ್ನು ಬಿಟ್ಟು ರಜೆ ನೀಡುವುದು ಸರಿಯಲ್ಲ ಎಂದು ಪ್ರತಿಪಾದಿಸಿದರು. ಪ್ರತಿಯೊಬ್ಬರೂ ದುಡಿದು ಊಟ ಮಾಡಬೇಕು, ಮತ್ತೊಬ್ಬರ ಆಶ್ರಯ ಪಡಬಾರದು. 25–30 ವರ್ಷದ ನಂತರ ಅವರವರ ಬದುಕು ಕಟ್ಟಿಕೊಳ್ಳಲು ಪ್ರಯತ್ನಿಸಬೇಕು ಎಂದರು.


ಹೆಚ್ಚುವರಿ ಜಿಲ್ಲಾಧಿಕಾರಿ ಆರ್.ಐಶ್ವರ್ಯ ಮಾತನಾಡಿ, ಬಸವಣ್ಣ ಅವರ ಚಿಂತನೆ ಮತ್ತು ಆದರ್ಶಗಳು ಸಾರ್ವಕಾಲಿಕವಾಗಿದೆ ಜಗಜ್ಯೋತಿ ಬಸವೇಶ್ವರರು ಇಡೀ ವಿಶ್ವಕ್ಕೆ ಸಾಂಸ್ಕೃತಿಕ ನಾಯಕರಾಗಿದ್ದು, ಸಾವಿರ ವರ್ಷಗಳ ಹಿಂದೆಯೇ ಸಮಾಜದಲ್ಲಿ ಸಮಾನತೆ ತರಲು ಶ್ರಮಿಸಿದ ಕಾಯಕಯೋಗಿ ಎಂದು ಬಣ್ಣಿಸಿದರು. ಬಸವಣ್ಣ ಅವರು ಅನುಭವ ಮಂಟಪದ ಮೂಲಕ ಹೆಣ್ಣು ಮಕ್ಕಳೂ ಸೇರಿದಂತೆ ಎಲ್ಲರಿಗೂ ಸಮಾನತೆ, ಸರಳ ಬದುಕು ನಡೆಸುವುದನ್ನು ಹೇಳಿದ್ದಾರೆ. ತೋರಿಕೆಯ ಭಕ್ತಿಗಿಂತ, ಮನ ಮೆಚ್ಚುವ ರೀತಿ ನಡೆದುಕೊಳ್ಳಬೇಕು. ಸಮರ್ಪಣಾ ಭಾವ ಇರಬೇಕು ಎಂಬುದನ್ನು ಬಸವೇಶ್ವರರು ಸಾರಿದ್ದಾರೆ ಎಂದು ಅವರು ಹೇಳಿದರು.

ಕುಲಪತಿ ಪ್ರೊ. ಅಶೋಕ್ ಸಂಗಪ್ಪ ಆಲೂರ ಮಾತನಾಡಿ, ಸಾಂಸ್ಕೃತಿಕ ನಾಯಕ ಬಸವೇಶ್ವರರು ಕಾಯಕ ಮತ್ತು ದಾಸೋಹದ ಮೂಲಕ ಸಮಾಜದಲ್ಲಿ ಸಮ ಸಮಾಜ ನಿರ್ಮಾಣಕ್ಕೆ ಶ್ರಮಿಸಿದ್ದಾರೆ ಎಂದರು. ಬಸವ ಧರ್ಮದ ಚಿಂತನೆಗಳು, ಶರಣರ ಪರಂಪರೆಯನ್ನು ಪ್ರತಿಯೊಬ್ಬರೂ ತಿಳಿದುಕೊಳ್ಳುವಂತಾಗಬೇಕು. ಬಸವಣ್ಣ ಅವರು ಸಮಾಜ ದಲ್ಲಿ ಪರಿವರ್ತನೆಗೆ ಶ್ರಮಿಸಿದ್ದಾರೆ. ನೈಜ ಸಮಾಜ ನಿರ್ಮಾಣ ಬಸವಣ್ಣ ಅವರ ಆಶಯವಾಗಿತ್ತು ಎಂದು ಹೇಳಿದರು.

ಸಭಾ ಕಾರ್ಯಕ್ರಮಕ್ಕೂ ಮೊದಲು ನಗರದ ಕೋಟೆ ಆವರಣದಿಂದ ಗಾಂಧಿ ಭವನದವರೆಗೆ ಮೆರವಣಿಗೆ ನಡೆಯಿತು. ಜಗಜ್ಯೋತಿ ಬಸವೇಶ್ವರರ ಭಾವಚಿತ್ರಕ್ಕೆ ಉಪ ವಿಭಾಗಾಧಿಕಾರಿ ನಿತಿನ್ ಚಕ್ಕಿ ಅವರು ಪುಷ್ಪಾರ್ಚನೆ ಮಾಡಿ ಚಾಲನೆ ನೀಡಿದರು.

ನಗರಸಭೆ ಅಧ್ಯಕ್ಷೆ ಪಿ.ಕಲಾವತಿ, ತಹಸೀಲ್ದಾರ್ ಶ್ರೀಧರ, ಮಹಾಸಭಾ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ಟಿ.ಎಸ್.ಸಾಂಬಶಿವಯ್ಯ, ತಾಲೂಕು ಘಟಕದ ಅಧ್ಯಕ್ಷ ರುದ್ರಪ್ರಸನ್ನ, ಮಧುಸೂದನ, ಶರಣ ಸಾಹಿತ್ಯ ಪರಿಷತ್ ಜಿಲ್ಲಾ ಘಟಕದ ಅಧ್ಯಕ್ಷ ಕೆ.ಎಸ್. ಮೂರ್ತಿ, ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾ ಘಟಕದ ಮಾಜಿ ಅಧ್ಯಕ್ಷ ಲೋಕೇಶ್ ಸಾಗರ್, ಡಾ.ರವಿಕಿರಣ, ಡಾ.ರವಿಶಂಕರ, ವೆಂಕಟೇಶ, ಭಾಸ್ಕರ ಹಾಗೂ ಮತ್ತಿತರರು ಹಾಜರಿದ್ದರು.

ಗ್ರಾ.ಪ. ಮಾಜಿ ಸದಸ್ಯ ಎಂ. ಎಂ. ನರೇಂದ್ರ ನಿಧನ



ನಾಪೋಕ್ಲು, ಏ.21 (ದುಗ್ಗಳ)–ಇಲ್ಲಿನ ಶ್ರೀ ರಾಘವೇಂದ್ರ ಮೆಡಿಕಲ್ಸ್ ಮಾಲೀಕರಾದ ಎಂ. ಎಂ. ನರೇಂದ್ರ (69) ಸೋಮವಾರ ಹೃದಯಾಘಾತದಿಂದ ನಿಧನರಾದರು.

ಮೃತರು ಪತ್ನಿ , ಓರ್ವ ಪುತ್ರ ಹಾಗೂ ಪುತ್ರಿಯನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಕೊಳಕೇರಿ ಗ್ರಾಮದ ಮೂಟೇರಿ ಅವರ ತೋಟದಲ್ಲಿ ಮಂಗಳವಾರ ನೆರವೇರಿತು.

ನರೇಂದ್ರ ನಾಪೋಕ್ಲು ಗ್ರಾ. ಪಂ. ಮಾಜಿ ಸದಸ್ಯರಾಗಿ ಉತ್ತಮ ಕೃಷಿಕನಾಗಿ ಹಾಗೂ ಹಿಂದೂಪರ ಸಂಘಟನೆಗಳ ಮುಂಚೂಣಿಯಲ್ಲಿ ಕಾರ್ಯನಿರ್ವಹಿಸಿರುವ ಇವರು ವಿವಿಧ ಸಂಘ ಸಂಸ್ಥೆಗಳಲ್ಲಿ, ದುಡಿದಿದ್ದರು. ಕೊಡಗು ಜಿಲ್ಲಾ ಔಷಧಿ ವ್ಯಾಪಾರಿ ಸಂಘದ ಮಾಜಿ ನಿರ್ದೇಶಕರಾಗಿದ್ದರು. ಅವರ ಸೇವೆಯನ್ನು ಗುರುತಿಸಿ ಜಿಲ್ಲಾ ಸಂಘದ ವತಿಯಿಂದ ಇತ್ತೀಚೆಗೆ ಸನ್ಮಾನಿಸಿತ್ತು. ಮೃತರಿಗೆ ಗೌರವ ಸೂಚಿಸುವ ಸಲುವಾಗಿ ಪಂಚಾಯತಿ ಹಾಗೂ ವರ್ತಕರ ಸಂಘದ ಸೂಚನೆಯಂತೆ ಗಂಟೆ ಕಾಲ ಪಟ್ಟಣದ ವರ್ತಕರು ತಮ್ಮ ಅಂಗಡಿ ಮುಂಗಟ್ಟುಗಳನ್ನು ಮುಚ್ಚಿ ಗೌರವ ಸಲ್ಲಿಸಿದರು.

ನರೇಂದ್ರ ಅವರ ಅಗಲಿಕೆಗೆ ಜಿಲ್ಲಾ ಔಷಧಿ ವ್ಯಾಪಾರಿಗಳ ಸಂಘದ ನಿರ್ದೇಶಕ ಎಂ ಎ ಮನ್ಸೂರ್ ಆಲಿ ಹಾಗೂ ಸ್ಥಳೀಯ ವರ್ತಕರ ಸಂಘದ ಪ್ರಮುಖ ಮಾಚೇಟಿರ ಕುಸು ಕುಶಾಲಪ್ಪ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಮೈಸೂರು ಮಿತ್ರ
ಬುಧವಾರ 22 ಏಪ್ರಿಲ್ 2026

ಮೈಮುಲ್‌ನಲ್ಲಿ ಬಸವಣ್ಣನವರ ಜಯಂತಿ ಆಚರಣೆ



ಮೈಸೂರು ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟದ ವತಿಯಿಂದ ಬಸವ ಜಯಂತಿ ಆಚರಿಸಲಾಯಿತು.

ಮೈಸೂರು, ಏ.21– ಮೈಸೂರು ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ ನಿಯಮಿತ (ಮೈಮುಲ್)ದ ವತಿಯಿಂದ ಆಲನಹಳ್ಳಿಯ ಒಕ್ಕೂಟದ ಸಭಾಂಗಣದಲ್ಲಿ ಬಸವ ಜಯಂತಿ ಆಚರಿಸಲಾಯಿತು.

ಈ ವೇಳೆ ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದ ಮೈಮುಲ್ ಅಧ್ಯಕ್ಷ ಕೆ.ಈರೇಗೌಡ ಮಾತನಾಡಿ, ಶಿವನ ರೂಪ ಬಸವಣ್ಣನವರು 12ನೇ ಶತಮಾನದಲ್ಲಿ ಸಾಮಾಜಿಕ ಕ್ರಾಂತಿ ಮಾಡಿದರು ಎಂದು ಬಣ್ಣಿಸಿದರು.

ಕುಲಕಸುಬಿನ ಮೇಲೆ ಜಾತಿ–ವರ್ಗವಾಗಿ ಗುರುತಿಸಿರುವುದು ಸಮಾಜಕ್ಕೆ ಕಂಟಕವಾಗುತ್ತದೆ ಎಂಬ ಅರಿವಿದ್ದ ಬಸವಣ್ಣನವರು, ಇಚ್ಛೆಯುಳ್ಳ ಎಲ್ಲಾ ಸಮುದಾಯದವರಿಗೂ ಲಿಂಗಧಾರಣೆ ಮಾಡುವ ಮೂಲಕ ಸಮಾನತೆಗೆ ನಾಂದಿ ಹಾಡಿದರು. ಅನುಭವ ಮಂಟಪ ಸ್ಥಾಪಿಸಿ, ಅದರಲ್ಲಿ ಎಲ್ಲಾ ವರ್ಗದವರಿಗೂ ಸಮಾನ ಅವಕಾಶ ನೀಡಿ, 12ನೇ ಶತಮಾನದಲ್ಲೇ ಪ್ರಜಾಪ್ರಭುತ್ವದ ಬೀಜಾಂಕುರ ಮಾಡಿದರು ಎಂದು ಬಣ್ಣಿಸಿದರು.

ಮೈಮುಲ್ ನಿರ್ದೇಶಕ ಓಂಪ್ರಕಾಶ್ ಮಾತನಾಡಿ, 12ನೇ ಶತಮಾನದಲ್ಲೇ ಜಾತಿ ತಾರತಮ್ಯದ ವಿರುದ್ಧ ಬಸವಣ್ಣ ನವರು ಹೋರಾಟ ಮಾಡಿದ್ದರೂ ಇಂದಿಗೂ ಜಾತಿ ಕುಲ ಅನ್ನು ಜೀವಂತವಾಗಿ ಇರಿಸಿರುವ ಬಗ್ಗೆ ಚರ್ಚೆಯಾಗಬೇಕು. ಬಸವಣ್ಣ ನವರ ವಚನಗಳು ಜನರಿಗೆ ಸುಲಭವಾಗಿ ಅರ್ಥವಾಗುತ್ತವೆ. ಹಾಗಾಗಿ ಎಲ್ಲರೂ ಬಸವಣ್ಣನವರ ವಚನಗಳಲ್ಲಿರುವ ಆಶಯವನ್ನು ಅರ್ಥ ಮಾಡಿಕೊಂಡು, ಅವರು ತೋರಿರುವ ಹಾದಿಯಲ್ಲಿ ಮುನ್ನಡೆಯಬೇಕಿದೆ ಎಂದರು.

ಮೈಮುಲ್ ನಿರ್ದೇಶಕ ಬಿ.ಎನ್. ಸದಾನಂದ ಮಾತನಾಡಿ, ಬಸವಣ್ಣ ವಚನಕ್ರಾಂತಿ ಮೂಲಕ ಸಮಾನತೆ, ಸಮ ಸಮಾಜ ಹಾಗೂ ಮಹಿಳೆಯರಿಗೂ ಸಮಾನ ಅವಕಾಶವನ್ನು ಪ್ರತಿಪಾದಿಸಿದರು. 12ನೇ ಶತಮಾನದಲ್ಲೇ ಮಹಿಳೆಯರಿಗೆ ವಿಶೇಷ ಸ್ಥಾನಮಾನ ಕಲ್ಪಿಸಿದ್ದರು. ಆದರೆ ಬಸವ ತತ್ವ, ಸಂದೇಶ, ಆದರ್ಶಗಳನ್ನು ಪಾಲಿಸುತ್ತಿದ್ದೇವೆಯೇ ಎಂದು ಆತ್ಮ ವಿಮರ್ಶೆ ಮಾಡಿಕೊಳ್ಳಬೇಕಿದೆ. ಇಂದಿಗೂ ಜಾತಿ ಮೌಢ್ಯ ನಮ್ಮನ್ನು ಬಿಟ್ಟು ಹೋಗಿಲ್ಲ. ಜಾತೀಯತೆ ತೊಲಗಬೇಕೆಂಬುದೇ ಎಲ್ಲಾ ಸಮಾಜ ಸುಧಾರಕರ ಪ್ರತಿಪಾದನೆ ಆಗಿದೆ. ಪ್ರಸ್ತುತ 21ನೇ ಶತಮಾನದಲ್ಲಿದ್ದರೂ ಎಲ್ಲರೂ ಒಂದೇ ಎಂಬ ಭಾವನೆ ಮೂಡಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಮೈಮುಲ್ ವ್ಯವಸ್ಥಾಪಕ ನಿರ್ದೇಶಕ ಕೆ.ಎನ್.ಸುರೇಶ್ ನಾಯ್ಕ್, ಮಾರುಕಟ್ಟೆ ವಿಭಾಗದ ವ್ಯವಸ್ಥಾಪಕ ಹೆಚ್.ಕೆ.ಜಯಶಂಕರ್ ಸೇರಿದಂತೆ ಒಕ್ಕೂಟದ ಎಲ್ಲಾ ವಿಭಾಗಗಳ ವ್ಯವಸ್ಥಾಪಕರು, ಉಪ ವ್ಯವಸ್ಥಾಪಕರು, ಮೈಸೂರು ಜಿಲ್ಲಾ ಹಾಲು ಒಕ್ಕೂಟದ ನೌಕರ ಸಂಘದ ಪದಾಧಿಕಾರಿಗಳು ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

> ಒಕ್ಕೂಟದಲ್ಲಿ ಸಾಂಸ್ಕೃತಿಕ ನಾಯಕ ಬಸವೇಶ್ವರ ಜಯಂತಿ ಆಚರಿಸುತ್ತಿದ್ದೇವೆ. ಬಸವಣ್ಣನವರು ಮಾನವ ಧರ್ಮದಲ್ಲಿ ದಯೆಯೇ ದೊಡ್ಡದು ಎಂಬ ಸಂದೇಶ ಸಾರಿದರು. ಭಾರತದ ಮಾರ್ಟಿನ್ ಲೂಥರ್ ಬಸವಣ್ಣನವರನ್ನು ನಾವು ಅನುಸರಿಸಬೇಕು.
> -ಕೆ.ಎನ್.ಸುರೇಶ್ ನಾಯ್ಕ್,
> ವ್ಯವಸ್ಥಾಪಕ ನಿರ್ದೇಶಕ, ಮೈಮುಲ್

> ಮಾನವೀಯತೆ, ಸಮಾನತೆ ಜೊತೆಗೆ ಬಸವಣ್ಣನವರು ಶಿಕ್ಷಣದ ಮಹತ್ವ ಸಾರಿದ್ದಾರೆ. ಅದರಲ್ಲೂ ಮಹಿಳಾ ಶಿಕ್ಷಣಕ್ಕೆ ಆದ್ಯತೆ ನೀಡುವಂತೆ ತಿಳಿಹೇಳಿದ್ದಾರೆ. ಅವರ ವಚನಗಳ ಸಾರ ಸಾರ್ವಕಾಲಿಕ. ನಾವೆಲ್ಲರೂ ಕಾಯಕನಿಷ್ಠೆಯಿಂದ ಬಸವಣ್ಣನವರಿಗೆ ನಿಜವಾದ ಗೌರವ ಸಲ್ಲಿಸೋಣ.
> -ಹೆಚ್.ಕೆ.ಜಯಶಂಕರ,
> ಮಾರುಕಟ್ಟೆ ವ್ಯವಸ್ಥಾಪಕ, ಮೈಮುಲ್

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಯೂತ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಲವ್ ಮಾಕ್ಟೇಲ್–3 (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಭೂತ್ ಬಂಗ್ಲಾ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಲವ್ ಮಾಕ್‌ಟೇಲ್–3 (ಕ)	4 ಪ್ರದರ್ಶನಗಳು
ಗಾಯಿತ್ರಿ	
ಧುರಂದರ್–2 (ಕ)	3 ಪ್ರದರ್ಶನಗಳು
ರಾಜಕಮಲ್	
ಮಿ. ಎಕ್ಸ್ (ತ)	4 ಪ್ರದರ್ಶನಗಳು
ಸಂಗಂ	
ಟೆರರ್ (ಕ)	4 ಪ್ರದರ್ಶನಗಳು
ಲಿಡೋ	
ಬೆಂಗಳೂರು ಇನ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಕೆಂಡದ ಸೆರಗು (ಕ) + ಕ್ಯಾಲೆಂಡರ್ (ಕ)	2+2 ಪ್ರದರ್ಶನಗಳು

ಆರಂಭಿಕ ರೋಗನಿರ್ಣಯದಿಂದ ಪಾರ್ಕಿನ್ಸನ್ ವಾಸಿ ಮಾಡಬಹುದು



ಮೈಸೂರು, ಏ. 21– ಆರಂಭಿಕ ರೋಗನಿರ್ಣಯದಿಂದ ಪಾರ್ಕಿನ್ಸನ್ ಕಾಯಿಲೆಯನ್ನು ಸುಧಾರಿಸಬಹುದು ಎಂದು ಜೆಎಸ್ಎಸ್ ಆಸ್ಪತ್ರೆಯ ನಿರ್ದೇಶಕ ಡಾ.ಸಿ.ಪಿ.ಮಧು ತಿಳಿಸಿದರು.

ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಆಯೋಜಿಸಿದ್ದ ವಿಶ್ವ ಪಾರ್ಕಿನ್ಸನ್ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಈ ದಿನವು ಪಾರ್ಕಿನ್ಸನ್ ಕಾಯಿಲೆಯ ಬಗ್ಗೆ ಜಾಗೃತಿ ಮೂಡಿಸಲು, ಆರಂಭಿಕ ರೋಗನಿರ್ಣಯವನ್ನು ಉತ್ತೇಜಿಸಲು ಮತ್ತು ರೋಗಿಗಳಿಗೆ ಉತ್ತಮ ಆರೈಕೆ ವ್ಯವಸ್ಥೆಯನ್ನು ಒದಗಿಸಲು ಮೀಸಲಾಗಿದೆ. ನರವೈಜ್ಞಾನಿಕ ಕಾಯಿಲೆಯ ರೋಗಿಗಳ ಜೀವನದ ಗುಣಮಟ್ಟವನ್ನು ಸುಧಾರಿಸುವಲ್ಲಿ ಜೆಎಸ್‌ಎಸ್ ಆಸ್ಪತ್ರೆಯು ಪ್ರಮುಖವಾಗಿದ್ದು ತಜ್ಞ ವೈದ್ಯರ ತಂಡ ಮತ್ತು ಗುಣಮಟ್ಟದ ಚಿಕಿತ್ಸೆಯನ್ನು ನೀಡುವಲ್ಲಿ ಮಂಚೂಣಿಯಲ್ಲಿದೆ ಎಂದರು.

ನ್ಯೂರಾಲಜಿ ವಿಭಾಗದ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥ ಡಾ. ಎಸ್. ಹರ್ಷ ಮಾತನಾಡಿ, ಪಾರ್ಕಿನ್ಸನ್ ಕಾಯಿಲೆಯು ನರಮಂಡಲದ ಚಲನೆಯ ಅಸ್ವಸ್ಥತೆಯಾಗಿದ್ದು, ಇದು ಕಾಲಾನಂತರದಲ್ಲಿ ತೊಂದರೆ ನೀಡುತ್ತದೆ. ನರಮಂಡಲವು ಚಲನೆ ಸೇರಿದಂತೆ ದೇಹದ ಹಲವು ಭಾಗಗಳನ್ನು ನಿಯಂತ್ರಿಸುವ ನರ ಕೋಶಗಳ ಜಾಲವಾಗಿದೆ. ಪಾರ್ಕಿನ್ಸನ್ ಲಕ್ಷಣಗಳು ನಿಧಾನವಾಗಿ ಪ್ರಾರಂಭವಾಗುತ್ತವೆ ಮೊದಲ ಲಕ್ಷಣವೆಂದರೆ ಕೈ, ಕಾಲು ಅಥವಾ ದವಡೆಯಲ್ಲಿ ನಡುಕ ಉಂಟಾಗುವುದು. ನಂತರ ಅಸ್ವಸ್ಥತೆ, ಬಿಗಿತ, ಚಲನೆ ನಿಧಾನವಾಗುವುದು ಮತ್ತು ಸಮತೋಲನದ ತೊಂದರೆಗೆ ಕಾರಣವಾಗಬಹುದು, ಇದು ಬೀಳುವ ಅಪಾಯವನ್ನು ಹೆಚ್ಚಿಸುತ್ತದೆ, ಹಾಗಾಗಿ ಪ್ರಾರಂಭದಲ್ಲೇ ಲಕ್ಷಣಗಳನ್ನು ಪತ್ತೆಹಚ್ಚಿ ಚಿಕಿತ್ಸೆ ನೀಡಿದರೆ ಹೆಚ್ಚಿನ ಅಪಾಯವನ್ನು ನಿಯಂತ್ರಿಸಬಹುದು ಎಂದರು.

ನ್ಯೂರಾಲಜಿ ವಿಭಾಗದ ಪ್ರಾಧ್ಯಾಪಕ ಡಾ.ನೇಮಿಚಂದ್ರ ಅವರು ಪಾರ್ಕಿನ್ಸನ್ ಕಾಯಿಲೆಯ ಲಕ್ಷಣಗಳ ಕುರಿತು ಮಾತನಾಡಿದರು.

ಸಹಾಯಕ ಪ್ರಾಧ್ಯಾಪಕರಾದ ಡಾ. ಶಸ್ತ್ರಾರ ಪಿ. ಸಾಮಾನ್ಯ ಚಿಕಿತ್ಸಾ ಆಯ್ಕೆಗಳು ಮತ್ತು ರೋಗಿಯ ಜೀವನದ ಗುಣಮಟ್ಟವನ್ನು ಹೇಗೆ ಸುಧಾರಿಸಬಹುದು ಎಂಬುದರ ಕುರಿತು ಚರ್ಚಿಸಿದರು.

ರಾಜಕಾರಣದಲ್ಲಿ ಹೊಂದಾಣಿಕೆ ಅನಿವಾರ್ಯ

ಸಿಎಂ ಅಸಹಾಯಕರಾಗಿದ್ದಾರೆಂಬ ರಾಜಣ್ಣ ಹೇಳಿಕೆಗೆ ಸಚಿವ ಸತೀಶ್ ಜಾರಕಿಹೊಳಿ ಪ್ರತಿಕ್ರಿಯೆ

ಮೈಸೂರು, ಏ.21– ರಾಜಕಾರಣದಲ್ಲಿ ಹೊಂದಾಣಿಕೆ ಅನಿವಾರ್ಯ ಎನ್ನುವ ಮೂಲಕ ಲೋಕೋಪಯೋಗಿ ಸಚಿವ ಸತೀಶ್



ಜಾರಕಿಹೊಳಿ, ಮುಖ್ಯಮಂತ್ರಿ ಸಿದ್ದರಾಮಯ್ಯರ ಕುರಿತಾದ ಮಾಜಿ ಸಚಿವ ಕೆ.ಎನ್.ರಾಜಣ್ಣ ಅಭಿಪ್ರಾಯಕ್ಕೆ ಧ್ವನಿಗೂಡಿಸಿದ್ದಾರೆ.

ಜಿಲ್ಲೆಯ ಪಿರಿಯಾಪಟ್ಟಣ ತಾಲೂಕು ಕ್ರೀಡಾಂಗಣದ ಹೆಲಿಪ್ಯಾಡ್‌ನಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಇಂತಹ ಅಸಹಾಯಕತೆಯನ್ನು ನಿರೀಕ್ಷಿಸಿರಲಿಲ್ಲ ಎಂಬ ಕೆ.ಎನ್.ರಾಜಣ್ಣನವರ ಹೇಳಿಕೆಗೆ ಹೀಗೆ ಪ್ರತಿಕ್ರಿಯಿಸಿದರು.

ರಾಜಣ್ಣನವರದ್ದು ವೈಯಕ್ತಿಕ ಅಭಿಪ್ರಾಯ. ಆದರೆ, ಮುಖ್ಯಮಂತ್ರಿ ಸಿದ್ದರಾಮಯ್ಯನವರು ಹಿಂದಿನಷ್ಟೇ ಕಠಿಣವಾಗಿದ್ದಾರೆ. ರಾಜಕಾರಣದಲ್ಲಿ ಹೊಂದಾಣಿಕೆ ಅನಿವಾರ್ಯ. ಎಲ್ಲಾ ಸಮಯದಲ್ಲೂ ಒಂದೇ ರೀತಿ ಬಿಗಿಯಾದ ರಾಜಕಾರಣ ಸಾಧ್ಯವಿಲ್ಲ ಎಂದರು.

ಮೊದಲು ಫಲಿತಾಂಶ ಬರಲಿ: ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆಯಲ್ಲಿ ಪಕ್ಷ ವಿರೋಧಿ ಚಟುವಟಿಕೆ ನಡೆದಿದೆಯೋ, ಇಲ್ಲವೋ ಗೊತ್ತಿಲ್ಲ. ಈ ಬಗ್ಗೆ ಫಲಿತಾಂಶದ ಬಳಿಕ ಚರ್ಚಿಸುತ್ತೇವೆ. ಅಷ್ಟರಲ್ಲಿ ಜಬ್ಬಾರ್ ಸೇರಿದಂತೆ ಕೇವಲ ಅಲ್ಪಸಂಖ್ಯಾತ ನಾಯಕರ ಮೇಲಿನ ಕ್ರಮವು ಮುಸ್ಲಿಂ ಮತಗಳ ಮೇಲೆ ಖಂಡಿತ ಪರಿಣಾಮ ಬೀರುತ್ತದೆ. ಈ ಕಾರಣಕ್ಕೆ ನಾವೆಲ್ಲರೂ ಮಧ್ಯಸ್ಥಿಕೆ ವಹಿಸಿದ್ದೇವೆ. ಹೀಗೆ ನೋಟಿಸ್ ನೀಡುವುದನ್ನು ನಿಲ್ಲಿಸಿ, ಫಲಿತಾಂಶ ಬರುವವರೆಗೂ ಕಾಯಬೇಕು. ಯಾರದ್ದಾದರೂ ತಪ್ಪಿದ್ದರೆ ನಂತರ ಕ್ರಮ ಕೈಗೊಳ್ಳೋಣ. ಈಗಲೇ ಇಂತಹ ಕ್ರಮಗಳು ಸರಿಯಲ್ಲ ಎಂದು ಹೇಳಿದ್ದೇನೆ. ಈ ಹಿಂದೆಯೂ ಹೀಗೆ ಅಮಾನತ್ತಾದವರು ಪಕ್ಷಕ್ಕೆ ವಾಪಸ್ಸಾಗಿದ್ದು, ಜಬ್ಬಾರ್ ಕೂಡ ಮರಳಬಹುದು ಎಂದರು.

ದಾವಣಗೆರೆ ಉಪಚುನಾವಣೆಯಲ್ಲಿ ಎಸ್‌ಡಿಪಿಐ ಅಭ್ಯರ್ಥಿಗೆ ಕಾಂಗ್ರೆಸ್‌ನ ಕೆಲ ಮುಖಂಡರಿಂದಲೇ ಹಣಕಾಸು ನೆರವು ನೀಡಲಾಗಿದೆ ಎಂಬ ಆರೋಪದ ಬಗ್ಗೆ ಪ್ರತಿಕ್ರಿಯಿಸಿ, ಈ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ಹೇಳಿದರು.

ತ್ರಿಮಸ್ಥ ವಿಪ್ರ ವಿದ್ಯಾರ್ಥಿಗಳಿಗೆ ಉಚಿತ ಊಟದ ವ್ಯವಸ್ಥೆ

ಮೈಸೂರು.ಏ.21– ಮೈಸೂರಿನ ಕುವೆಂಪುನಗರದ ಶ್ರೀ ಚಿತ್ಕಲ ಟ್ರಸ್ಟ್ ವತಿಯಿಂದ ದೂರದ ಊರುಗಳಿಂದ ಮೈಸೂರು ನಗರಕ್ಕೆ ಬಂದು ವ್ಯಾಸಂಗ ಮಾಡುತ್ತಿರುವ ತ್ರಿಮತಸ್ಥ ವಿಪ್ರ ವಿದ್ಯಾರ್ಥಿಗಳಿಗೆ ಪ್ರತಿ ದಿನ ಉಚಿತವಾಗಿ ಉಪಹಾರ ಹಾಗೂ ಊಟದ ವ್ಯವಸ್ಥೆ ಮಾಡಲಾಗುತ್ತಿದೆ. ಪಿಯುಸಿ, ಯಾವುದೇ ಪದವಿಯನ್ನು ವ್ಯಾಸಂಗ ಮಾಡುತ್ತಿರುವ, ಹಿಂದಿನ ಪರೀಕ್ಷೆಯಲ್ಲಿ ಶೇ.60ರಷ್ಟು ಅಂಕಗಳಿಸಿರುವ ವಿಪ್ರ ವಿದ್ಯಾರ್ಥಿಗಳಿಗೆ ಈ ಸೌಲಭ್ಯ ನೀಡಲಾಗುತ್ತದೆ. ಹೆಚ್ಚಿನ ಮಾಹಿತಿಗೆ ಮೊ: 9480484755, 9481529770, 9916266036 ಸಂಪರ್ಕಿಸಬಹುದು.

ಮೈಸೂರು ಮಿತ್ರ

ರಾಜ್ಯ ಕಾಂಗ್ರೆಸ್ ಸರ್ಕಾರ ಆರ್ಥಿಕವಾಗಿ ಸದೃಢವಾಗಿದೆ

ನಮ್ಮದು ನುಡಿದಂತೆ ನಡೆದ ಸರ್ಕಾರ: ಮುಖ್ಯಮಂತ್ರಿ ಸಿದ್ದರಾಮಯ್ಯ



ಪಿರಿಯಾಪಟ್ಟಣದಲ್ಲಿ ನಡೆದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆ ಹಾಗೂ ಉದ್ಘಾಟನಾ ಸಮಾರಂಭವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಈ ವೇಳೆ ಡಿಸಿಎಂ ಡಿ.ಕೆ.ಶಿವಕುಮಾರ್ ಸೇರಿದಂತೆ ಇನ್ನಿತರರಿದ್ದರು.

ಪಿರಿಯಾಪಟ್ಟಣ, ಏ.21– ನಮ್ಮದು ನುಡಿದಂತೆ ನಡೆದ ಸರ್ಕಾರ. ಅಲ್ಲದೇ ಅಭಿವೃದ್ಧಿ ಪಥದಲ್ಲಿ ಮುನ್ನಡೆಯುತ್ತಿರುವ ಸರ್ಕಾರವಾಗಿದ್ದು, ಇದಕ್ಕೆ ಇಂದಿನ ಅಭಿವೃದ್ಧಿ ಕಾಮಗಾರಿಗಳೇ ಸಾಕ್ಷಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಪಟ್ಟಣದಲ್ಲಿ 419.78 ಕೋಟಿ ರೂ. ವೆಚ್ಚದಲ್ಲಿ ಪಿರಿಯಾಪಟ್ಟಣ ಶಕ್ತಿದೇವತೆ ಶ್ರೀಮಸಣಿಕಮ್ಮ ದೇವಾಲಯ ನಿರ್ಮಾಣ, ಪಿರಿಯಾಪಟ್ಟಣ ತಾಲೂಕು ಒಕ್ಕಲಿಗರ ಸಂಘದ ಸಹಯೋಗದೊಂದಿಗೆ ನಿರ್ಮಿಸುತ್ತಿರುವ ಕುವೆಂಪು ಭವನ ನಿರ್ಮಾಣ, ಬೆಟ್ಟದಪುರದ ಸಿಡಿಲು ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನದ ರಸ್ತೆ ಅಭಿವೃದ್ಧಿ ಕಾಮಗಾರಿ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ನೆರವೇರಿಸಿ ಹಾಗೂ ಉದ್ಘಾಟಿಸಿ ಅವರು ಮಾತನಾಡಿದರು.

ನಮ್ಮದು ನುಡಿದಂತೆ ನಡೆವ ಸರ್ಕಾರ. 2014ರಲ್ಲಿ ನೀಡಿದ್ದ 168 ಭರವಸೆಗಳ ಪೈಕಿ 158 ಭರವಸೆಗಳನ್ನು ಈಡೇರಿಸಿದ್ದೇವು. ಅಲ್ಲದೇ 20 ಹೊಸ ಯೋಜನೆಗಳನ್ನು ಜಾರಿಗೊಳಿಸಿದ್ದೇವು. ಈ ಬಾರಿ ಭರವಸೆ ನೀಡಿದ್ದ 5 ಗ್ಯಾರೆಂಟಿ ಯೋಜನೆಗಳನ್ನು ಜಾರಿಗೊಳಿಸಿದ್ದೇವೆ ಎಂದ ಅವರು ಇವುಗಳನ್ನು ಜಾರಿಗೊಳಿಸುವುದು ಅಸಾಧ್ಯ ಜಾರಿಗೆ ತಂದರೆ ರಾಜ್ಯದ ಖಜಾನೆ ಖಾಲಿಯಾಗುತ್ತದೆ ಎಂದು ವಿಪಕ್ಷದವರು ಟೀಕಿಸಿದ್ದರು. ಆದರೆ ಇತರೆ ರಾಜ್ಯಗಳಲ್ಲಿ ನಮ್ಮ ಗ್ಯಾರೆಂಟಿ ಯೋಜನೆಗಳನ್ನು ಕಾಪಿ ಮಾಡುತ್ತಿದ್ದಾರೆ ಎಂದರು.

ಈ ಬಾರಿ ನಾವು 4,48,004 ಕೋಟಿ ವೆಚ್ಚದ ಬಜೆಟ್ ಮಂಡಿಸಿದ್ದೇವೆ. ನಮ್ಮ ಸರ್ಕಾರ ಆರ್ಥಿಕವಾಗಿ ಸದೃಢವಾಗಿದೆ. ಜನರು ನಮ್ಮ ಪರ ಇದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಪಶು ಸಂಗೋಪನಾ ಇಲಾಖೆ ಸಚಿವ ಕೆ.ವೆಂಕಟೇಶ್ ಮಾತನಾಡಿ, ಬಹಳ ವರ್ಷಗಳ ಕಾಲ ನೆನೆಗುದಿಗೆ ಬಿದ್ದಿದ್ದ ಹಲವು ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸಿ, ಮತ್ತೆ ಕೆಲವನ್ನು ಉದ್ಘಾಟಿಸಲಾಗುತ್ತಿದೆ. ಪಿರಿಯಾಪಟ್ಟಣ ಕಡಿಮೆ ನೀರಾವರಿ ಹೊಂದಿರುವ ತಾಲೂಕು. ಹೀಗಾಗಿ ಹಲವು ನೀರಾವರಿ ಯೋಜನೆಗಳ ಮೂಲಕ ಕೆರೆಗಳ ತುಂಬಿಸುವ ಕಾರ್ಯ ಮಾಡಲಾಗುತ್ತಿದೆ. 150 ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಜಾರಿಗೆ ತರಲಾಗಿದೆ ಎಂದರು.

ಮಸಣಿಕಮ್ಮ ದೇವಸ್ಥಾನ ಜೀರ್ಣೋದ್ಧಾರ, ಬೆಟ್ಟದಪುರದ ಸಿಡಿಲು ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನಕ್ಕೆ ರಸ್ತೆ ನಿರ್ಮಿಸಲಾಗುತ್ತಿದೆ. ನಮ್ಮ ಸರ್ಕಾರ ಯಾವಾಗಲೂ ಅಭಿವೃದ್ಧಿ, ಬಡವರ ಹಾಗೂ ರೈತರ ಪರ ಸರ್ಕಾರವಾಗಿದೆ. 5 ಗ್ಯಾರೆಂಟಿ ಯೋಜನೆಗಳಿಗೆ ವಾರ್ಷಿಕ 58 ಸಾವಿರ ಕೋಟಿ ವೆಚ್ಚ ಮಾಡುತ್ತಿದೆ. ಇದರಿಂದ ಜನರ ಜೀವನ ಮಟ್ಟ ಸುಧಾರಿಸಿದೆ ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ, ಲೋಕೋಪಯೋಗಿ ಸಚಿವ ಸತೀಶ್ ಜಾರಕಿ ಹೊಳಿ, ಕೃಷಿ ಸಚಿವ ಚಲುವರಾಯಸ್ವಾಮಿ, ಸಾರಿಗೆ ಮತ್ತು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ, ಕಂದಾಯ ಸಚಿವ ಕೃಷ್ಣ ಭೈರೇಗೌಡ, ಶಾಸಕರಾದ ಡಿ.ರವಿಶಂಕರ್, ಕೆ.ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ್, ವಿಧಾನ ಪರಿಷತ್ ಸದಸ್ಯರಾದ ಡಾ.ಡಿ.ತಿಮ್ಮಯ್ಯ, ಕೆಶಿವಕುಮಾರ್, ಪ್ರಾದೇಶಿಕ ಆಯುಕ್ತ ನಿತೀಶ್ ಪಾಟೀಲ್, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ, ಚೆಸ್ಕಾಂ ಎಂ.ಡಿ.ಅರ್ಚನ ಇತರರಿದ್ದರು.

ಮೇಕೆದಾಟು ಯೋಜನೆ ಅನುಷ್ಠಾನಕ್ಕೆ ಸಹಕಾರ ನೀಡಿ

ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಬಿಜೆಪಿ ನಾಯಕರಿಗೆ ಡಿಸಿಎಂ ಡಿ.ಕೆ.ಶಿವಕುಮಾರ್ ಆಗ್ರಹ

ಪಿರಿಯಾಪಟ್ಟಣ, ಏ.21– ಕೇಂದ್ರ ಸಚಿವರಾದ ಹೆಚ್.ಡಿ.ಕುಮಾರಸ್ವಾಮಿ, ಶೋಭಕ್ಕ, ವಿಪಕ್ಷ ನಾಯಕ ಆರ್.ಅಶೋಕ್ ಅವರೇ ನಿಮಗೆ ಬದ್ಧತೆ ಇದ್ದರೆ ಕಾನೂನು ಚೌಕಟ್ಟಿನಲ್ಲಿ ಸುಪ್ರೀಂಕೋರ್ಟ್ ನಿರ್ದೇಶನದಂತೆ ಮೇಕೆದಾಟು ಯೋಜನೆ ಅನುಷ್ಠಾನಗೊಳಿಸಲು ಸಹಕಾರ ನೀಡಿ ಎಂದು ಒತ್ತಾಯಿಸುತ್ತೇನೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಆಗ್ರಹಿಸಿದರು.

ಪಟ್ಟಣದಲ್ಲಿ 419.78 ಕೋಟಿ ರೂ. ವೆಚ್ಚದ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಹಾಗೂ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವಿಪಕ್ಷಗಳು ಬರೀ ಸುಳ್ಳು ಹೇಳುವುದು, ಟೀಕೆ ಮಾಡುವುದು, ತಪ್ಪು ದಾರಿಗೆ ಎಳೆಯುವ ಕೆಲಸ ಮಾಡುತ್ತಿವೆ. ಬಿಜೆಪಿಯವರು ಕಾಂಗ್ರೆಸ್ ಗ್ಯಾರಂಟಿ ಯೋಜನೆಗಳನ್ನು ನಕಲು ಮಾಡಿ ಅವರ ಆಡಳಿತದ ರಾಜ್ಯಗಳಲ್ಲಿ ನೀಡುತ್ತಿದ್ದಾರೆ. ಇಂತಹ ಹೊಸ ಬದಲಾವಣೆ ಸಾಧ್ಯವಾಗಿದ್ದು, ಕರ್ನಾಟಕದ ಮಹಾಜನತೆಯಿಂದ ಎಂದರು.

ಗ್ಯಾರಂಟಿ ಯೋಜನೆ ದೇಶಕ್ಕೆ ಮಾದರಿ: ಬಿಜೆಪಿಯವರು ನಮ್ಮ ಯೋಜನೆಗಳನ್ನು ನಕಲು ಮಾಡುತ್ತಿರಬಹುದು. ಆದರೆ 5 ಗ್ಯಾರಂಟಿ ಯೋಜನೆಗಳನ್ನು ನೀಡಲು ಸಾಧ್ಯವಾಗದೇ ಎರಡ್ಮೂರು ಯೋಜನೆಗಳನ್ನು ಮಾತ್ರ ನೀಡುತ್ತಿದ್ದಾರೆ. ಕಾಂಗ್ರೆಸ್ ಸರ್ಕಾರ ಜಾರಿಗೆ ತಂದಂತಹ ಗ್ಯಾರಂಟಿ ಯೋಜನೆಗಳು ಇಡೀ ದೇಶಕ್ಕೆ ಮಾದರಿಯಾಗಿವೆ. ಬಿಜೆಪಿ ಸರ್ಕಾರದ ಅವಧಿಯಲ್ಲಿ ಇಂತಹ ಯಾವುದಾದರೂ ಒಂದು ಕಾರ್ಯಕ್ರಮ ಕೊಟ್ಟಿದ್ದರಾ? 2 ಬಾರಿ ಅವಕಾಶ ಸಿಕ್ಕಿತ್ತು. ಒಂದಾದರೂ ಜನಪರ ಯೋಜನೆಗಳನ್ನು ನೀಡಲು ಸಾಧ್ಯವಾಯಿಯೇ? ಯಡಿಯೂರಪ್ಪ, ಬೊಮ್ಮಾಯಿ ಅವರಿಂದಲೂ ಸಾಧ್ಯವಾಗಲಿಲ್ಲ. ಕುಮಾರಸ್ವಾಮಿ 2 ಬಾರಿ ಮುಖ್ಯಮಂತ್ರಿ ಆಗಿದ್ದರು ಜನಪರ ಯೋಜನೆಗಳನ್ನು ನೀಡಲಿಲ್ಲ ಎಂದರು.

ಪಿರಿಯಾಪಟ್ಟಣ ಅಭಿವೃದ್ಧಿಗೆ ಸರ್ಕಾರ ಬದ್ಧ: ಒಕ್ಕಲಿಗರ ಸಂಘದ ಸಹಯೋಗದೊಂದಿಗೆ ಕುವೆಂಪು ಭವನ ನಿರ್ಮಿಸಲಾಗುತ್ತಿದೆ. ಇದು ಸಚಿವ ಕೆ.ವೆಂಕಟೇಶ್ ಅವರ ಬಹಳ ದಿನಗಳ ಕನಸಾಗಿತ್ತು. ಜನನ ಉಚಿತ ಮರಣ ಖಚಿತ. ಇದರ ನಡುವೆ ನಾವು ಏನನ್ನು ಕೊಟ್ಟು ಹೋಗುತ್ತೇವೆ ಎಂಬುದು ಮುಖ್ಯ. ಹೀಗಾಗಿ ಸಚಿವ ವೆಂಕಟೇಶ್ 2 ಕೋಟಿ ಮೌಲ್ಯದ ಭೂಮಿ ಖರೀದಿಸಿ ಜನರ ಕಲ್ಯಾಣಕ್ಕೆ ಬಳಸಿಕೊಳ್ಳಿ ಎಂದು ತಿಳಿಸಿದ್ದಾರೆ. ಕುವೆಂಪು ಭವನ ನಿರ್ಮಾಣಕ್ಕೆ 1 ಕೋಟಿ ರೂ. ನೆರವು ನೀಡಲಾಗುವುದು. ಪಿರಿಯಾಪಟ್ಟಣ ಅಭಿವೃದ್ಧಿಗೆ ಸರ್ಕಾರ ಬದ್ಧ ಎಂದರು.

ಗುಣಮಟ್ಟದ ರಸ್ತೆ ನಿರ್ಮಾಣ: ಕಳೆದ ವರ್ಷ ನಾನು ಹಾಗೂ ಮುಖ್ಯಮಂತ್ರಿಯವರು ಪಿರಿಯಾಪಟ್ಟಣ ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ ಚಾಲನೆ ನೀಡಿದ್ದೇವು. ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಹಾಗೂ ಈ ಹಿಂದಿನ ಬಾರಿ ಈ ಇಲಾಖೆ ಜವಾಬ್ದಾರಿ ಹೊತ್ತಿದ್ದ ಮಹಾದೇವಪ್ಪ ಅವರ ಕಾಲದಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ಭರದಿಂದ ಕೆಲಸಗಳು ನಡೆದವು ಈಗಲೂ ನಡೆಯುತ್ತಿವೆ. ರಸ್ತೆಗಳ ಅಭಿವೃದ್ಧಿಗೆ ಸತೀಶ್ ಅವರು ಒತ್ತು ನೀಡಿದ್ದಾರೆ. ಇಡೀ ರಾಜ್ಯದಲ್ಲಿಯೇ ಗುಣಮಟ್ಟದ ರಸ್ತೆಗಳನ್ನು ನಾವು ನಿರ್ಮಿಸುತ್ತಿದ್ದೇವೆ. ಪ್ರತಿಯೊಂದು ಹಂತದಲ್ಲೂ ಅತ್ಯುತ್ತಮ ಕಾರ್ಯಕ್ರಮಗಳನ್ನು ಕಾಂಗ್ರೆಸ್ ಸರ್ಕಾರ ನಡೆಸಿಕೊಂಡು ಬರುತ್ತಿದೆ ಎಂದರು.

ಕಂಪಲಾಪುರದಲ್ಲಿ ಅಂಬೇಡ್ಕರ್ ಜಯಂತಿ



ಕಂಪಲಾಪುರದಲ್ಲಿ ಜೈ ಭೀಮ್ ಯುವಸೇನೆ ವತಿಯಿಂದ ನಡೆದ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಅಂಬೇಡ್ಕರ್ ಭಾವಚಿತ್ರಕ್ಕೆ ಮುಖಂಡರು ಪುಷ್ಪಾರ್ಚನೆ ಮಾಡಿದರು. ಈ ವೇಳೆ ದಲಿತ ಮುಖಂಡರಾದ ತಮ್ಮಣ್ಣಯ್ಯ, ರಾಮು, ಮಾದೇವ, ಲಕ್ಷ್ಮಣ್, ಯುವಸೇನೆ ಗೌರವಾಧ್ಯಕ್ಷ ಗಣೇಶ್, ಕಾರ್ತಿಕ್, ರಾಮು ಮತ್ತಿತರರಿದ್ದರು.

ಬಸವಣ್ಣನವರ ಸಂದೇಶಗಳು ಇಂದಿಗೂ ಜೀವಂತ: ಶ್ರೀಬಸವಲಿಂಗಸ್ವಾಮೀಜಿ



ಬಸವ ಭವನವನ್ನು ಬಸವಲಿಂಗ ಸ್ವಾಮೀಜಿ ಉದ್ಘಾಟಿಸಿ ಆಶೀರ್ವಚನ ನೀಡಿದರು.

ತಿ.ನರಸೀಪುರ, ಏ.21– ಜಗದ್ಗುರು ಬಸವಣ್ಣ ಅವರು ನಮಗೆ ನೀಡಿದ ಸಂದೇಶಗಳು ಇಂದಿಗೂ ಜೀವಂತವಾಗಿವೆ. ಅವರು ಕೇವಲ ಧಾರ್ಮಿಕ ನಾಯಕರಷ್ಟೇ ಅಲ್ಲ. ಮಹಾನ್ ಸಮಾಜ ಸುಧಾರಕ ಹಾಗೂ ಚಿಂತಕ ಎಂದು ದಂಡಿಕೆರೆ ಮಹಾಂತಸ್ವಾಮಿ ಮಠದ ಶ್ರೀಬಸವಲಿಂಗಸ್ವಾಮೀಜಿ ತಿಳಿಸಿದರು.

ವರುಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕುಪ್ಪೇಗಾಲ ಗ್ರಾಮದಲ್ಲಿ ಬಸವೇಶ್ವರ ಯುವಕರ ಸಂಘದಿಂದ 10 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿರುವ ಬಸವ ಭವನ ಲೋಕಾರ್ಪಣೆಗೊಳಿಸಿ ಮಾತನಾಡಿದ ಅವರು, ಬಸವಣ್ಣ ಅವರ ಕಾಯಕವೇ ಕೈಲಾಸ ಎಂಬ ಸಂದೇಶ ಕೇವಲ ಮಾತಲ್ಲ ಅದು ಜೀವನ ನಡೆಸುವ ಮಾರ್ಗ. ಪ್ರತಿಯೊಬ್ಬರೂ ತಮ್ಮ ಕೆಲಸವನ್ನು ಪ್ರಾಮಾಣಿಕತೆ ಮತ್ತು ಭಕ್ತಿಯಿಂದ ಮಾಡಿದರೆ, ಅದೇ ದೇವರ ಪೂಜೆ. ಪ್ರಸ್ತುತ ಸಮಾಜದಲ್ಲಿ ಅಸಮಾನತೆ, ದ್ವೇಷ ಮತ್ತು ಅಹಂಕಾರ ಹೆಚ್ಚಾಗುತ್ತಿದೆ. ಇಂತಹ ಸಂದರ್ಭ ಬಸವಣ್ಣನವರ ವಚನಗಳು ನಮ್ಮನ್ನು ಸರಿ ದಾರಿಗೆ ನಡೆಸುತ್ತವೆ. ಸಮಾನತೆ, ಸಹೋದರತ್ವ ಮತ್ತು ಪ್ರೀತಿ ನಮ್ಮ ಜೀವನದ ಅಡಿಪಾಯವಾಗಬೇಕು ಎಂದರು.

ಸರ್ಕಾರದ ಅನುದಾನವಿಲ್ಲದೇ ಗ್ರಾಮದ ಯುವಕರೇ ದೇಣಿಗೆ ಸಂಗ್ರಹಿಸಿ ನಿರ್ಮಿಸಿರುವ ಈ ಬಸವ ಭವನವು ಕೇವಲ ಒಂದು ಕಟ್ಟಡವಲ್ಲ. ಇದು ನಮ್ಮ ಸಂಸ್ಕೃತಿ, ಧರ್ಮ ಮತ್ತು ಸಮಾಜದ ಮೌಲ್ಯಗಳನ್ನು ಉಳಿಸುವ ಒಂದು ಪವಿತ್ರ ಕೇಂದ್ರವಾಗಬೇಕು ಎಂದರು.

ಈ ಬಸವ ಭವನ ಒಗ್ಗಟ್ಟಿನ ಸಂಕೇತವಾಗಬೇಕು. ಇಲ್ಲಿ ಧಾರ್ಮಿಕ, ಸಾಂಸ್ಕೃತಿಕ ಚಟುವಟಿಕೆ ಮತ್ತು ಯುವ ಜನತೆಗೆ ಮಾರ್ಗದರ್ಶನ ನೀಡುವ ಕಾರ್ಯಕ್ರಮ ನಡೆಯುವಂತಾಗಬೇಕು. ನಮ್ಮ ಯುವಕರು ಉತ್ತಮ ಮಾರ್ಗದಲ್ಲಿ ನಡೆದು ಸತ್ಕಾರ್ಯಗಳಲ್ಲಿ ತೊಡಗಿಸಿಕೊಳ್ಳಬೇಕು. ಹಿರಿಯರ ಆಶೀರ್ವಾದ ಮತ್ತು ಮಾರ್ಗದರ್ಶನದಿಂದ ಈ ಗ್ರಾಮ ಇನ್ನಷ್ಟು ಅಭಿವೃದ್ಧಿಯಾಗಲಿ ಎಂದು ಆಶಿಸಿದರು.

ಬಸವೇಶ್ವರ ಯುವಕರ ಸಂಘದ ಸಂಘಟನಾ ಕಾರ್ಯದರ್ಶಿ ಎಂ.ಶಿವಬಸಪ್ಪ ಮಾತನಾಡಿ, ಗ್ರಾಮದಲ್ಲಿ ಬಸವ ಭವನ ನಿರ್ಮಿಸಬೇಕೆಂಬ ಕನಸು ಇಂದು ನೆರವೇರಿದೆ. ಬಸವ ಜಯಂತಿಯಂದೇ ಭವನ ಉದ್ಘಾಟನೆಯಾಗುತ್ತಿರುವುದು ಸಂತಸ ತಂದಿದೆ. ಸರ್ಕಾರದ ಯಾವುದೇ ನೆರವು, ಅನುದಾನಗಳಿಲ್ಲದೇ ಗ್ರಾಮಸ್ಥರು, ಯುವಕರೇ ದೇಣಿಗೆ ಮೂಲಕ ಸುಂದರವಾದ ಭವನ ನಿರ್ಮಿಸಿದ್ದಾರೆ. ಇಂದು ಹರಗುರು ಚರ ಮೂರ್ತಿಗಳು ಕಟ್ಟಡ ಉದ್ಘಾಟನೆ ಮಾಡಿರುವುದು ನಿಜಕ್ಕೂ ಸಂತಸ ಮೂಡಿಸಿದೆ ಎಂದರು.

ಈ ವೇಳೆ ಮೈಸೂರು ಕುದೇರು ಮಠದ ಶ್ರೀಗುರು ಶಾಂತಸ್ವಾಮೀಜಿ, ಬಿಲಿಗೆರೆಹುಂಡಿ ಗುರುಮಲ್ಲೇಶ್ವರ ದಾಸೋಹ ಮಠದ ಗುರು ಸ್ವಾಮೀಜಿ, ಹೊಸೂರು ಹುಂಡಿ ಮಠದ ರಾಜಶೇಖರ ಸ್ವಾಮೀಜಿ, ಮೈಮುಲ್ ಮಾಜಿ ಅಧ್ಯಕ್ಷ ಕೆ.ಉಮಾಶಂಕರ್, ಶರಣ ಸಾಹಿತ್ಯ ಪರಿಷತ್ ಕೆಬ್ಬೆಹುಂಡಿ ಸೋಮಶೇಖರಪ್ಪ, ಸೀಹಳ್ಳಿ ಶಿವಮಲ್ಲಪ್ಪ, ಗ್ರಾಪಂ ಮಾಜಿ ಸದಸ್ಯ ರಮೇಶ್, ಕೆ.ಎಂ.ಸತೀಶ್, ಬಸವೇಶ್ವರ ಯುವಕರ ಸಂಘದ ಅಧ್ಯಕ್ಷ ಕೆ.ಎಂ.ಸುರೇಶ್, ಉಪಾಧ್ಯಕ್ಷ ಪುಟ್ಟಸ್ವಾಮಪ್ಪ, ಕಾರ್ಯದರ್ಶಿ ಶಿವಮೂರ್ತಿ, ಖಜಾಂಚಿ ಸೋಮಶೇಖರ್, ನಿರ್ದೇಶಕರಾದ ಪಿಮಹದೇವಸ್ವಾಮಿ, ಶೇಖರ್, ಎಂ.ದರ್ಶನ್, ಮಲ್ಲಿಕಾರ್ಜುನ, ನಾಗೇಂದ್ರ, ಎಂ.ಅಶೋಕ್ ಕುಮಾರ್, ಮಹದೇವಸ್ವಾಮಿ, ಕೆ.ಬಿ.ಮಹದೇವಸ್ವಾಮಿ, ಮಹೇಶ್, ರಾಜು, ಪ್ರಭು, ಬಸವಣ್ಣ ಸೇರಿದಂತೆ ವೀರಶೈವ ಲಿಂಗಾಯತ ಮುಖಂಡರು ಸೇರಿದಂತೆ ಇತರರಿದ್ದರು.

ಒಂದನೇ ಪುಟದಿಂದ

ನೇಮಕಾತಿ ಪತ್ರ ವಿತರಿಸಿದ ಸಿಎಂ, ಡಿಸಿಎಂ

ಸಂದರ್ಭ ರಾಹುಲ್ ಗಾಂಧಿ ಹಾಗೂ ಡಿ.ಕೆ. ಶಿವಕುಮಾರ್ ಆಕ್ಸಿಜನ್ ದುರಂತದಲ್ಲಿ ಮೃತಪಟ್ಟವರ ಕುಟುಂಬ ಸದಸ್ಯರನ್ನು ಭೇಟಿ ಮಾಡಿ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದರೆ ಸರ್ಕಾರಿ ಉದ್ಯೋಗ ನೀಡುವ ಭರವಸೆ ನೀಡಿದ್ದರು.

ಎಸ್‌ಡಿಪಿಐ ಬೆಂಬಲ: 2023ರಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಎಲ್ಲಾ ಸಂತ್ರಸ್ತರು ಸರ್ಕಾರಿ ಉದ್ಯೋಗಕ್ಕಾಗಿ ಹೋರಾಟ ನಡೆಸಿಕೊಂಡು ಬಂದಿದ್ದರು. ಇವರಿಗೆ ಎಸ್‌ಡಿಪಿಐ ಸಂಘಟನೆ ನಿರಂತರ ಬೆಂಬಲ ನೀಡಿದ ಫಲವಾಗಿ ಅಂತಿಮವಾಗಿ ಸಂತ್ರಸ್ತರ ಬೇಡಿಕೆ ಈಡೇರಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ನೇಮಕಾತಿ ಪತ್ರಗಳನ್ನು ನೀಡಿದ್ದಾರೆ.

ಮಹಿಳಾ ಮೀಸಲಾತಿಗೆ ಕಾಂಗ್ರೆಸ್ ಬೆಂಬಲ: ಕಾಂಗ್ರೆಸ್ ಪಕ್ಷ ಮಹಿಳಾ ಮೀಸಲಾತಿಯನ್ನು ಸದಾ ಬೆಂಬಲಿಸುತ್ತದೆ ಹಾಗೂ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳಾ ಮೀಸಲಾತಿ ಜಾರಿಗೆ ತಂದಿದ್ದೇ ಕಾಂಗ್ರೆಸ್ ಸರ್ಕಾರ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಪಾದಿಸಿದರು. ಪ್ರಧಾನಿ ಮೋದಿಯವರು ಮಹಿಳಾ ಮೀಸಲಾತಿಯನ್ನು ವಿರೋಧಿಸಿದವರನ್ನು ಮಹಿಳೆಯರು ಕ್ಷಮಿಸುವುದಿಲ್ಲ ಎಂದಿದ್ದಾರೆ. ಆದರೆ 2023ರಲ್ಲಿಯೇ ಮಹಿಳಾ ಮೀಸಲಾತಿ ವಿಸ್ತರಿಸಲಾಗಿತ್ತು. ಈ ಕಾಯ್ದೆಗೆ ಕಾಂಗ್ರೆಸ್ ವಿರೋಧಿಸದೆ ಸ್ವಾಗತಿಸಿತ್ತು. ಆದರೆ ಸಹಮತ ಸೂಚಿಸಲಾಗಿದ್ದ ಮಹಿಳಾ ಮೀಸಲಾತಿಯನ್ನು 2028ರವರೆಗೆ ಜಾರಿಗೆ ತರಲು ಸಾಧ್ಯವಿಲ್ಲವೆಂದು ಬಿಜೆಪಿಯವರೇ ಹೇಳಿದ್ದರಲ್ಲಾ ಎಂದರು.

ಡಿ ಲಿಮಿಟೇಷನ್ ಕಾಯ್ದೆಗೆ ವಿರೋಧ: ಗ್ರಾಮ, ತಾಲೂಕು, ಜಿಲ್ಲಾ ಪಂಚಾಯತಿಗಳು, ನಗರಸಭೆ, ನಗರ ಪಾಲಿಕೆಗಳಲ್ಲಿ ಶೇ. 50 ರಷ್ಟು ಮಹಿಳೆಯರಿದ್ದು, ಇದಕ್ಕೆ ಕಾಂಗ್ರೆಸ್ ಸರ್ಕಾರವೇ ಕಾರಣ. ಪ್ರಸ್ತುತ, ಕೇಂದ್ರ ಸರ್ಕಾರವು ಮಹಿಳಾ ಮೀಸಲಾತಿ ಕಾಯ್ದೆಯ ಜೊತೆಗೆ ಡಿ ಲಿಮಿಟೇಷನ್ ಕಾಯ್ದೆ ತರಲು ಪ್ರಯತ್ನಿಸಿದ್ದರಿಂದ ಕಾಂಗ್ರೆಸ್ ಪಕ್ಷ ವಿರೋಧವನ್ನು ವ್ಯಕ್ತಪಡಿಸಿದ್ದೇ ಹೊರತು ಮಹಿಳಾ ಮೀಸಲಾತಿಯನ್ನು ವಿರೋಧಿಸಿಲ್ಲ ಎಂದು ಸ್ಪಷ್ಟಪಡಿಸಿದರು.

ಕಾಂಗ್ರೆಸ್ಸಿಗರೇ ಗುರಿ : ಕಾಂಗ್ರೆಸ್ ನಾಯಕರನ್ನು ಮಾತ್ರ ಗುರಿಯಾಗಿಸಿಕೊಂಡು ಕೇಂದ್ರ ಸರ್ಕಾರ ಇ.ಡಿ ದಾಳಿ ನಡೆಸುತ್ತಿದೆ ಎಂದು ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು. ಶಾಸಕ ಹ್ಯಾರಿಸ್ ಪುತ್ರ ನಲಪಾಡ್ ಅವರ ಮನೆ ಮೇಲೆ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ದಾಳಿ ನಡೆಸಿರುವ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿ, ಕೇಂದ್ರ ಸರ್ಕಾರ ಕೇವಲ ಕಾಂಗ್ರೆಸ್ ನಾಯಕರನ್ನು ಮಾತ್ರ ಗುರಿಯಾಗಿಸಿಕೊಂಡು ಇ.ಡಿ. ದಾಳಿ ನಡೆಸುತ್ತಿದ್ದು, ಬಿಜೆಪಿ ನಾಯಕರ ಮೇಲೆ ಇಡಿ ದಾಳಿ ನಡೆಸುವುದಿಲ್ಲ ಏಕೆ ಎಂದು ಪ್ರಶ್ನಿಸಿದರು.

ಬಿಜೆಪಿಯಿಂದಲೇ ಗ್ಯಾರಂಟಿ ಘೋಷಣೆ: ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಗಳನ್ನು ಘೋಷಣೆ ಮಾಡಿದಾಗ ಅದನ್ನು ವಿರೋಧಿಸುತ್ತಿದ್ದ ಬಿಜೆಪಿಯವರೇ ಅದನ್ನು ಘೋಷಣೆ ಮಾಡಲು ಮುಂದಾಗುತ್ತಿದ್ದಾರೆ. ಗ್ಯಾರಂಟಿಗಳು ಬಡವರ ಕಾರ್ಯಕ್ರಮಗಳು ಎಂದು ಅವರಿಗೆ ಗೊತ್ತಾಗಿದೆ ಎಂದು ಹೇಳಿದರು.

ತೃತೀಯ ಭಾಷೆಗೆ ಅಂಕ: ತೃತೀಯ ಭಾಷೆಗೆ ಅಂಕ ಕೊಡಬೇಕೆಂಬ ನ್ಯಾಯಾಲಯದ ನಿರ್ದೇಶನವನ್ನು ಪಾಲಿಸಲಾಗುವುದು. ತೃತೀಯ ಭಾಷೆಗೆ ಹಿಂದಿನ ವರ್ಷಗಳಂತೆಯೇ ಮೌಲ್ಯಮಾಪನ ಮಾಡಿ ಅಂಕಗಳನ್ನು ನೀಡಬೇಕೆಂದು ಉಚ್ಚನ್ಯಾಯಾಲಯ ಹೇಳಿ ಮುಂದಿನ ತೀರ್ಮಾನ ಮಾಡಲು ಸೂಚಿಸಿದ್ದು, ನ್ಯಾಯಾಲಯದ ನಿರ್ದೇಶನ ಪಾಲಿಸುತ್ತೇವೆ ಎಂದರು. ತಮ್ಮನ್ನು ಕಡೆಗಣಿಸುತ್ತಿದ್ದಾರೆಂದು ಹೈಕಮಾಂಡ್‌ಗೆ ಅಲ್ಪಸಂಖ್ಯಾತರು ಪತ್ರ ಬರೆದಿರುವ ಬಗ್ಗೆ ಮಾತನಾಡಿ, ವರಿಷ್ಠರು ತೀರ್ಮಾನ ಕೈಗೊಳ್ಳುವಾಗ ಅಲ್ಪಸಂಖ್ಯಾತರ ನಾಯಕರು ಉಪಸ್ಥಿತರಿದ್ದರು. ಅವರೆದುರೇ ತೀರ್ಮಾನವಾಗಿತ್ತು. ನಂತರ ಅವರು ವಿರೋಧಿಸಿದರು. ಅಲ್ಪಸಂಖ್ಯಾತ ಮುಖಂಡರನ್ನು ಕಡೆಗಣಿಸಿಲ್ಲ ಎಂದು ಹೇಳಿದರು.

ಇದೇ ವೇಳೆ, ದಾವಣಗೆರೆ ಮತ್ತು ಬಾಗಲಕೋಟೆ ಕ್ಷೇತ್ರದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಗೆಲುವು ಸಾಧಿಸಲಿದ್ದಾರೆ ಎಂದು ಸಿದ್ದರಾಮಯ್ಯ ವಿಶ್ವಾಸ ವ್ಯಕ್ತಪಡಿಸಿದರು.

ಮುಳುಗಿ ವಿದ್ಯಾರ್ಥಿನಿಯರ ದುರ್ಮರಣ

ಸುಳಿಗೆ ಸಿಲುಕಿ, ಮುಳುಗಲಾರಂಭಿಸಿದ್ದಾರೆ. ಇದನ್ನು ಗಮನಿಸಿದ ಸಹಪಾಠಿಗಳು ಜೋರಾಗಿ ಕಿರುಚಿಕೊಂಡಿದ್ದಾರೆ. ಕೂಡಲೇ ನದಿ ದಡದಲ್ಲಿದ್ದ ತಲಕಾಡು ಪೊಲೀಸರು, ಹೋಮ್‌ಗಾರ್ಡ್ ಹಾಗೂ ಈಜುಗಾರರು ವಿದ್ಯಾರ್ಥಿನಿಯರ ರಕ್ಷಣೆಗೆ ಧಾವಿಸಿದ್ದಾರೆ. ನೀರಿನಲ್ಲಿ ಮುಳುಗಿದ್ದ ಐವರನ್ನೂ ರಕ್ಷಣೆ ಮಾಡಿ, ದಡಕ್ಕೆ ಕರೆತಂದು ಆರೈಕೆ ಮಾಡಿದ್ದಾರೆ.

ಐವರಲ್ಲಿ ಕೀರ್ತಿ, ರೋಷಮಿ ಚೇತರಿಸಿಕೊಂಡಿದ್ದು, ರಮ್ಯ ಹಾಗೂ ಚಾರ್ವಿ ತಲುಕಾಡು ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯೆ ಮೃತಪಟ್ಟಿದ್ದಾರೆ. ಮತ್ತೋರ್ವ ವಿದ್ಯಾರ್ಥಿನಿ ಸುಚಿತಾಳಿಗೆ ತಲಕಾಡು ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಿ, ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ. ಸಂಜೆ ವೇಳೆಗೆ ಸುಚಿತ್ರಾಳ ಆರೋಗ್ಯದಲ್ಲಿ ಚೇತರಿಕೆ ಕಂಡಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಅಳುತ್ತಲೇ ವಾಪಸ್ಸಾದ ವಿದ್ಯಾರ್ಥಿನಿಯರು: ಖುಷಿಯಲ್ಲಿ ಪ್ರವಾಸಕ್ಕೆ ಬಂದಿದ್ದ ವಿದ್ಯಾರ್ಥಿನಿಯರು, ಇಬ್ಬರು ಸಹಪಾಠಿಗಳನ್ನು ಕಳೆದುಕೊಂಡು ಕಣ್ಣೀರಿಟ್ಟರು. ಅಳುತ್ತಿದ್ದ ವಿದ್ಯಾರ್ಥಿನಿಯರನ್ನು ಸ್ಥಳೀಯರು ಹಾಗೂ ಪ್ರವಾಸಿಗರು ಸಮಾಧಾನಪಡಿಸಲು ಯತ್ನಿಸಿದರು. ಆದರೂ, ವಿದ್ಯಾರ್ಥಿನಿಯರು ಅಗಲಿದ ಸಹಪಾಠಿಗಳನ್ನು ನೆನೆದು ಕಣ್ಣೀರಿಡುತ್ತಲೇ ಬೆಂಗಳೂರಿಗೆ ವಾಪಸ್ಸಾದರು.

ಮರಣೋತ್ತರ ಪರೀಕ್ಷೆ: ನೀರಿನಲ್ಲಿ ಮುಳುಗಿ ಮೃತಪಟ್ಟ ವಿದ್ಯಾರ್ಥಿನಿಯರಿಬ್ಬರ ದೇಹವನ್ನು ಮೈಸೂರು ಸರ್ಕಾರಿ ವೈದ್ಯಕೀಯ ಕಾಲೇಜು ಹಾಗೂ ಸಂಶೋಧನಾ ಸಂಸ್ಥೆಯ ಶವಾಗಾರಕ್ಕೆ ಸಾಗಿಸಿ, ವೈದ್ಯಕೀಯ ಪರೀಕ್ಷೆ ಬಳಿಕ ಮೃತದೇಹಗಳನ್ನು ಶಿಕ್ಷಕರಿಗೆ ಒಪ್ಪಿಸಲಾಯಿತು.

ತಲಕಾಡು ಠಾಣೆಯ ಪಿಎಸ್ಐ ವಿಜಯರಾವ್, ಎಎಸ್ಐ ಕೆ.ಪಿ.ನಾಗೇಂದ್ರ ಮೂರ್ತಿ, ಮುಖ್ಯ ಪೇದೆ ಡಿ.ಮಾದಪ್ಪ ಸ್ಥಳ ಪರಿಶೀಲನೆ ನಡೆಸಿ, ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಜಲ ಕಂಟಕ; 3 ದಿನದಲ್ಲಿ 10 ಬಲಿ

ಮೈಸೂರು, ಏ.21(ಎಂಟಿವೈ)– ಬೇಸಿಗೆಯಲ್ಲಿ ನೀರಿನಲ್ಲಿ ಮುಳುಗಿ ಸಾವನ್ನಪ್ಪುವ ದುರಂತಗಳು ಮರುಕಳಿಸುತ್ತಿವೆ. ಮೈಸೂರು ಜಿಲ್ಲೆಯಲ್ಲಿ ಪ್ರತ್ಯೇಕ ಪ್ರಕರಣಗಳಲ್ಲಿ ಕಳೆದ ಮೂರು ದಿನದಲ್ಲೇ 10 ಮಂದಿ ಕಾವೇರಿ ನದಿಯಲ್ಲಿ ಮುಳುಗಿ ಜೀವ ಕಳೆದುಕೊಂಡಿದ್ದು, ಜಲ ಗಂಡಾಂತರದ ಬಗ್ಗೆ ಸಾರ್ವಜನಿಕರು ಆತಂಕಗೊಂಡಿದ್ದಾರೆ.

ಎರಡು ದಿನದ ಹಿಂದಷ್ಟೇ ಕೆ.ಆರ್.ನಗರದ ಅರ್ಕೇಶ್ವರ ದೇವಾಲಯದ ಸಮೀಪ ಕಾವೇರಿ ನದಿಗೆ ಈಜಲು ತೆರಳಿ ಬೆಂಗಳೂರಿನ ಯಾಸಿನ್(23) ಹೈಮಾ (13), ಊಟಿ ಮೂಲದ ಸೈದ್ ಫಾತಿಮಾ (38), ಮೈಸೂರಿನ ನೇಹಾ(20), ಉಮೇರ್(7) ಮತ್ತು ಅಫಿಯಾ(20) ಸೇರಿ ಆರು ಮಂದಿ ಮೃತಪಟ್ಟರು. ಮತ್ತೊಂದು ಘಟನೆಯಲ್ಲಿ ಪಿರಿಯಾಪಟ್ಟಣದ ದೊಡ್ಡ ಹರವೆ ಗ್ರಾಮದ ಬಳಿ ಈಜಲು ಹೋಗಿದ್ದ ಗಣೇಶ್(22) ಮತ್ತು ಇಮ್ರಾನ್(28) ಸಾವನ್ನಪ್ಪಿದರು. ಈ ಘಟನೆಗಳ ಬೆನ್ನಲ್ಲೇ ತಲಕಾಡಿನ ನಿಸರ್ಗಧಾಮದಲ್ಲಿ ಇಂದು ಮಧ್ಯಾಹ್ನ ಬೆಂಗಳೂರಿನ ಚಾಮರಾಜಪೇಟೆಯ ವಿದ್ಯಾರ್ಥಿನಿಯರಾದ ಚಾರ್ವಿ(12) ಹಾಗೂ ರಮ್ಯಾ(16) ಮೃತಪಟ್ಟಿದ್ದಾರೆ. ಈಜಲು ನೀರಿಗಿಳಿಯುವ ಮುನ್ನ ಎಚ್ಚರಿಕೆ ವಹಿಸುವಂತೆ ಅಧಿಕಾರಿಗಳು ಮನವಿ ಮಾಡಿದ್ದಾರೆ.

ಸಿದ್ದರಾಮಯ್ಯನವರ ಅವಧಿ ಮುಗಿದಿದೆ; ಅವರು ಔಟ್ ಗೋಯಿಂಗ್ ಚೀಫ್ ಮಿನಿಸ್ಟರ್!

ಸಿಎಂ ಅಧಿಕಾರ ಹಸ್ತಾಂತರ ವಿಚಾರದ ಬಗ್ಗೆ ಕುತೂಹಲ ಕೆರಳಿಸಿದ ಛಲವಾದಿ ನಾರಾಯಣಸ್ವಾಮಿ ಹೇಳಿಕೆ



ಮೈಸೂರಿನ ಬಿಜೆಪಿ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಮಾತನಾಡಿದರು.

ಮೈಸೂರು, ಏ.21(ಪಿಎಂ)– ಮುಖ್ಯಮಂತ್ರಿಗಳು ಇದೇ ಭಾಗದವರು. ಅವರು ಔಟ್ ಗೋಯಿಂಗ್ ಚೀಫ್ ಮಿನಿಸ್ಟರ್. ಅವರ ಬಗ್ಗೆ ಜಾಸ್ತಿ ಮಾತನಾಡಬಾರದು ಎಂದು ಹೇಳುವ ಮೂಲಕ ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಸಿಎಂ ಅಧಿಕಾರ ಹಸ್ತಾಂತರ ವಿಚಾರದ ಬಗ್ಗೆ ಕುತೂಹಲ ಕೆರಳಿಸಿದ್ದಾರೆ.

ಮೈಸೂರಿನ ಬಿಜೆಪಿ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿಗಳು ಮನೆ ಕಟ್ಟಿಯಾಗಿದೆ. ಗೃಹ ಪ್ರವೇಶ ಒಳಗೆ ಮಾಡಿಕೊಂಡಿದ್ದಾರೆ. ಇನ್ನು ಹೊರಗೆ ಮಾಡಿಲ್ಲ. ಹೊರಗಡೆ ಮಾಡುವ ಗೃಹ ಪ್ರವೇಶಕ್ಕೆ ಎಲ್ಲರನ್ನು ಕರೆಯಬಹುದು. ಅದಾದ ಬಳಿಕ ವಿಶ್ರಾಂತಿಗೆ ಇಲ್ಲಿಗೆ ಅವರು ಬರುತ್ತಾರೆ. ಅವರ ಅವಧಿ ಮುಗಿದಿದೆ. ಹಾಗಾಗಿ ದಿನ ನಿಮಗೆ ಸಿಗುತ್ತಾರೆ ಎಂದು ಹೇಳಿದರಲ್ಲದೆ, ಯಾವುದನ್ನೂ ಕೇಳಿದರೂ ಕೇಳಿಬಿಟ್ಟು ಹೇಳುತ್ತೇನೆ ಎನ್ನುತ್ತಾರೆ ಗೃಹ ಮಂತ್ರಿಗಳು. ಅದನ್ನು ವಿರೋಧ ಪಕ್ಷದವರು ಹೇಳಬೇಕು. ನಾನೇ ಗೃಹ ಸಚಿವನಾಗಿ ಈ ರೀತಿ ಉತ್ತರ ಕೊಟ್ಟರೆ ಆ ಸ್ಥಾನಕ್ಕೆ ನಾನೂ ಯೋಗ್ಯನಲ್ಲ ಎಂದು ಹೇಳಿದರು.

ಶೀಘ್ರ ಚಾರ್ಜ್‌ಶೀಟ್ ಸಲ್ಲಿಕೆಯಾಗದಿದ್ದರೆ ಹೋರಾಟ: ಬಿಟ್ ಕಾಯಿನ್ ಪ್ರಕರಣ ಸಂಬಂಧ 2–3 ದಿನಗಳ ಒಳಗಾಗಿ ಎಫ್‌ಐಆರ್ ದಾಖಲಿಸಿ, ಚಾರ್ಜ್‌ಶೀಟ್ ಸಲ್ಲಿಕೆ ಆಗಲೇಬೇಕು. ಆ ಮೂಲಕ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮವಾಗಬೇಕು. ಇಲ್ಲವಾದರೆ ಹೋರಾಟ ಎದುರಿಸಬೇಕಾಗುತ್ತದೆ ಎಂದು ರಾಜ್ಯ ಕಾಂಗ್ರೆಸ್ ಸರ್ಕಾರಕ್ಕೆ ಛಲವಾದಿ ನಾರಾಯಣಸ್ವಾಮಿ ಎಚ್ಚರಿಕೆ ನೀಡಿದರು.

ಈ ಪ್ರಕರಣದಲ್ಲಿ ಎಸ್‌ಐಟಿ ವರದಿ ಬಂದು ವರ್ಷಗಳೇ ಕಳೆದಿವೆ. ಅದಾಗ್ಯೂ ಎಫ್‌ಐಆರ್ ದಾಖಲಿಸಿಲ್ಲ, ಚಾರ್ಜ್‌ಶೀಟ್ ಸಲ್ಲಿಸಿಲ್ಲ. ಈ ಪ್ರಕರಣದಲ್ಲಿ ಯಾರನ್ನು ರಕ್ಷಣೆ ಮಾಡಲು ಹೊರಟಿದ್ದೀರಿ. ಈ ಪ್ರಕರಣದಲ್ಲಿ ಬಿಜೆಪಿಯವರು ಸಿಕ್ಕಿಲ್ಲವೆಂಬ ಕಾರಣವೇ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಹರಿಹಾಯ್ದರು.

ರಾಜ್ಯ ಕಾಂಗ್ರೆಸ್ ಸರ್ಕಾರ ಬಿಟ್ ಕಾಯಿನ್ ಸೇರಿದಂತೆ 9 ಪ್ರಕರಣಗಳ ಸಂಬಂಧ ಎಸ್‌ಐಟಿ ರಚನೆ ಮಾಡಿದೆ. ಈ ಪೈಕಿ 8 ಪ್ರಕರಣಗಳಲ್ಲಿ ಚಾರ್ಜ್‌ಶೀಟ್ ಫೈಲ್ ಆಗಿದ್ದು, ಬಿಟ್ ಕಾಯಿನ್ ಪ್ರಕರಣದಲ್ಲಿ ಮಾತ್ರ ಚಾರ್ಜ್‌ಶೀಟ್ ಫೈಲ್ ಮಾಡಿಲ್ಲ. ಇದೀಗ ಬಿಟ್ ಕಾಯಿನ್ ಪ್ರಕರಣದಲ್ಲಿ ಇಡಿ ದಾಳಿ ನಡೆದಿದ್ದು, ಶಾಸಕ, ಬಿಡಿಎ ಅಧ್ಯಕ್ಷ ಎನ್.ಎ.ಹ್ಯಾರಿಸ್, ಅವರ ಮಕ್ಕಳಾದ ಮೊಹಮ್ಮದ್ ನಲಪಾಡ್, ಒಮರ್ ಫಾರೂಕ್ ನಲಪಾಡ್, ಕಾಂಗ್ರೆಸ್ ನಾಯಕ ರೆಹಮಾನ್ ಖಾನ್ ಅವರ ಮೊಮ್ಮಗನ ಮನೆ ಮೇಲೂ ಇಡಿ ದಾಳಿ ನಡೆಸಿದೆ. ಈ ಪ್ರಕರಣದಲ್ಲಿ ಶ್ರೀಕಿ ಕಿಂಗ್‌ಪಿನ್ ಆಗಿದ್ದು, ಅವರ ಮನೆ ಮೇಲೂ ಇಡಿ ದಾಳಿಯಾಗಿದೆ ಎಂದರು.

ನಾನು ಮುಖ್ಯಮಂತ್ರಿ ಸಿದ್ದರಾಮಯ್ಯರನ್ನು ಪ್ರಶ್ನೆ ಮಾಡುತ್ತೇನೆ. ನಿಮಗೆ ಕ್ಲೀನ್‌ಚೀಟ್ ಕೊಡುವುದಕ್ಕೆ ಮಾತ್ರ ಎಸ್‌ಐಟಿ ಮಾಡಿಕೊಳ್ಳುತ್ತೀರಾ. ನೀವು ಕದ್ದ ಸೈಟ್ ವಾಪಸ್ಸು ಕೊಟ್ಟರೆ ಕೇಸ್ ಇಲ್ಲ. ವಾಲ್ಮೀಕಿ ನಿಗಮದಲ್ಲಿ ದುಡ್ಡು ಹೊಡೆದು ವಾಪಸ್ಸು ಕೊಟ್ಟರೆ ಕೇಸ್ ಇಲ್ಲ. ಇದು ಮಾಡುವುದಕ್ಕೆ ಎಸ್‌ಐಟಿ ಇರುವುದೇ. ಈ ಪ್ರಕರಣದಲ್ಲಿ ನೀವು ಯಾರಾರನ್ನು ರಕ್ಷಣೆ ಮಾಡಲು ಹೊರಟ್ಟಿದ್ದೀರಿ ಎಂಬುದು ಗೊತ್ತಿದೆ ಎಂದು ತೀವ್ರ ವಾಗ್ದಾಳಿ ನಡೆಸಿದರು.

ಈ ಪ್ರಕರಣದಲ್ಲಿ ಬಿಜೆಪಿ, ಜೆಡಿಎಸ್, ಕಾಂಗ್ರೆಸ್‌ನವರು ಯಾರೇ ಇದ್ದರೂ ಬೆಳಕಿಗೆ ಬರಲಿ. ತಪ್ಪಿತಸ್ಥರನ್ನು ಬಿಜೆಪಿ ಎಂದೂ ರಕ್ಷಿಸುವುದಿಲ್ಲ. 2016–17ರಲ್ಲಿ ಅಶೋಕ ಹೋಟೆಲ್‌ನಲ್ಲಿ ಒಂದು ಸೆಮಿನಾರ್ ನಡೆಯಿತು. ಸೆಮಿನಾರ್ ವಿಚಾರವೆಂದರೆ, ಇದೇ ಬಿಟ್ ಕಾಯಿನ್ ರೀತಿಯ ವ್ಯವಹಾರಕ್ಕೆ ಉತ್ತೇಜನ ಕೊಡುವುದಾಗಿತ್ತು. ಅಂದು ಯಾರೂ ಐಟಿ ಬಿಟಿ ಮಂತ್ರಿ ಆಗಿದ್ದರೋ ಅವರೇ ಸೆಮಿನಾರ್ ಮಾಡಿ ಇದನ್ನು ಪ್ರೇರೆಪಣೆ ಮಾಡಿದರು ಎಂದು ಆಗಿನ ಅಧಿಕಾರಿಗಳೇ ಹೇಳಿದ್ದಾರೆ. ಅಂದು ಐಟಿ ಬಿಟಿ ಮಂತ್ರಿಗಳ ಕಚೇರಿಗೆ ಶ್ರೀಕಿಯವರು ಯಾವ ಕಾರಣಕ್ಕೆ ಬರುತ್ತಿದ್ದರು. ಇವರು ವಿಧಾನಸೌಧದ ಕಚೇರಿಗೆ ಬಂದು ಹೋಗುತ್ತಿದ್ದ ವಿಡಿಯೋಗಳನ್ನು ತೆಗೆದರೆ ಇವರ ಸಂಪರ್ಕದಲ್ಲಿ ಯಾರ್ಯಾರು ಇದ್ದರು ಎಂಬುದು ಬೆಳಕಿಗೆ ಬರುತ್ತದೆ.

ಅಂದಿನ ಸಿದ್ದರಾಮಯ್ಯ ಸರ್ಕಾರ ಸಹ ಇದರಲ್ಲಿ ಹೊಣೆಯಾಗಿತ್ತು. ಆದ್ದರಿಂದಲೇ ಇವರು ನಮ್ಮವರೇ ಎಲ್ಲರೂ ಸಿಕ್ಕಿಕೊಳ್ಳುತ್ತಾರೆ ಎಂದು ಚಾರ್ಜ್‌ಶೀಟ್ ಹಾಕಲು ಹೆದರುತ್ತಿದ್ದಾರೆ ಎಂದು ಆರೋಪಿಸಿದರು.

ಈಗ ಇಡಿ ಪ್ರಕರಣದಲ್ಲಿ ಪ್ರವೇಶ ಪಡೆದಿದ್ದು, ನೀವು ಇಡಿಯನ್ನು ತಡೆಯಲು ಸಾಧ್ಯವಿಲ್ಲ. ಇಡಿಯವರು ಎಲ್ಲವನ್ನು ಬಿಡುಗಡೆ ಮಾಡುವ ಮುನ್ನ ನೀವೇ ಬಿಡುಗಡೆ ಮಾಡಿ ಎಂದು ಮುಖ್ಯಮಂತ್ರಿಗಳನ್ನು ಒತ್ತಾಯಿಸಿದರು. ಅಂದಿನ ಐಟಿ–ಬಿಟಿ ಸಚಿವರು ಯಾರೆಂದು ಮಾಧ್ಯಮದವರು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿ, ಇಂದು ಯಾರಿದ್ದರೋ ಅವರೇ ಇದ್ದರು. ಅವರೇ ಪ್ರಿಯಾಂಕ್ ಖರ್ಗೆ. ಅವರೇ ಅಂದು ಸೆಮಿನಾರ್ ಮಾಡಿದ್ದು. ಅವರು ತಪ್ಪು ಮಾಡಿಲ್ಲವೆಂದರೆ ನಮ್ಮದೇನೂ ಅಭ್ಯಾಂತರವಿಲ್ಲ. ಆದರೆ ಆಪಾದನೆ ಬಂದಾಗ ಅದರಿಂದ ಹೊರಬೇಕಿರುವುದು ಅವರ ಕೆಲಸ. ತನಿಖೆ ಮಾಡಿರುವುದು ಎಸ್‌ಐಟಿ. ಪ್ರಿಯಾಂಕ್ ಖರ್ಗೆ ಪಾತ್ರ ಇದೆ ಅಥವಾ ಇಲ್ಲವೆಂದು ನಾನು ಹೇಗೆ ಹೇಳಲಿ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಸಚಿವ ಎನ್.ಮಹೇಶ್, ಬಿಜೆಪಿ ಗ್ರಾಮಾಂತರ ಅಧ್ಯಕ್ಷ ಕುಂಬ್ರಳ್ಳಿ ಸುಬ್ಬಣ್ಣ, ನಗರಾಧ್ಯಕ್ಷ ಎಲ್.ನಾಗೇಂದ್ರ, ಮಾಜಿ ಮೇಯರ್ ಶಿವಕುಮಾರ್, ಮಾಜಿ ಉಪಮೇಯರ್ ವಿ.ಶೈಲೇಂದ್ರ, ಪಾಲಿಕೆ ಮಾಜಿ ಸದಸ್ಯೆ ಡಾ.ಅಶ್ವಿನಿ ಶರತ್, ಮುಖಂಡರಾದ ಮಹದೇವಯ್ಯ, ಮಹೇಶರಾಜೇ ಅರಸ್, ಬಿ.ಎಂ.ರಘು ಗೋಷ್ಠಿಯಲ್ಲಿದ್ದರು.

ಸರ್ಕಾರ ಫೇಲ್!


ಮುಂದುವರೆಸಿ, ಬೇಕಿದ್ದರೆ 2026–27ನೇ ಸಾಲಿಗೆ ಪರೀಕ್ಷಾ ವೇಳಾಪಟ್ಟಿ ಪ್ರಕಟಕ್ಕೂ ಮುನ್ನವೇ ನಿಯಮಗಳನ್ನು ಜಾರಿಗೆ ತನ್ನಿ ಎಂದು ನ್ಯಾಯಪೀಠ ಸೂಚಿಸಿತು.

ಸರ್ಕಾರದ ಪರ ವಾದ ಮಂಡಿಸಿದ ಅಡ್ವೋಕೇಟ್ ಜನರಲ್ ಶಶಿಕಿರಣ ಶೆಟ್ಟಿ, ವಿಭಾಗೀಯ ಪೀಠದ ಮುಂದೆ ಸಲ್ಲಿಸಿದ್ದ ಪಿಐಎಲ್ ವಜಾಗೊಂಡಿದೆ. ಹಿಂದಿ ಭಾಷೆಯಲ್ಲಿ ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಅನುತ್ತೀರ್ಣಗೊಂಡಿದ್ದಾರೆ. ಇದರಿಂದ ವಿದ್ಯಾರ್ಥಿಗಳ ಮೇಲಿನ ಒತ್ತಡ ಕಡಿಮೆ ಮಾಡಲು ಸೂಕ್ತ ತಿದ್ದುಪಡಿಯೊಂದಿಗೆ ನಿಯಮ ರೂಪಿಸಲು ಸರ್ಕಾರ ಕರಡು ಸಿದ್ಧಪಡಿಸಿ ಅಂಕಗಳ ಬದಲು ಗ್ರೇಡ್ ನೀಡಲಾಗುತ್ತಿದೆ ಎಂದು ವಾದ ಮಂಡಿಸಿದರು.

ಮಧ್ಯ ಪ್ರವೇಶಿಸಿದ ಪೀಠ, ಪರೀಕ್ಷೆ ಅಧಿಸೂಚನೆ ಹೊರಡುವುದಕ್ಕೂ ಮುನ್ನವೇ ಗ್ರೇಡ್ ಪದ್ಧತಿ ಜಾರಿಗೊಳಿಸಬೇಕಿತ್ತು. ಈಗ ಅನುಷ್ಠಾನ ಮಾಡುತ್ತಿದ್ದೀರಿ. ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇಕಡಾ 83ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ನೀವು ಎಲ್ಲರನ್ನೂ ಪಾಸ್ ಮಾಡಬೇಕೆಂದಿದ್ದರೆ, ಪರೀಕ್ಷೆಯನ್ನೇ ರದ್ದು ಮಾಡಿ ಎಂದು ಪೀಠ ಸಲಹೆ ನೀಡಿತು. ಸೂಕ್ತ ನಿಯಮಗಳನ್ನು ಮುಂದಿನ ಸಾಲಿಗೆ ತಂದು ಅಂಕದ ಬದಲಿಗೆ ಗ್ರೇಡ್ ನೀಡಿ ಅಲ್ಲಿಯವರೆಗೆ ಯಥಾಸ್ಥಿತಿ ಮುಂದುವರೆಸುವಂತೆ ಸೂಚಿಸಿ, ಅರ್ಜಿ ಇತ್ಯರ್ಥಗೊಳಿಸಲಾಯಿತು.

ಮಾಟ–ಮಂತ್ರದಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಮೌನವಾಗಿದ್ದಾರಾ...!

ಬೆಂಗಳೂರು, ಏ.21–ರಾಜ್ಯ ರಾಜಕೀಯದಲ್ಲಿ ಮಾಟ, ಮಂತ್ರ ಸದ್ದು ಮಾಡುತ್ತಿದೆ. ಕಾಂಗ್ರೆಸ್‌ನಲ್ಲಿ ನಡೆಯುತ್ತಿರುವ ಬೆಳವಣಿಗೆಯ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ



ಸಿದ್ದರಾಮಯ್ಯ ಅವರ ಮೇಲೆ ಮಾಟ ಮಂತ್ರ ಪ್ರಯೋಗ ಆಗಿರಬಹುದು ಎಂದು ಮಾಜಿ ಸಚಿವ ಕೆ ಎನ್ ರಾಜಣ್ಣ ಸಂಶಯ ವ್ಯಕ್ತಪಡಿಸಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಸೈಲೆಂಟ್ ಆಗಿದ್ದಾರೆ ಎನ್ನುವ ವಿಚಾರದ ಬಗ್ಗೆ ಮಾತನಾಡಿರುವ ಮಾಜಿ ಸಚಿವ ಕೆ.ಎನ್.ರಾಜಣ್ಣ ಸಿದ್ದರಾಮಯ್ಯ ಮೇಲೆ ಮಾಟ ಮಂತ್ರ ಆಗಿರಬಹುದು ಎಂದಿದ್ದಾರೆ.

ಇಂದು (ಏ.21) ಬೆಂಗಳೂರಿನಲ್ಲಿ ಮಾತನಾಡಿದ ರಾಜಣ್ಣ, ನನ್ನ ಅನುಭವದ ಪ್ರಕಾರ ನಾನು ಸಿಎಂ ಅಸಹಾಯಕರಾಗಿದ್ದಾರೆ ಎಂದು ಹೇಳಿದ್ದೇನೆ. ಸಿಎಂ ಇಷ್ಟೊಂದು ಅಸಹಾಯಕರಾಗಿದ್ದಾರೆ ಅನ್ನೋದನ್ನ ನೋಡಿದರೆ ಅವರ ಮೇಲೆ ಯಾರಾದರೂ ಮಾಟ–ಮಂತ್ರ ಮಾಡಿದ್ದಾರೋ ಏನೋ ಅನ್ನಿಸುತ್ತಿದೆ. ಆ ಬಗ್ಗೆ ನಾನು ವಿಚಾರ ಮಾಡುತ್ತಿದ್ದೇನೆ. ಅದರ ಬಗ್ಗೆ ತನಿಖೆ ಮಾಡಿಸುತ್ತಿದ್ದೇನೆ. ಮನುಷ್ಯರ ಮೇಲೆ ಪರಿಣಾಮ ಆಗಬೇಕು ಅಂದ್ರೆ ಅವರು ಆಸ್ತಿಕರಾಗಿರಬೇಕು ಅಂತ ಇಲ್ಲ. ಸಿಎಂ ಹಾಗೂ ನಾನು ಮಾಟ ಮಂತ್ರದಲ್ಲಿ ನಂಬಿಕೆ ಇಲ್ಲದವರು. ನಾನು ಸಿಎಂ ಅವರು ಅಸಹಾಯಕರು ಅಂತಾ ಹೇಳಿದ ಮೇಲೆ ಅವರು ಕರೆದು ಮಾತನಾಡಿದ್ದಾರೆ. ಗಟ್ಟಿಯಾಗಿ ನಿಲ್ಲಿ ಅಂತ ಹೇಳಿಸಿಕೊಳ್ಳುವಷ್ಟು ಅಸಹಾಯಕತೆ ಸಿಎಂಗೆ ಬಂದಿಲ್ಲ ಎಂದು ಹೇಳಿದರು.

ನಾಳೆ, ನಾಡಿದ್ದು ಜೆನರಿಕ್ ಔಷಧಿ, ವಿಜ್ಞಾನ–ತಂತ್ರಜ್ಞಾನ ಸಂಬಂಧ ಕಾರ್ಯಾಗಾರ

ಮೈಸೂರು,ಏ.21(ಜಿಎ)–ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ವತಿಯಿಂದ ಏ.23 ಮತ್ತು 24ರಂದು ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ರಾಜೇಂದ್ರ ಸಭಾಂಗಣದಲ್ಲಿ 'ಜೆನರಿಕ್ ಔಷಧಿ, ವಿಜ್ಞಾನ, ತಂತ್ರಜ್ಞಾನಕ್ಕೆ ಸಂಬಂಧಿಸಿದ ಎರಡು ದಿನಗಳ ಕಾರ್ಯಾಗಾರ ಆಯೋಜಿಸಲಾಗಿದೆ ಎಂದು ಜೆಎಸ್‌ಎಸ್ ಫಾರ್ಮಸಿ ಕಾಲೇಜು ಪ್ರಾಚಾರ್ಯ ಡಾ.ಟಿ.ಎಂ.ಪ್ರಮೋದ್ ಕುಮಾರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಏ.23ರಂದು ಬೆಳಗ್ಗೆ 10ಗಂಟೆಗೆ ಕಾರ್ಯಾಗಾರಕ್ಕೆ ಚಾಲನೆ ದೊರೆಯಲಿದ್ದು, ಜೆಎಸ್‌ಎಸ್ ಕಾರ್ಯಕಾರಿ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರಮಠ್ ಸಮಾರಂಭದ ಅಧ್ಯಕ್ಷತೆ ವಹಿಸುವರು. ರಿಲಯನ್ಸ್ ಲೈಫ್ ಸೈನ್ಸಸ್ ಪ್ರೈವೇಟ್ ಲಿಮಿಟೆಡ್‌ನ ರೆಗ್ಯುಲೇಟರಿ ಅಫೇರ್ಸ್‌ನ ಉಪಾಧ್ಯಕ್ಷ ಮತ್ತು ಗ್ರೂಪ್ ಹೆಡ್ ಡಾ.ಬಾಬಿ ಜಾರ್ಜ್, ಡಾ.ಬಿ. ಸುರೇಶ್, ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ ಉಪಕುಲಪತಿ ಡಾ.ಹೆಚ್. ಬಸವನಗೌಡಪ್ಪ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ.

ಇದು ಅಂತಾರಾಷ್ಟ್ರೀಯ ಕಾರ್ಯಾಗಾರ ಆಗಿದ್ದು, ಶಿಕ್ಷಣ ತಜ್ಞರು, ಸಂಶೋಧಕರು, ನಿಯಂತ್ರಕ ಅಧಿಕಾರಿಗಳು,, ಉದ್ಯಮ ವೃತ್ತಿಪರರು ಮತ್ತು ನೀತಿ ನಿರೂಪಕರಿಗೆ ಜೆನರಿಕ್ ಔಷಧಿ ಅಭಿವೃದ್ಧಿಯ ವೈಜ್ಞಾನಿಕ, ತಾಂತ್ರಿಕ, ನಿಯಂತ್ರಕ ಮತ್ತು ಸಾಮಾಜಿಕ– ಆರ್ಥಿಕ ಅಂಶಗಳ ಕುರಿತು ಮಾಹಿತಿ ವಿನಿಮಯ ನಡೆಯಲಿದೆ. ಈ ವೇಳೆ ಚರ್ಚೆ, ತಜ್ಞರ ಉಪನ್ಯಾಸ, ಸಂವಾದಗಳು ಇರಲಿವೆ. ಸುಮಾರು 300 ಮಂದಿ ಪಾಲ್ಗೊಳ್ಳಲಿದ್ದಾರೆ. 50ಕ್ಕೂ ಹೆಚ್ಚು ಮಂದಿ ತಜ್ಞರು ವಿವಿಧೆಡೆಯಿಂದ ಆಗಮಿಸಿ ಅರಿವು ಮೂಡಿಸಲಿದ್ದಾರೆ ಎಂದರು. ಗೋಷ್ಠಿಯಲ್ಲಿ ಡೀನ್ ಡಾ.ವಿಶಾಲ್‌ಕುಮಾರ್ ಗುಪ್ತಾ ಇದ್ದರು.

ಗಾಂಜಾ ಮಾರಾಟ; ಆರೋಪಿಗೆ ಎರಡು ವರ್ಷ ಜೈಲು ಶಿಕ್ಷೆ



ಮೈಸೂರು,ಏ.21(ಎಂಕೆ)–ಗಾಂಜಾ ಮಾರಾಟ ಮಾಡುತ್ತಿದ್ದ ಆರೋಪಿಗೆ 2 ವರ್ಷ ಕಠಿಣ ಶಿಕ್ಷೆ ಹಾಗೂ 20 ಸಾವಿರ ರೂ. ದಂಡ ವಿಧಿಸಿ ಮೈಸೂರಿನ 7ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಆದೇಶಿಸಿದೆ.

ಹುಣಸೂರಿನ ಕಲ್ಕುಣಿಕೆ ಸರ್ಕಲ್ ಸಮೀಪದ ಶನಿಮಹಾತ್ಮ ದೇವಸ್ಥಾನದ ಬಳಿಯ ಬಸ್ ನಿಲ್ದಾಣದ ಪಕ್ಕ(ಕೆ.ಆರ್.ನಗರ ಮುಖ್ಯರಸ್ತೆ ಜಂಕ್ಷನ್)ದಲ್ಲಿ ಗಾಂಜಾ ಮಾರಾಟ ಮಾಡುತ್ತಿದ್ದ ಕೆ.ಎಂ.ರವಿ ಶಿಕ್ಷೆಗೆ ಗುರಿಯಾದ ಆರೋಪಿ.

2024ರ ಜು.17ರಂದು ಸಂಜೆ 7.15ರ ಸುಮಾರಿಗೆ ಕಟ್ಟೆಮಳಲವಾಡಿ ಕಡೆಯಿಂದ ಕೈಯ್ಯಲ್ಲಿ ಪ್ಲಾಸ್ಟಿಕ್ ಚೀಲ ಹಿಡಿದುಕೊಂಡು ಬಸ್ ನಿಲ್ದಾಣದ ಕಡೆಗೆ ಬರುತ್ತಿದ್ದ ಆರೋಪಿಯನ್ನು ಬಂಧಿಸಿದ ಜಿಲ್ಲಾ ಸೆನ್ (ಸಿಇಎನ್) ಠಾಣೆ ಪೊಲೀಸರು, ಪ್ಲಾಸ್ಟಿಕ್ ಚೀಲವನ್ನು ಪರಿಶೀಲಿಸಿದಾಗ ಅದರಲ್ಲಿ ಗಾಂಜಾ ಸೊಪ್ಪು ಇರುವುದು ದೃಢಪಟ್ಟಿದೆ.

ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ವಿಚಾರಣೆ ನಡೆಸಿದ ತನಿಖಾಧಿಕಾರಿ ಲಮಾಣಿ ಸುಷ್ಮಾ, ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ ಮೈಸೂರಿನ 7ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಎಂ.ರಮೇಶ, ಆರೋಪಿಗೆ ಎನ್‌ಡಿಪಿಎಸ್ ಕಾಯ್ದೆಯಡಿಯ ಅಪರಾಧಕ್ಕೆ 2 ವರ್ಷ ಕಠಿಣ ಶಿಕ್ಷೆ ಹಾಗೂ 20 ಸಾವಿರ ರೂ. ದಂಡ ವಿಧಿಸಿ ಆದೇಶಿಸಿದ್ದಾರೆ. ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕರಾದ ಎನ್.ಬಿ.ವಿಜಯಲಕ್ಷ್ಮಿ ವಾದ ಮಂಡಿಸಿದ್ದಾರೆ.

ಮೈಸೂರು ಸಿಲ್ಕ್ ಖರೀದಿಗೆ ಪ್ರಭಾವಿಗಳಿಗೆ ರಹಸ್ಯ ಮಾರ್ಗ!

● ಇನ್ನು ಬಡ, ಮಧ್ಯಮ ವರ್ಗದ ಮಹಿಳೆಯರಿಗೆ ಸೀರೆ ಬೇಕೆಂದರೆ ಮುಂಜಾನೆಯೇ ಸರದಿ ಸಾಲಿನಲ್ಲಿ ನಿಲ್ಲಬೇಕು! ● ಸಿಕ್ಕಿದರೇ ಅವರ ಅದೃಷ್ಟವೇ ಸರಿ!!





ಮುಂಜಾನೆಯಿಂದಲೇ ಕೆಎಸ್‌ಐಸಿ ಶೋರೂಂ ಹೊರಗೆ ಜನ ಸಾಲುಗಟ್ಟಿ ನಿಂತಿರುವುದು. ಶತಮಾನೋತ್ಸವ ಕಟ್ಟಡದ ಒಳಗೆ ರಹಸ್ಯ ಸೀರೆ ಪಿಕ್ ಅಪ್ ಕೌಂಟರ್ (ಬಲಚಿತ್ರ)

ಮೈಸೂರು, ಏ.21(ಬಿಎಲ್‌ಯು)– ಮೈಸೂರಿನ ಮಾನಂದವಾಡಿ ರಸ್ತೆಯ ಕೆಎಸ್‌ಐಸಿ ಶೋ ರೂಂನಲ್ಲಿ ಪ್ರತಿಷ್ಠಿತ ಮೈಸೂರು ಸಿಲ್ಕ್ ಸೀರೆ ಖರೀದಿಗಾಗಿ ಮಹಿಳೆಯರು ಮುಂಜಾನೆ 5 ಗಂಟೆಯಿಂದಲೇ ಚಾತಕ ಪಕ್ಷಿಯಂತೆ ಪ್ರತಿನಿತ್ಯ ಸರದಿ ಸಾಲಿನಲ್ಲಿ ಕಾಯುತ್ತಿದ್ದಾರೆ. ಆದರೆ, ವಿಐಪಿ ಕೌಂಟರ್‌ನಲ್ಲಿ ಪ್ರಭಾವಿಗಳಿಗೆ ನೇರಾನೇರ ಮೈಸೂರು ಸಿಲ್ಕ್ ಸೀರೆಗಳನ್ನು ಮಾರಾಟ ಮಾಡಲಾಗುತ್ತಿದೆ.

ಬಡ ಹಾಗೂ ಮಧ್ಯಮ ವರ್ಗದ ಮಹಿಳೆಯರ ಬದುಕು ದುಸ್ತರವಾಗಿದೆ. ಏನೇ ಪಡೆಯಬೇಕೆಂದರೂ ಹೆಣಗಾಟ. ಹಣ ಕೊಡುತ್ತೇವೆ ಎಂದರೂ ಕೆಲವು ವಸ್ತುಗಳನ್ನು ಪಡೆಯುವುದು ಪ್ರಯಾಸದ ಕೆಲಸ. ಆದರೆ ಪ್ರಭಾವಿಗಳಿಗೆ ಮಾತ್ರ ಎಲ್ಲವೂ ಸರಾಗ. ಮೈಸೂರಿನ ಕೆಎಸ್‌ಐಸಿಯಲ್ಲಿ ಮೈಸೂರು ಸಿಲ್ಕ್ ಸೀರೆ ಮಾರಾಟದಲ್ಲಿ ತೋರುತ್ತಿರುವ ತಾರತಮ್ಯವೇ ಇದಕ್ಕೆ ಸ್ಪಷ್ಟ ನಿದರ್ಶನ.

ಪ್ರತಿಷ್ಠಿತ ಕಂಪನಿಗಳ ನೂತನ ವಿನ್ಯಾಸದ ತರೇವಾರಿ ಸೀರೆಗಳು ಮಾರುಕಟ್ಟೆಗೆ ಲಗ್ಗೆ ಇಟ್ಟಿವೆ. ಆದರೆ, ವನಿತೆಯರ ಅಚ್ಚುಮೆಚ್ಚಿನ ಸೀರೆ ಅದು ಮೈಸೂರು ಸಿಲ್ಕ್ ಸೀರೆ ಮಾತ್ರ. ಈ ಸೀರೆ ಧರಿಸುವುದು ಅಂದರೆ ಒಂದು ರೀತಿಯ ಗೌರವ, ಅದು ಪ್ರತಿಷ್ಠೆಯ ಸಂಗತಿಯಾಗಿದೆ. ಈ ಕಾರಣದಿಂದಲೇ ಮೈಸೂರು ಸಿಲ್ಕ್ ಸೀರೆ ದೇಶ–ವಿದೇಶಗಳಲ್ಲಿ ಪ್ರಖ್ಯಾತಿಗಳಿಸಿದೆ.

ಮೃದುತ್ವ, ಹಗುರ, ಹೊಳಪು, ಶುದ್ಧ ರೇಷ್ಮೆ, ನೈಜ ಚಿನ್ನ ಮತ್ತು ಬೆಳ್ಳಿಯ ಜರಿ ಮಿಶ್ರಣ, ಗಾಢ ಬಣ್ಣ ಹಾಗೂ ಕಾಂಟ್ರಾಸ್ಟ್ ಬಾರ್ಡರ್ ಮೈಸೂರು ಸಿಲ್ಕ್ ಸೀರೆಯ ಮೆರಗಿನ ವೈಶಿಷ್ಟ್ಯತೆಯಾಗಿದೆ. ಪ್ರೀಮಿಯಂ ಗುಣಮಟ್ಟದ ಕಸೂತಿ ಕಲೆಯ ಮೈಸೂರು ಸಿಲ್ಕ್ ಸೀರೆ ಬೆಲೆ 10 ಸಾವಿರದಿಂದ 3 ಲಕ್ಷ ರೂಪಾಯಿವರೆಗೆ ಇದೆ.

ಮದುವೆ, ಆರತಕ್ಷತೆ, ವಿವಾಹ ನಿಶ್ಚಯ, ಗೃಹ ಪ್ರವೇಶ, ನಾಮಕರಣ ಹೀಗೆ ಯಾವುದೇ ಶುಭ ಸಮಾರಂಭಗಳಲ್ಲಿ ಮೈಸೂರು ಸಿಲ್ಕ್ ಸೀರೆ ಧರಿಸುವುದು ಸಂಪ್ರದಾಯ. ಈ ಹಿನ್ನೆಲೆಯಲ್ಲಿ ಮಹಿಳೆಯರು ಮೈಸೂರು ಸಿಲ್ಕ್ ಸೀರೆಗಾಗಿ ದುಂಬಾಲು ಬೀಳುತ್ತಾರೆ. ಮೈಸೂರು ಮಾತ್ರವಲ್ಲದೆ ದೇಶ–ವಿದೇಶಗಳ ವನಿತೆಯರು ಮೈಸೂರು ಸಿಲ್ಕ್ ಸೀರೆಗಾಗಿ ಚಡಪಡಿಸುತ್ತಾರೆ.

ಹೀಗಾಗಿಯೇ ಮೈಸೂರಿನ ಮಾನಂದವಾಡಿ ರಸ್ತೆಯ ಕೆಎಸ್‌ಐಸಿ ಶೋರೂಂ ಮುಂದೆ ಮಹಿಳೆಯರು ಮೈಸೂರು ಸಿಲ್ಕ್ ಸೀರೆ ಖರೀದಿಗಾಗಿ ಪ್ರತಿ ದಿನ ಮುಂಜಾನೆ 5 ಗಂಟೆಗೆ ಸರದಿ ಸಾಲಿನಲ್ಲಿ ನಿಲ್ಲುತ್ತಿದ್ದಾರೆ. ಶೋ ರೂಂ ಬಾಗಿಲು ತೆರೆಯುವುದು 10 ಗಂಟೆಗಾದರೂ 4 ಗಂಟೆ ಮುಂಚಿತವಾಗಿಯೇ ಕ್ಯೂನಲ್ಲಿ ನಿಲ್ಲುತ್ತಾರೆ.

ಇಷ್ಟೆಲ್ಲಾ ಪ್ರಯಾಸಪಟ್ಟು, ಶೋರೂಂ ಒಳಗೆ ಹೋದರೆ ಮನಸ್ಸಿಗೆ ಇಷ್ಟವಾಗುವ ಸೀರೆ ಸಿಗುವುದಿಲ್ಲ. ಒಂದು ತಂಡದಲ್ಲಿ 10 ಮಹಿಳೆಯರನ್ನು ಒಳಗೆ ಕಳುಹಿಸುತ್ತಾರೆ. ಅಲ್ಲಿರುವ ಹತ್ತು ಸೀರೆಗಳಲ್ಲಿ ಒಂದನ್ನು ಮಾತ್ರ ಆಯ್ಕೆ ಮಾಡಿಕೊಳ್ಳಬೇಕು. 10 ಮಹಿಳೆಯರಿಗೆ 10 ಸೀರೆ ಮುಗಿದ ನಂತರ, ಮತ್ತೆ 10 ಮಹಿಳೆಯರ ಮತ್ತೊಂದು ತಂಡವನ್ನು ಒಳಗೆ ಬಿಡುತ್ತಾರೆ. ಹೀಗೆ ಕೇವಲ ಒಂದೆರಡು ಗಂಟೆಯೊಳಗೆ ಎಲ್ಲಾ ಸೀರೆ ಖಾಲಿ... ಖಾಲಿ...

ಮೈಸೂರಿನ ಕೆಎಸ್‌ಐಸಿಯಲ್ಲಿ ಒಂದು ದಿನಕ್ಕೆ 300 ಸೀರೆಗಳು ಮಾತ್ರ ತಯಾರಾಗುತ್ತದೆ. ಇದರಲ್ಲಿ 250 ಸೀರೆಗಳನ್ನು ಶೋರೂಂ ಮಾರಾಟಕ್ಕೆ ನೀಡಲಾಗುತ್ತದೆ. ಉಳಿದ 50 ಸೀರೆಗಳನ್ನು ವಿಐಪಿಗಳಿಗೆ ಮೀಸಲಿಡಲಾಗಿದೆ. ಕೆಎಸ್‌ಐಸಿಯ ಶತಮಾನೋತ್ಸವ ಭವನದಲ್ಲಿ ರಹಸ್ಯ ವಿಐಪಿ ಕೌಂಟರ್ ತೆರೆಯಲಾಗಿದೆ. ಮಧ್ಯಾಹ್ನ 3 ಗಂಟೆ ನಂತರ ಈ ವಿಐಪಿ ಕೌಂಟರ್ ತೆರೆಯಲಿದ್ದು, ಅಲ್ಲಿ ಹೋದ ಪ್ರಭಾವಿ ಗಳಿಗೆ ಕಣ್ಣಿಗೆ ಬೇಕಾದ, ಮನಸ್ಸಿಗೆ ಇಷ್ಟವಾದ ಸೀರೆ ಖರೀದಿಗೆ ಪೂರ್ಣ ಸ್ವಾತಂತ್ರ್ಯವಿರುತ್ತದೆ.

ವಿಐಪಿ ಕೌಂಟರ್‌ಗೆ ಹೋಗಲು ನೇರ ಪ್ರವೇಶಾತಿ ಇಲ್ಲ. ಆ ಜಾಗ ತಲುಪಲು ಸ್ಥಳೀಯ ಅಧಿಕಾರಿಗಳ ಅನುಮತಿ ಬೇಕು. ಸಾಮಾನ್ಯರಿಗೆ ವಿಐಪಿ ಕೌಂಟರ್ ಎಲ್ಲಿದೆ ಎಂಬ ಮಾಹಿತಿ ಕೂಡ ಲಭ್ಯವಿಲ್ಲ. ಬೆಂಗಳೂರಿನಲ್ಲಿರುವ ಕೆಎಸ್‌ಐಸಿ ಜನರಲ್ ಮ್ಯಾನೇಜರ್ ಅನುಮತಿ ಪಡೆದವರಿಗೆ ಮಾತ್ರ ವಿಐಪಿ ಕೌಂಟರ್‌ಗೆ ಪ್ರವೇಶಾವಕಾಶ!

ಮಂತ್ರಿಗಳು, ಶಾಸಕರು, ಐಎಎಸ್, ಐಪಿಎಸ್, ಐಎಫ್‌ಎಸ್ ಅಧಿಕಾರಿಗಳ ಶಿಫಾರಸ್ಸು ಇದ್ದವರಿಗೆ ಮಾತ್ರ ಕೆಎಸ್‌ಐಸಿ ಜನರಲ್ ಮ್ಯಾನೇಜರ್ ಅನುಮತಿ ಸಾಧ್ಯ. ಹೀಗೆ ಪ್ರಭಾವಿಗಳ ಶಿಫಾರಸ್ಸು ಹೊತ್ತು ತರುವ ವಿಐಪಿಗಳಿಗೆ ಜನರಲ್ ಮ್ಯಾನೇಜರ್, ಮೈಸೂರಿನ ಕೆಎಸ್‌ಐಸಿಯ ವಿಐಪಿ ಕೌಂಟರ್‌ಗೆ ಹೋಗಲು ರಹದಾರಿ ನೀಡುತ್ತಾರೆ.

ಪ್ರತಿ ದಿನ ತಯಾರಾಗುವ ಸೀರೆಗಳಲ್ಲಿ ಕನಿಷ್ಟ 10 ಮೈಸೂರು ಸಿಲ್ಕ್ ಸೀರೆಗಳನ್ನು ಸಂಗ್ರಹಿಸಿಟ್ಟು ಪ್ರತಿ ಬುಧವಾರ ಹಾಗೂ ಶುಕ್ರವಾರ ಬೆಂಗಳೂರಿನ ಕೆಎಸ್‌ಐಸಿ ಜನರಲ್ ಮ್ಯಾನೇಜರ್ ಕಚೇರಿಗೆ ಕಳುಹಿಸುತ್ತಾರೆ. ಅಲ್ಲಿಂದ ಬೆಂಗಳೂರಿನ ವಿವಿಧ ಶೋ ರೂಂಗಳಿಗೆ ರವಾನೆಯಾಗುತ್ತವೆ. ಅಲ್ಲಿ ಸಿಗುವ ಬಹುತೇಕ ಸೀರೆಗಳು ಕೂಡ ವಿಐಪಿಗಳ ಪಾಲಾಗುತ್ತವೆಯಂತೆ.

ವಿಐಪಿಗಳು ಯಾವುದೇ ಪ್ರಯಾಸವಿಲ್ಲದೆ ಮಧ್ಯಾಹ್ನ 3 ಗಂಟೆಗೆ ಹೋಗಿ ಕಣ್ಣಿಗೆ ಬೇಕಾದ ಸೀರೆಯನ್ನು ಖರೀದಿ ಮಾಡುತ್ತಾರೆ. ಆದರೆ ಬಡ ಹಾಗೂ ಮಧ್ಯಮ ವರ್ಗದವರು ಮುಂಜಾನೆ 5 ಗಂಟೆಯಿಂದ ಹೋಗಿ ಸಂಜೆ 4 ಗಂಟೆವರೆಗೆ ಕಾದರೂ ಇಷ್ಟವಾಗುವ ಸೀರೆ ಸಿಗಲ್ಲ. ಇದು ಸಮಾನತೆ ಸಾರುವ ಪ್ರಜಾಪ್ರಭುತ್ವದ ವಿಡಂಬನಾತ್ಮಕತೆಗೆ ಹಿಡಿದ ಕೈಗನ್ನಡಿಯಲ್ಲವೇ.!

ಪ್ರತಿದಿನ ವಿಐಪಿ ಕೌಂಟರ್ ತೆರೆಯುತ್ತೆ

ಕೆಎಸ್‌ಐಸಿ ವ್ಯವಸ್ಥಾಪಕ ಬಿ.ಎ.ವಿನಯ್ ಅವರು ವಿಐಪಿ ಕೌಂಟರ್ ಮುಚ್ಚಿದ್ದೇವೆ ಎಂದು ಸಮಜಾಯಿಷಿ ನೀಡುತ್ತಿದ್ದಾರೆ. ವಾಸ್ತವವಾಗಿ ವಿಐಪಿ ಕೌಂಟರ್ ಮುಚ್ಚಿಲ್ಲ. ಪ್ರತಿದಿನ ಮಧ್ಯಾಹ್ನ 3 ಗಂಟೆ ನಂತರ ಕೌಂಟರ್ ತೆರೆಯುತ್ತದೆ. ಬೆಂಗಳೂರು ಸೇರಿದಂತೆ ಇತರೆಡೆಯಿಂದ ಬರುವ ವಿಐಪಿಗಳು ಈ ವಿಐಪಿ ಕೌಂಟರ್‌ನಲ್ಲಿ ಸುಲಭವಾಗಿ ಮೈಸೂರು ಸಿಲ್ಕ್ ಸೀರೆ ಖರೀದಿ ಮಾಡುತ್ತಿದ್ದಾರೆ.

> "ಮೈಸೂರಿನ ಮಾನಂದವಾಡಿ ರಸ್ತೆಯ ಕೆಎಸ್‌ಐಸಿಯಲ್ಲಿ ವಿಐಪಿ ಕೌಂಟರ್ ತೆರೆಯಲಾಗಿತ್ತು. ಆದರೆ ಅದನ್ನು ಈಗ ಮುಚ್ಚಲಾಗಿದೆ. ಈ ಕೌಂಟರ್‌ನಿಂದ ಅಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ತೊಂದರೆ ಆಗಲಿದೆ ಎಂಬ ಕಾರಣಕ್ಕೆ ಮುಚ್ಚಿದ್ದೇವೆ.
> –ಬಿ.ಎ.ವಿನಯ್, ವ್ಯವಸ್ಥಾಪಕರು (ಹಣಕಾಸು ಮತ್ತು ಲೆಕ್ಕ) ಕೆಎಸ್‌ಐಸಿ

ಕಾರ್ಮಿಕರ ಮೇಲೆ ದಮನಕಾರಿ ನೀತಿ ಖಂಡಿಸಿ ಮೈಸೂರಲ್ಲಿ ಕಾರ್ಮಿಕ ಸಂಘಟನೆಯಿಂದ ಪ್ರತಿಭಟನೆ



ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿ ಎದುರು ಎಐಯುಟಿಯುಸಿ ವತಿಯಿಂದ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು,ಏ.21(ಎಂಕೆ)– ನೋಯ್ಡಾ ಮತ್ತು ಗುರುಗ್ರಾಮದ ಕಾರ್ಮಿಕರ ಹೋರಾಟಕ್ಕೆ ಬೆಂಬಲ ಹಾಗೂ ಕಾರ್ಮಿಕರ ಮೇಲಿನ ದೌರ್ಜನ್ಯ ಖಂಡಿಸಿ ಆಲ್ ಇಂಡಿಯಾ ಯುನೈಟೆಡ್ ಟ್ರೇಡ್ ಯೂನಿಯನ್ ಸೆಂಟರ್ (ಎಐಯುಟಿಯುಸಿ) ವತಿಯಿಂದ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ನೋಯ್ಡಾ, ಗ್ರೇಟರ್ ನೋಯ್ಡಾ, ಗುರುಗ್ರಾಮ ಹಾಗೂ ಸಂಪೂರ್ಣ ಎನ್‌ಸಿಆರ್ (ರಾಷ್ಟ್ರ ರಾಜಧಾನಿ ಪ್ರದೇಶ) ಪ್ರದೇಶದಲ್ಲಿ ನಡೆಯುತ್ತಿರುವ ಕಾರ್ಮಿಕರ ಮೇಲಿನ ದಮನ ನೀತಿ ಖಂಡಿಸಿ, ಇಂತಹ ಕಾರ್ಮಿಕರ ಹೋರಾಟಕ್ಕೆ ಬೆಂಬಲ ಸೂಚಿಸಿದರಲ್ಲದೆ ಕಾರ್ಮಿಕರ ಮೇಲಿನ ಎಲ್ಲಾ ರೀತಿಯ ದಮನಕಾರಿ ಕ್ರಮಗಳನ್ನು ತಕ್ಷಣ ನಿಲ್ಲಿಸಬೇಕು. ಬಂಧಿತ ಎಲ್ಲಾ ಕಾರ್ಮಿಕರನ್ನು ತಕ್ಷಣ ಬಿಡುಗಡೆ ಮಾಡಬೇಕು. ಗಾಯಗೊಂಡ ಕಾರ್ಮಿಕರಿಗೆ ಸಮರ್ಪಕ ಪರಿಹಾರ ನೀಡಬೇಕು. ಕಾರ್ಮಿಕರ ಎಲ್ಲಾ ನ್ಯಾಯಸಮ್ಮತ ಬೇಡಿಕೆಗಳನ್ನು ತಕ್ಷಣ ಪೂರೈಸಬೇಕು ಹಾಗೂ ರಾಜ್ಯದಲ್ಲೂ ಕನಿಷ್ಠ ವೇತನ ಜಾರಿಯಾಗಬೇಕು ಎಂದು ಆಗ್ರಹಿಸಿದರು.

ಎಐಯುಟಿಯುಸಿ ಜಿಲ್ಲಾ ಅಧ್ಯಕ್ಷ ಯಶೋಧರ್ ಮಾತನಾಡಿ, ನೋಯ್ಡಾ ಫೇಸ್–2 ಪ್ರದೇಶದ ಸುಮಾರು 50 ಸಾವಿರ ಕಾರ್ಮಿಕರು ನ್ಯಾಯಸಮ್ಮತ ಹಕ್ಕುಗಳಿಗಾಗಿ ಏ.9 ರಿಂದ ಹೋರಾಟ ನಡೆಸುತ್ತಿದ್ದು, ಹೋರಾಟವು ಹರಿಯಾಣ, ರಾಜಸ್ತಾನ, ಗುಜರಾತ್, ಬಿಹಾರ ಸೇರಿದಂತೆ ದೇಶದ ಹಲವಾರು ಕೈಗಾರಿಕಾ ಕೇಂದ್ರಗಳಿಗೆ ವ್ಯಾಪಿಸಿದೆ. ವೇತನ ಹೆಚ್ಚಳ, ವಾರದ ರಜೆ, ಇಎಸ್‌ಐ, ಪಿಎಫ್, ಬೋನಸ್, ಉದ್ಯೋಗ ಭದ್ರತೆ, ಸುರಕ್ಷತಾ ಸೌಲಭ್ಯಗಳು ಹಾಗೂ ಗುತ್ತಿಗೆ ಕಾರ್ಮಿಕರ ಖಾಯಂ ಸೇರಿದಂತೆ ತಮ್ಮ ಮೂಲಭೂತ ಹಕ್ಕುಗಳಿಗಾಗಿ ಹೋರಾಟ ನಡೆಸುತ್ತಿದ್ದಾರೆ ಎಂದರು.

ಹಾಗೆಯೇ ಕಾರ್ಮಿಕರ ಹಕ್ಕುಗಳನ್ನು ಕುಂಠಿತಗೊಳಿಸುವ ನಾಲ್ಕು ಕಾರ್ಮಿಕ ಸಂಹಿತೆಗಳ ವಿರುದ್ಧವೂ ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ. ಈ ಹಿನ್ನಲೆಯಲ್ಲಿ ದೇಶವ್ಯಾಪಿ ಕಾರ್ಮಿಕರು ಹೋರಾಟಕ್ಕೆ ಸಜ್ಜಾಗಬೇಕು, ನೋಯ್ಡಾ ಕಾರ್ಮಿಕರ ಹೋರಾಟಕ್ಕೆ ಬೆಂಬಲ ನೀಡಬೇಕೆಂದು. ಕಾರ್ಮಿಕರ ಮೇಲೆ ನಡೆಯುತ್ತಿರುವ ದೌರ್ಜನ್ಯವನ್ನು ಖಂಡಿಸಬೇಕು ಎಂದು ಕರೆ ನೀಡಿದರು. ಜಿಲ್ಲಾ ಜಂಟಿ ಕಾರ್ಯದರ್ಶಿ ಮುದ್ದುಕೃಷ್ಣ, ಮುಖಂಡರಾದ ಪಿ.ಎಸ್.ಸಂಧ್ಯಾ, ಹರೀಶ್, ಶಿವಾನಂದ್, ಅವಿನಾಶ್ ಮತ್ತಿತರರು ಹಾಜರಿದ್ದರು.

ಮೂವರು ಆಚಾರ್ಯರ ಆದರ್ಶ ಪಾಲಿಸಿದರೆ ದೇಶಕ್ಕೆ ಯಾವ ಕಾನೂನಿನ ಅವಶ್ಯಕತೆ ಇಲ್ಲ

● ಮೈಸೂರು ಜಿಲ್ಲಾ ನ್ಯಾಯಾಧೀಶೆ ಉಷಾರಾಣಿ ಅಭಿಮತ ● ವಕೀಲರ ಸಂಘದಿಂದ ವಿಶ್ವದಾರ್ಶನಿಕರ ದಿನಾಚರಣೆ

ಮೈಸೂರು, ಏ.21(ಜಿಎ)– ಶಂಕರಾಚಾರ್ಯ, ರಾಮಾನುಜಾಚಾರ್ಯ ಮತ್ತು ಮಧ್ವಾಚಾರ್ಯರ ತತ್ವ ಆದರ್ಶಗಳನ್ನು ಪಾಲಿಸಿದರೆ ದೇಶಕ್ಕೆ ಯಾವುದೇ ಬೇರೆ ಕಾನೂನು ಬೇಕಾಗಿಲ್ಲ ಎಂದು ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಉಷಾರಾಣಿ ಅಭಿಪ್ರಾಯಪಟ್ಟರು.

ಮೈಸೂರು ವಕೀಲರ ಸಂಘದ ವತಿಯಿಂದ ವಿಶ್ವದಾರ್ಶನಿಕರ ದಿನದ ಅಂಗವಾಗಿ ಮಂಗಳವಾರ ಸಂಘದ ಆವರಣದಲ್ಲಿ ಏರ್ಪಡಿಸಿದ್ದ ಶ್ರೀ ಶಂಕರಾಚಾರ್ಯ, ರಾಮಾನುಜಾಚಾರ್ಯ ಮತ್ತು ಮಧ್ವಾಚಾರ್ಯರ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಹಾದಾರ್ಶನಿಕರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಬಳಿಕ ಅವರು ಮಾತನಾಡಿದರು.

ಶಂಕರಾಚಾರ್ಯ, ರಾಮಾನುಜಾಚಾರ್ಯ ಮತ್ತು ಮಧ್ವಚಾರ್ಯರು ಹಿಂದೂ ಧರ್ಮದ ಸೈದ್ಧಾಂತಿಕ, ಆಧ್ಯಾತ್ಮಿಕ ಮತ್ತು ಸಾತ್ವಿಕತೆಗೆ ಅಡಿಪಾಯ ಹಾಕಿದರು. ಮೂರು ದಾರ್ಶನಿಕರು ಅಹಿಂಸೆ, ಭಕ್ತಿ ಚಳುವಳಿ, ಸಾಮಾಜಿಕ ಸಮಾನತೆಗೆ ಶ್ರಮಿಸಿದ್ದಾರೆ ಎಂದರು.

ಈ ಮೂವರ ತತ್ವಗಳು ಎಷ್ಟು ಪ್ರಸಿದ್ಧವಾಗಿದ್ದವು ಎಂದರೆ ಅಂದು ಭಾರತದಲ್ಲಿ ಪ್ರಚಲಿತದಲ್ಲಿದ್ದ ಬೌದ್ಧ ಮತ್ತು ಜೈನ ಧರ್ಮದ ಸಿದ್ಧಾಂತಗಳು ಕ್ರಮೇಣ ಕ್ಷೀಣಿಸುತ್ತ ಹೋದವು. ಮತ್ತೊಂದೆಡೆ ಜೈನ ಧರ್ಮ ಸಸ್ಯಾಹಾರ, ಅಹಿಂಸೆಯಿಂದ ಉಳಿಯಿತು. ರಾಜ ವಿಷ್ಣುವರ್ಧನ ರಾಮಾನುಜಾಚಾರ್ಯರ ತತ್ವಗಳಿಂದ ಪ್ರೇರಿತರಾಗಿ ಪ್ರೇರಣೆ ಪಡೆದು ವೈಷ್ಣವ ಧರ್ಮ ಸ್ವೀಕರಿಸಿದರು ಎಂದು ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಉಷಾರಾಣಿ ತಿಳಿಸಿದರು.


ಈ ರೀತಿಯ ಕಾರ್ಯಕ್ರಮ ಮಾಡುವುದರಿಂದ ಯುವಜನತೆಗೆ ಪ್ರೇರಣೆಯಾಗಲಿದೆ. ಇವುಗಳ ಬಗ್ಗೆ ಅರಿತುಕೊಂಡರೆ ಯುವ ಸಮೂಹಕ್ಕೆ ಒಳಿತು. ಆದರೆ ಬೆರಳೆಣಿಕೆಯಷ್ಟು ಯುವಕರು ಮಾತ್ರ ಇಂತಹ ವಿಷಯಗಳತ್ತ ಗಮನ ಹರಿಸುತ್ತಾರೆ. ಹೆಚ್ಚಿನ ಮಟ್ಟದಲ್ಲಿ ತೊಡಗಿಸಿಕೊಂಡರೆ ನಮ್ಮ ದೇಶದಲ್ಲಿ ಬೇರೆ ಕಾನೂನುಗಳ ಅಗತ್ಯವಿರುವುದಿಲ್ಲ ಎಂದರು.

ಕಾರ್ಯಕ್ರಮದಲ್ಲಿ ಹಿರಿಯ ವಕೀಲ ಕೆ.ಆರ್.ನಾಗರಾಜ ದಾರ್ಶನಿಕರ ತತ್ವಗಳ ಬಗ್ಗೆ ಉಪನ್ಯಾಸ ನೀಡಿದರು.

ಈ ಸಂದರ್ಭದಲ್ಲಿ ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಸ್.ಲೋಕೇಶ್, ಉಪಾಧ್ಯಕ್ಷ ಎಂ.ವಿ.ಚಂದ್ರಶೇಖರ್, ಕಾರ್ಯದರ್ಶಿ ಎ.ಜಿ.ಸುಧೀರ್, ಜಂಟಿ ಕಾರ್ಯದರ್ಶಿ ಚರಣ್ ರಾಜ್, ಮಹಿಳಾ ಜಂಟಿ ಕಾರ್ಯದರ್ಶಿ ಬಿ.ವಿ.ವಿನೋದ, ಖಜಾಂಚಿ ಹೆಚ್.ಬಿ. ಭರತ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರು ವಕೀಲರ ಸಂಘದ ವತಿಯಿಂದ ವಿಶ್ವದಾರ್ಶನಿಕರ ದಿನದ ಅಂಗವಾಗಿ ಸಂಘದ ಆವರಣದಲ್ಲಿ ಏರ್ಪಡಿಸಿದ್ದ ಶ್ರೀ ಶಂಕರಾಚಾರ್ಯ, ರಾಮಾನುಜಾಚಾರ್ಯ ಮತ್ತು ಮಧ್ವಾಚಾರ್ಯರ ಜಯಂತಿ ಆಚರಿಸಲಾಯಿತು. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಉಷಾರಾಣಿ ಮಹನೀಯರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ಗೌರವ ನಮನ ಸಲ್ಲಿಸಿದರು.



ಸಮಾಜ ಸೇವಕ ಶ್ರೀಕಾಂತ್‌ಗೆ ಸನ್ಮಾನ...

ಮೈಸೂರು ತಾಲೂಕು ಜಯಪುರ ಹೋಬಳಿಯ ಮುಳ್ಳೂರು ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿದ ಆಂಜನೇಯಸ್ವಾಮಿ ದೇವಾಲಯ ನಿರ್ಮಾಣಕ್ಕೆ 45 ಸಾವಿರ ರೂ. ಮೌಲ್ಯದ ಟೈಲ್ಸ್ ಕೊಡುಗೆ ನೀಡಿದ ಸಮಾಜ ಸೇವಕ ಎಸ್.ಶ್ರೀಕಾಂತ್ ಅವರನ್ನು ಗ್ರಾಮಸ್ಥರು ಸನ್ಮಾನಿಸಿದರು. ಗೋಪಾಲ ಪುರ ಗ್ರಾಪಂ ಮಾಜಿ ಅಧ್ಯಕ್ಷ ರಾಮಲಿಂಗಚಾರಿ, ಅರ್ಚಕ ಬಾಲ ಸುಬ್ರಹ್ಮಣ್ಯ, ಗ್ರಾಮದ ಮುಖಂಡರು ಉಪಸ್ಥಿತರಿದ್ದರು.

ದೇಶ – ವಿದೇಶ


ಮದುವೆ ಊಟ ಸೇವಿಸಿದ 400 ಮಂದಿ ಅಸ್ವಸ್ಥ; ಇದು ಬೇಸಿಗೆ ಪರಿಣಾಮ!



ಅಹಮದಾಬಾದ್: ಮದುವೆ ಸಮಾರಂಭವೊಂದರಲ್ಲಿ ಊಟ ಸವಿದು ಸುಮಾರು 400ಕ್ಕೂ ಹೆಚ್ಚು ಮಂದಿ ತೀವ್ರವಾಗಿ ಅಸ್ವಸ್ಥಗೊಂಡಿರುವ ಘಟನೆ ಗುಜರಾತ್‌ನ ದಾಹೋದ್ ಜಿಲ್ಲೆಯ ಅಬ್ಲೋಡ್ ಗ್ರಾಮದಲ್ಲಿ ನಡೆದಿದೆ. ಮದುವೆ ಸಮಾರಂಭದಲ್ಲಿ ಭೋಜನ ಮುಗಿಸಿ ಮನೆಗೆ ತೆರಳಿದ ಕೆಲವೇ ಗಂಟೆಗಳಲ್ಲಿ ಅತಿಥಿಗಳಲ್ಲಿ ವಾಕರಿಕೆ, ವಾಂತಿ, ಹೊಟ್ಟೆ ನೋವು ಕಾಣಿಸಿಕೊಂಡಿದ್ದು, ಕೂಡಲೇ ಅವರನ್ನು ಆಸ್ಪತ್ರೆಗೆ ದಾಖಲಿಸಲಾಯಿತು. ಆರೋಗ್ಯ ಇಲಾಖೆ ಅಧಿಕಾರಿಗಳು ಭೇಟಿ ನೀಡಿ, ಮದುವೆಯಲ್ಲಿ ತಯಾರಿಸಲಾಗಿದ್ದ ಆಹಾರದ ಮಾದರಿಗಳನ್ನು ಸಂಗ್ರಹಿಸಿ ಪರೀಕ್ಷೆಗೆ ಕಳುಹಿಸಿದ್ದಾರೆ. ವರದಿ ಬಂದ ನಂತರವಷ್ಟೇ ಘಟನೆಗೆ ನಿಖರ ಕಾರಣ ತಿಳಿಯಲಿದೆ ಎಂದು ಜಿಲ್ಲಾ ಮುಖ್ಯ ವೈದ್ಯಕೀಯ ಅಧಿಕಾರಿ ಮಾಹಿತಿ ನೀಡಿದ್ದಾರೆ.

ಈ ಘಟನೆಗೂ ಮೊದಲು, ತೆಹ್ರಿ ಜಿಲ್ಲೆಯ ಬಾದ್‌ಶಾಹಿ ಥೌಲ್ ಪ್ರದೇಶದಲ್ಲಿ ನಡೆದ ವಿವಾಹ ಸಮಾರಂಭದಲ್ಲಿ ಕಲುಷಿತ ಆಹಾರ ಸೇವಿಸಿದ ನಂತರ ಸುಮಾರು 36ಕ್ಕೂ ಹೆಚ್ಚು ಜನರು ಅಸ್ವಸ್ಥರಾಗಿದ್ದರು ಎಂದು ಅಧಿಕಾರಿಗಳು ತಿಳಿಸಿದ್ದರು. ಬೇಸಿಗೆಯ ತಾಪಮಾನ ಹೆಚ್ಚುತ್ತಿರುವುದರಿಂದ ಆಹಾರ ಪದಾರ್ಥಗಳು ಬೇಗನೆ ಹಾಳಾಗಿ, ವಿಷಪೂರಿತವಾಗುವ ಸಾಧ್ಯತೆ ಇರುತ್ತದೆ. ಇಂತಹ ಸಾಮೂಹಿಕ ಸಮಾರಂಭಗಳಲ್ಲಿ ಸ್ವಚ್ಛತೆ ಮತ್ತು ತಾಜಾ ಆಹಾರದ ಬಗ್ಗೆ ಹೆಚ್ಚಿನ ಗಮನಹರಿಸಬೇಕು.


ಆಪಲ್ ಸಿಇಓ ಟಿಮ್ ಕುಕ್ ರಾಜೀನಾಮೆ



ವಾಷಿಂಗ್ಟನ್: ವಲಸಿಗರ ವಿರುದ್ಧದ ಬಿಗಿಯಾದ ನೀತಿ, ಕಠಿಣ ಆಡಳಿತ ನಿಯಮ, ಇರಾನ್ ವಿರುದ್ಧ ಯುದ್ಧ ಮತ್ತಿತರ ಕಾರಣಗಳಿಂದ ಅಮೆರಿಕದಲ್ಲಿ ಅಸಮಾಧಾನದ ಹೊಗೆಯಾಡುತಿದ್ದು, ದೈತ್ಯ ತಂತ್ರಜ್ಞಾನ ಕಂಪನಿಗಳ ಪ್ರಮುಖ ಹುದ್ದೆಯಲ್ಲಿದ್ದವರು ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡುತ್ತಿದ್ದಾರೆ.

ಸೋಮವಾರವಷ್ಟೇ ಓಪನ್ ಎಐ ಸಿಟಿಓ ಹುದ್ದೆಗೆ ಭಾರತೀಯ ಮೂಲದ ಶ್ರೀನಿವಾಸ್ ನಾರಾಯಣನ್ ದಿಢೀರ್ ರಾಜೀನಾಮೆ ಘೋಷಿಸಿದ ಬೆನ್ನಲ್ಲೇ ಇದೀಗ ಪ್ರತಿಷ್ಠಿತ ಆಪಲ್ ಐಎನ್‌ಸಿ ಸಂಸ್ಥೆಯಲ್ಲಿ ಕಳೆದ 15 ವರ್ಷಗಳಿಂದ ಸಿಇಒ ಆಗಿದ್ದ ಟಿಮ್ ಕುಕ್, ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ. ದೀರ್ಘ–ಯೋಜಿತ ನಾಯಕತ್ವ ಬದಲಾವಣೆ ಭಾಗವಾಗಿ ಆಪಲ್‌ನ ನಿರ್ದೇಶಕರ ಮಂಡಳಿಯು ಈ ನಿರ್ಧಾರವನ್ನು ಅನುಮೋದಿಸಿದೆ. ಬೇಸಿಗೆ ಮುಗಿಯುವವರೆಗೂ ಟಿಮ್ ಕುಕ್ ಸಿಇಒ ಆಗಿ ಮುಂದುವರಿಯುತ್ತಾರೆ. ಸೆಪ್ಟೆಂಬರ್ 1 ರಿಂದ ಜಾನ್ ಟರ್ನಸ್ ಹೊಸ ಸಿಇಒ ಆಗಲಿದ್ದಾರೆ. ಅಲ್ಲಿಯವರೆಗೆ ಟಿಮ್ ಕುಕ್ ನಿಕಟವಾಗಿ ಕೆಲಸ ಮಾಡುತ್ತಾರೆ ಎಂದು ಕಂಪನಿ ತಿಳಿಸಿದೆ. ಈ ಕುರಿತು ಕಂಪನಿಗೆ ಪತ್ರ ಬರೆದಿರುವ ಕುಕ್, ಸೆಪ್ಟೆಂಬರ್‌ನಲ್ಲಿ ಸಿಇಒ ಕೆಲಸ ಬಿಟ್ಟು ಆಪಲ್‌ನ ಕಾರ್ಯನಿರ್ವಾಹಕ ಅಧ್ಯಕ್ಷನಾಗುತ್ತೇನೆ ಎಂದು ತಿಳಿಸಿದ್ದಾರೆ.

ಮಣಿಪುರ, ನೆರೆ ರಾಜ್ಯಗಳಲ್ಲಿ 5.5 ತೀವ್ರತೆಯ ಭೂಕಂಪ



ನವದೆಹಲಿ: ಮಣಿಪುರ ಮತ್ತು ಈಶಾನ್ಯ ಭಾರತದ ಕೆಲವು ಭಾಗಗಳಲ್ಲಿ ಮಂಗಳವಾರ ಬೆಳಗ್ಗೆ 6 ಗಂಟೆ ಸುಮಾರಿಗೆ ಪ್ರಬಲ ಭೂಕಂಪ ಸಂಭವಿಸಿದ್ದು, ಜನ ತೀವ್ರ ಆತಂಕಕ್ಕೆ ಒಳಗಾಗಿದ್ದಾರೆ.

ರಾಷ್ಟ್ರೀಯ ಭೂಕಂಪಶಾಸ್ತ್ರ ಕೇಂದ್ರದ ಮಾಹಿತಿ ಪ್ರಕಾರ ಮಣಿಪುರದ ನೋನಿ ಜಿಲ್ಲೆಯಲ್ಲಿ ಭೂಕಂಪದ ಕೇಂದ್ರಬಿಂದು ಗುರುತಿಸಲಾಗಿದ್ದು, ಭೂಕಂಪದ ತೀವ್ರತೆ 5.5ರಷ್ಟು ದಾಖಲಾಗಿದೆ. ಭೂಕಂಪದ ಕಂಪನಗಳು ನೆರೆಯ ರಾಜ್ಯಗಳಾದ ಅಸ್ಸಾಂ, ನಾಗಾಲ್ಯಾಂಡ್ ಮತ್ತು ಮೇಘಾಲಯದಲ್ಲೂ ಪ್ರಬಲವಾಗಿ ಅನುಭವಕ್ಕೆ ಬಂದಿವೆ. ಗಾಢ ನಿದ್ರೆಯಲ್ಲಿದ್ದ ಜನ ಕಂಪನದ ಅನುಭವವಾಗುತ್ತಿದ್ದಂತೆ ಭಯಗೊಂಡು ಮನೆಗಳಿಂದ ಹೊರಗೆ ಓಡಿ ಬಂದಿದ್ದಾರೆ. ಯಾವುದೇ ಪ್ರಾಣಾಪಾಯ ಸಂಭವಿಸಿದ ಬಗ್ಗೆ ಈವರೆಗೆ ವರದಿಯಾಗಿಲ್ಲ.

ಭೂಕಂಪ ಸಂಭವಿಸಿದ ಬೆನ್ನಲ್ಲೇ ಸ್ಥಳೀಯ ಆಡಳಿತಗಳು ಎಚ್ಚೆತ್ತುಕೊಂಡಿದ್ದು, ಯಾವುದೇ ತುರ್ತು ಪರಿಸ್ಥಿತಿ ಎದುರಿಸಲು ಸನ್ನದ್ಧವಾಗಿವೆ. ರಾಷ್ಟ್ರೀಯ ಭೂಕಂಪನ ಕೇಂದ್ರವು ಪರಿಸ್ಥಿತಿಯನ್ನು ನಿರಂತರವಾಗಿ ಗಮನಿಸುತ್ತಿದ್ದು, ಸಣ್ಣ ಪ್ರಮಾಣದ ನಂತರದ ಕಂಪನಗಳು ಸಂಭವಿಸುವ ಸಾಧ್ಯತೆಯಿರುವುದರಿಂದ ಜನರು ಜಾಗರೂಕರಾಗಿರುವಂತೆ ಸೂಚಿಸಲಾಗಿದೆ. ಇಂದು ಮುಂಜಾನೆಯೇ ಮ್ಯಾನ್ಮಾರ್‌ನಲ್ಲೂ 4.6 ತೀವ್ರತೆಯ ಭೂಕಂಪ ಸಂಭವಿಸಿದೆ ಎಂದು ತಿಳಿದುಬಂದಿದೆ.


ಜರ್ಮನಿಯ ಗುರುದ್ವಾರದಲ್ಲಿ ಎರಡು ಗುಂಪುಗಳ ಘರ್ಷಣೆ



ಬರ್ಲಿನ್: ಗುರುದ್ವಾರದ ನಿಧಿ ನಿರ್ವಹಣೆ ವಿವಾದದ ಹಿನ್ನೆಲೆಯಲ್ಲಿ ಹಿಂಸಾತ್ಮಕ ಘರ್ಷಣೆ ನಡೆದು, 11ಕ್ಕೂ ಹೆಚ್ಚು ಮಂದಿ ಗಾಯಗೊಂಡಿರುವ ಘಟನೆ ಜರ್ಮನಿಯ ಮೋರ್ಸ್‌ನ ಡ್ಯೂಸ್‌ಬರ್ಗ್‌ನಲ್ಲಿ ಸೋಮವಾರ ನಡೆದಿದೆ.

ಡ್ಯೂಸ್ ಬರ್ಗ್‌ನ ಗುರುದ್ವಾರದ ಧಾರ್ಮಿಕ ಆವರಣದಲ್ಲಿ ಒಟ್ಟು 40ಕ್ಕೂ ಹೆಚ್ಚು ಜನರ ಎರಡು ಗುಂಪುಗಳ ನಡುವೆ ಘರ್ಷಣೆ ನಡೆದಿದ್ದು, ಉಭಯ ಗುಂಪುಗಳು ಚಾಕು, ಕಿರ್ಪಾನ್ ಸೇರಿದಂತೆ ಚೂಪಾದ ವಸ್ತುಗಳನ್ನು ಬಳಸಿ ಪರಸ್ಪರ ಹಲ್ಲೆ ಮಾಡಿಕೊಂಡಿದ್ದಾರೆ. ಸದ್ಯ ಈ ವೀಡಿಯೊ ಸಾಮಾಜಿಕ ಜಾಲತಾಣದಲ್ಲಿ ಭಾರಿ ವೈರಲ್ ಆಗುತ್ತಿದೆ. ಈ ಘಟನೆ ಪೂರ್ವ ಯೋಜಿತವಾಗಿರಬಹುದು. ಏಕೆಂದರೆ, ಗುರುದ್ವಾರದಲ್ಲಿ ಸೇವೆ ಪ್ರಾರಂಭಕ್ಕೂ ಮೊದಲು, ಒಂದು ಗುಂಪಿನ ದಾಳಿಕೋರರು ಇದ್ದಕ್ಕಿದ್ದಂತೆ ಪೆಪ್ಪರ್ ಸ್ಪ್ರೇ ತೆಗೆದುಕೊಂಡು ತಮ್ಮ ಎದುರಾಳಿಗಳ ಮೇಲೆ ಸಿಂಪಡಿಸಿದ್ದು, ಇದಾದ ಬಳಿಕ ಅದೇ ಗುಂಪಿನ ಮತ್ತೊಬ್ಬರು ಗುಂಡು ಹಾರಿಸಿದ್ದಾರೆ. ಈ ಸಮಯದಲ್ಲಿ ನಾನು ಚಾಕುಗಳನ್ನು ಸಹ ನೋಡಿದ್ದೇನೆ. ಇನ್ನು, ದಾಳಿ ಪ್ರಾರಂಭವಾದಾಗ ಅಲ್ಲಿದ್ದ ಅನೇಕರು ಭಯಭೀತರಾಗಿ ದೇವಾಲಯದಿಂದ ಓಡಿಹೋಗಿದ್ದು, ಭಾರಿ ಅನಾಹುತ ತಪ್ಪಿದೆ. ಗುರುದ್ವಾರ ನಿಧಿಗಳ ನಿರ್ವಹಣೆ ಬಗ್ಗೆ ಭಿನ್ನಾಭಿಪ್ರಾಯವೇ ಇದಕ್ಕೆ ಕಾರಣವಿರಬಹುದು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ಈ ಬಗ್ಗೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಭಾರತೀಯ ಐಎಸ್‌ಐ ಕಾರ್ಯಕರ್ತರ ಬಂಧನ; ದಾಳಿ ಸಂಚು ವಿಫಲ



ನವದೆಹಲಿ: ಇಬ್ಬರು ಭಾರತೀಯ ಐಎಸ್‌ಐ ಕಾರ್ಯಕರ್ತರನ್ನು ದೆಹಲಿ ಪೊಲೀಸರ ವಿಶೇಷ ತಂಡ ಬಂಧಿಸಿದೆ. ಬಂಧಿತ ಆರೋಪಿಗಳನ್ನು ಮಧ್ಯಪ್ರದೇಶದ ಗ್ವಾಲಿಯರ್ ಮೂಲದ ರಾಜ್‌ವೀರ್(21) ಮತ್ತು ವಿವೇಕ್ ಬಂಜಾರ (19) ಎಂದು ಗುರುತಿಸಲಾಗಿದೆ. ಪಾಕಿಸ್ತಾನ ಮೂಲದ ದರೋಡೆಕೋರ ಮತ್ತು ಐಎಸ್‌ಐ ವಕ್ತಾರ ಶಹಜಾದ್ ಭಟ್ಟಿ ಸೂಚನೆಯಂತೆ ಕೆಲಸ ಮಾಡುತ್ತಿದ್ದ ಬಂಧಿತ ಆರೋಪಿಗಳು, ದೆಹಲಿ–ಎನ್‌ಸಿಆರ್ ಪ್ರದೇಶದಲ್ಲಿ ಗುಂಡಿನ ದಾಳಿ, ಗ್ರೆನೇಡ್ ದಾಳಿ ಮತ್ತು ಟಾರ್ಗೆಟೆಡ್ ಹತ್ಯೆಗಳನ್ನು ನಡೆಸಲು ಸಂಚು ರೂಪಿಸಿದ್ದರು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಆರೋಪಿಗಳು ಸಾಮಾಜಿಕ ಮಾಧ್ಯಮಗಳ ಮೂಲಕ ಯುವಕರನ್ನು ಐಎಸ್‌ಐಗೆ ನೇಮಕ ಮಾಡಿಕೊಂಡು ಅವರನ್ನು ದೆಹಲಿ–ಎನ್‌ಸಿಆರ್‌ನಲ್ಲಿ ಉದ್ದೇಶಿತ ಹಿಂಸಾಚಾರಕ್ಕೆ ನಿಯೋಜಿಸುತ್ತಿದ್ದರು ಎಂದು ಪೊಲೀಸ್ ಉಪ ಆಯುಕ್ತ(ವಿಶೇಷ ದಳ) ಪ್ರವೀಣ್‌ಕುಮಾರ್ ತ್ರಿಪಾಠಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಈ ಪ್ರದೇಶದಲ್ಲಿ ಗ್ರೆನೇಡ್ ದಾಳಿ ಮತ್ತು ಟಾರ್ಗೆಟೆಡ್ ಹತ್ಯೆ ನಡೆಸುವ ಸಂಚಿನ ಬಗ್ಗೆ ಮಾಹಿತಿ ದೊರೆತ ನಂತರ ಮಾರ್ಚ್ 31 ರಂದು ಈ ಸಂಬಂಧ ಪ್ರಕರಣ ದಾಖಲಿಸಿ, ತನಿಖೆ ಕೈಗೊಳ್ಳಲಾಗಿತ್ತು. ವಿವೇಕ್ ಬಂಜಾರನನ್ನು ಏ.16 ರಂದು ಗ್ವಾಲಿಯರ್‌ನ ದಾಬ್ರಾದಲ್ಲಿ ಪತ್ತೆಹಚ್ಚಿ ಬಂಧಿಸಲಾಯಿತು.

ಹೈದರಾಬಾದ್ ವಿರುದ್ಧ ತತ್ತರಿಸಿದ ಡೆಲ್ಲಿ!



ಸನ್‌ರೈಸರ್ಸ್ ಹೈದರಾಬಾದ್ ತಂಡದ ಆಟಗಾರರ ಸಂಭ್ರಮ.

ಹೈದರಾಬಾದ್, ಏ.21(ವಿವಿಹೆಚ್)– ಅಭಿಷೇಕ್ ಶರ್ಮಾ ಅಜೇಯ ಶತಕ, ಇಶಾನ್ ಮಲಿಂಗಾ ಮಾರಕ ದಾಳಿಯ ನೆರವನಿಂದ ಅತಿಥೇಯ ಸನ್‌ರೈಸರ್ಸ್ ಹೈದರಾಬಾದ್, ಪ್ರವಾಸಿ ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು 47 ರನ್‌ಗಳಿಂದ ಮಣಿಸಿತು. ಆ ಮೂಲಕ ಹ್ಯಾಟ್ರಿಕ್ ಗೆಲುವು ದಾಖಲಿಸಿತು.

ಇಲ್ಲಿನ ರಾಜೀವ್ ಗಾಂಧಿ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಐಪಿಎಲ್–2026ರ 31ನೇ ಲೀಗ್ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಎಸ್‌ಆರ್‌ಹೆಚ್ ನಿಗದಿತ 20 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ 242 ರನ್ ಕಲೆಹಾಕಿತು. ಈ ಬೃಹತ್ ಮೊತ್ತ ಬೆನ್ನತ್ತಲಾಗದೇ ಡೆಲ್ಲಿ 20 ಓವರ್‌ಗಳಲ್ಲಿ 9 ವಿಕೆಟ್ ಕಳೆದುಕೊಂಡು 195 ರನ್ ಗಳಿಸಲಷ್ಟೇ ಶಕ್ತವಾಯಿತು.

ಅಭಿಷೇಕ್ ಶರ್ಮಾ ವೈಭವ: ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಹೈದರಾಬಾದ್ ತಂಡಕ್ಕೆ ಭರ್ಜರಿ ಬ್ಯಾಟಿಂಗ್ ಪ್ರದರ್ಶನದಿಂದ ಅಭಿಷೇಕ್ ಶರ್ಮಾ ಬೃಹತ್ ಮೊತ್ತ ಕಲೆಹಾಕಲು ಸಹಕರಿಸಿದರು. ಆರಂಭದಲ್ಲಿ ನಿಧಾನಗತಿಯಲ್ಲಿ ಬ್ಯಾಟ್ ಬೀಸಿದ ಅವರು, ನಂತರ ಪಿಕ್‌ಅಪ್ ಶಾಟ್‌ಗಳ ಮೂಲಕ ಡಿಸಿ ಬೌಲರ್‌ಗಳನ್ನ ಮನಬಂದಂತೆ ದಂಡಿಸಿದರು. 10 ಬೌಂಡರಿ, 10 ಸಿಕ್ಸರ್ ಸಿಡಿಸಿದ ಯುವ ಬ್ಯಾಟರ್ ಟಿ20ಯಲ್ಲಿ ತಮ್ಮ 9ನೇ ಶತಕ ಬಾರಿಸಿ ಎಲ್ಲರ ಬೆರಗಾಗಿಸಿದರು. ಅವರು 68 ಎಸೆತಗಳಲ್ಲಿ ಅಜೇಯ 135 ರನ್ ಗಳಿಸಿದರು.

ಅಭಿಷೇಕ್‌ಗೆ ಸಾಥ್ ನೀಡಿದ ಹೆನ್ರಿಚ್ ಕ್ಲಾಸೆನ್ 13 ಎಸೆತಗಳಲ್ಲಿ ಅಜೇಯ 37 ರನ್ ಗಳಿಸಿದರು. ಉಳಿದಂತೆ ಟ್ರಾವಿಸ್ ಹೆಡ್ 37(26), ನಾಯಕ ಇಶಾನ್ ಕಿಶನ್ 25(13) ರನ್ ಕಲೆಹಾಕಿದರು. ಡೆಲ್ಲಿ ಪರ ನಾಯಕ ಅಕ್ಷರ್ ಪಟೇಲ್ ಒಂದು ವಿಕೆಟ್ ಕಿತ್ತರು.

ಈ ಬೃಹತ್ ಮೊತ್ತ ಬೆನ್ನತ್ತಿದ ಡೆಲ್ಲಿಗೆ ಪಥುಮ್ ನಿಸ್ಸಾಂಕ 8(6) ವಿಕೆಟ್ ಬೀಳುವ ಮೂಲಕ ಆರಂಭಿಕ ಆಘಾತವಾಯಿತು. ಈ ವೇಳೆ ಅರ್ಧಶತಕ ಜೊತೆಯಾಟ ನೀಡಿದ್ದ ಕೆ.ಎಲ್.ರಾಹುಲ್ 37(23), ನಿತೀಶ್ ರಾಣಾ 57(30) ಮೂರು ಬಾಲ್ ಅಂತರದಲ್ಲೇ ವಿಕೆಟ್ ಒಪ್ಪಿಸಿದರು. ಬಳಿಕ ಬಂದ ಮಿಲ್ಲರ್ ಗೋಲ್ಡನ್ ಡಕ್ ಆದರು. ಅಗ್ರ 5 ಬ್ಯಾಟರ್ ವಿಕೆಟ್ ಬೀಳುತ್ತಿದ್ದಂತೆ ಡೆಲ್ಲಿ ಸೋಲು ಬಹುತೇಕ ಖಚಿತವಾಯಿತು. ಹೀಗಿದ್ದರೂ ಸಮೀರ್ ರಿಜ್ವಿ 41(28), ಟ್ರಿಸ್ಟನ್ ಸ್ಟಬ್ಸ್ 27(16), ಅಲ್ಪ ಹೋರಾಟ ತೋರಿ ನಿರ್ಗಮಿಸಿದರು. ಉಳಿದಂತೆ ಅಶುತೋಷ್ ಶರ್ಮಾ 14(10), ನಾಯಕ ಅಕ್ಷರ್ ಪಟೇಲ್ 2(3), ಲುಂಗಿ ಎನ್‌ಗಿಡಿ ಗೋಲ್ಡನ್ ಡಕ್ ಹಾಗೂ ಕುಲ್ದೀಪ್ ಯಾದವ್ ಅಜೇಯ 1 ರನ್ ಗಳಿಸಿದರು.

ಹೈದರಾಬಾದ್ ಪರ ಇಶಾನ್ ಮಲಿಂಗಾ ಪ್ರಮುಖ 4 ವಿಕೆಟ್ ಕಿತ್ತರು. ಹರ್ಷ್ ದುಬೆ 3, ದಿಲ್ಶಾನ್ ಮಧುಶನಕ ಮತ್ತು ಶಕೀಬ್ ಹುಸೇನ್ ತಲಾ ಒಂದೊಂದು ವಿಕೆಟ್ ಪಡೆದು ಗಮನಸೆಳೆದರು.

ಎನ್‌ಸಿಪಿ ಅಧ್ಯಕ್ಷ ಶರದ್ ಪವಾರ್ ಆಸ್ಪತ್ರೆಗೆ ದಾಖಲು

ಮುಂಬೈ, ಏ.21– ರಾಷ್ಟ್ರೀಯತಾವಾದಿ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಮತ್ತು ರಾಜ್ಯಸಭಾ ಸಂಸದ ಶರದ್ ಪವಾರ್ ಅವರನ್ನು ನಿಯಮಿತ ಆರೋಗ್ಯ ತಪಾಸಣೆಗಾಗಿ ಮುಂಬೈನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. 85 ವರ್ಷದ ನಾಯಕರನ್ನು ಎರಡು ದಿನಗಳ ಹಿಂದೆ ಬ್ರೀಚ್ ಕ್ಯಾಂಡಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅವರು ಆರೋಗ್ಯ ತಪಾಸಣೆಗಾಗಿ ಆಸ್ಪತ್ರೆಯಲ್ಲಿದ್ದಾರೆ, ಗಂಭೀರವಾದದ್ದೇನೂ ಇಲ್ಲ ಎಂದು ಮೂಲಗಳು ತಿಳಿಸಿವೆ. ಪವಾರ್ ಇತ್ತೀಚೆಗೆ ವ್ಹೀಲ್‌ಚೇರ್‌ನಲ್ಲಿ ಕುಳಿತು ರಾಜ್ಯಸಭಾ ಸದಸ್ಯರಾಗಿ ಪ್ರಮಾಣ ವಚನ ಸ್ವೀಕರಿಸಿದ್ದರು. ಫೆಬ್ರವರಿ ಆರಂಭದಲ್ಲಿ, ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ಎದೆಯ ಸೋಂಕು ಮತ್ತು ನಿರ್ಜಲೀಕರಣದಿಂದಾಗಿ ಪುಣೆಯಲ್ಲಿ ಎರಡು ಬಾರಿ ಆಸ್ಪತ್ರೆಗೆ ದಾಖಲಾಗಿದ್ದರು.



ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು

PUBLIC NOTICE

NOTICE IS HEREBY GIVEN on behalf of my client Deeksha Manjunath, D/o Dr. Manjunath Nayak, Sri Manjunath Nursing Home, Near Balanjaneya Temple, Bangalore Road, Bellary-583101, and Rahul Walecha C/o Naresh Kumar Walecha, # E-101, Sector 27, Noida Gautam Buddha nagar Disrict, Uttar Pradesh State-201301 represent that they have a clear, valid, and marketable title to the said property, free from all encumbrances, liens, charges, mortgages, litigations, or any other claims whatsoever.

Any person(s) having any claim, interest, right, or objection in respect of the said property by way of sale, mortgage, lease, inheritance, gift, trust, lien, or any other legal proceedings are hereby requested to make the same known to the undersigned at the address mentioned below in writing, along with supporting documentary evidence, within 7 days from the date of this publication.

If no such objections or claims are received within the stipulated period, it shall be deemed that the property is free from all encumbrances, and my client will proceed with the purchase. Any claims received after the said period will not be considered and shall be deemed waived that they intends to purchase the immovable property (Residential Site) described in the Schedule below from its current owner(s) Smt. S. Sudha wife of C. Basavegowda, R/o. House No.218, 1st Stage, 4th Cross, Gangothri Layout, Mysuru City.

SCHEDULE

The Open site property bearing Residential Plot No.10, formed in N.A. and MUDA approved Sy. No.180/3 measuring 02 Acres 18 Guntas, as per Form-2 (Rule-20) Property Tax A-Register : E-Khatha No.8195797425, Ward No.5, situated at Hanchya village, Kasaba Hoball, Mysuru Taluq and district, within the Registration and Sub-Registration District of Mysuru, with the following measurements and boundaries:

MEASUREMENTS as per Form-2: East-West: 12.00 meters and North-South: 19.81 meters In total 237.72 sq. meters. **BOUNDARIES:** East: Plot No.11, North : Road, West : Plot No.09, South: Plot No.17, 18 and 19.

Sd/- M.Bharath B.Com., LL.B., Nithisha Law Associates, Office : #2852, Room No.4, 2nd Floor, 2nd Main, 4th Cross, Jayanagar, Mysuru-570014. Mob:9481532055